Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–11 | ಮಾರ್ಚ್ 10–16, 2025 | ಪುಟ 16 | ರೂ.10/–
Volume-19 | Issue-11 | March 10-16, 2025 | Pages:16 | Price: 10/-

ಅಂತರರಾಷ್ಟ್ರೀಯ ಮಹಿಳಾ ದಿನ:



ವಿಶೇಷ ಲೇಖನಗಳು

ಮಹಿಳಾ ಸಮಾನತೆ : ಸವಾಲುಗಳ ಸರಮಾಲೆ



ಹಸುಗೂಸುಗಳನ್ನೂ ಕೊಲ್ಲುವ ಕೋಮು ದಾಳಿ

ರೈತರು ಹಾಗೂ ಶ್ರಮಜೀವಿಗಳಿಗೆ ನಿರಾಶೆ:

ಕಾರ್ಪೋರೇಟ್ ಸುಲಿಗೆಗೆ ಮಣೆ ಹಾಕುವ ಬಜೆಟ್







ಅಸಹಜ ಸಾವುಗಳೂ ಸಾಮಾಜಿಕ ಸಂವೇದನೆಯೂ

ನಾ ದಿವಾಕರ

ಆಧುನಿಕ ಭಾರತವನ್ನು ಶತಮಾನಗಳಿಂದ ಕಾಡುತ್ತಲೇ ಬಂದಿರುವ ಸಾಮಾಜಿಕ ವ್ಯಸನ ಎಂದರೆ ಜಾತಿ-ಮತದ ಅಸ್ಮಿತೆಗಳು ಮತ್ತು ಅವುಗಳ ಸುತ್ತ ಹಬ್ಬಿಕೊಂಡಿರುವಂತಹ ಧಾರ್ಮಿಕ ಶ್ರದ್ಧಾನಂಬಿಕೆಗಳು. ತಳಮಟ್ಟದ ಸಾಮಾಜಿಕ-ಸಾಂಸ್ಕೃತಿಕ ಬದುಕಿನಲ್ಲಿ ಜನರು ರೂಢಿಸಿಕೊಳ್ಳುವ ಸಹಬಾಳ್ವೆಯ ಚಿಂತನೆಗಳನ್ನು ಭಂಗಗೊಳಿಸುವುದರಲ್ಲಿ ಈ ಜಾತಿ-ಮತ-ಭಾಷೆಯ ಅಸ್ಮಿತೆಗಳು ಕಾರ್ಯೋನ್ಮುಖವಾಗಿರುತ್ತವೆ. ಮನುಷ್ಯರನ್ನು ಮನುಷ್ಯರಂತೆಯೇ ನೋಡುವ ವ್ಯವಧಾನವನ್ನೇ ಶಿಥಿಲಗೊಳಿಸುವ ನಿರ್ದಿಷ್ಟ ಅಸ್ಮಿತೆಗಳು, ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸೃಷ್ಟಿಸುವ ನಿರ್ಲಿಪ್ತತೆಯ ಕಾರಣದಿಂದಲೇ, ಸಮಾಜದಲ್ಲಿ ಸಂಭವಿಸುವ ಯಾವುದೇ ಅಹಿತಕರ, ಅಮಾನುಷ, ಅಸಹಜ, ಘಾತುಕ ಬೆಳವಣಿಗೆಗಳು, ವಿಶಾಲ ಸಮಾಜದ ಸಂವೇದನೆಗಳನ್ನು ವಿಚಲಿತಗೊಳಿಸುವುದಿಲ್ಲ. ಇದಕ್ಕೆ ಅಡ್ಡಿಯಾಗುವಂತಹ ಶ್ರೇಷ್ಠತೆಯ ಕಲ್ಪನೆ ಮತ್ತು ಪಾವಿತ್ರ್ಯತೆಯ ಭಾವನೆಗಳು, ಜನಸಾಮಾನ್ಯರ ನಡುವೆ ಗೋಡೆಗಳನ್ನೂ, ಸಮಾಜದೊಳಗೆ ಬಿರುಕುಗಳನ್ನೂ ಮೂಡಿಸುತ್ತಲೇ ಹೋಗುತ್ತವೆ.

ಇಲ್ಲಿ ಗಮನಿಸಬಹುದಾದ ಇನ್ನೊಂದು ವಿದ್ಯಮಾನ ಎಂದರೆ ಸಾಮಾಜಿಕ-ಆರ್ಥಿಕ ಅಸಮಾನತೆಯನ್ನು ಆರ್ಥಿಕತೆಯ ಪರಿಣಾಮ ಎಂದು ಭಾವಿಸದೆ, ಅದು ಮನುಷ್ಯ ಸಮಾಜವು 'ಪಡೆದುಕೊಂಡು ಬಂದಂತಹ' ಅವಕಾಶ ಎಂದು ಕಲ್ಪಿಸಿಕೊಳ್ಳುವ ಪ್ರಾಚೀನ-ಪಾರಂಪರಿಕ ನಂಬಿಕೆ. ಹಣೆಬರಹ, ವಿಧಿ ಇತ್ಯಾದಿ ಅರ್ಥಹೀನ ಪದಗಳ ಮೂಲಕ ತಳಸಮಾಜದ ಅಕ್ಷರಸ್ತರನ್ನೂ ಆವರಿಸಿರುವ ಈ ಪರಿಕಲ್ಪನೆಗಳು ಸಮಾಜದೊಳಗಿನ ಹಸಿವು, ಬಡತನ ಮತ್ತು ಅದರಿಂದಾಗುವ ಸಾವು ನೋವುಗಳನ್ನು ಸ್ವಾಭಾವಿಕ ಪ್ರಕ್ರಿಯೆಯಂತೆ ಪರಿಗಣಿಸುವಂತೆ ಮಾಡುತ್ತವೆ. ಹಾಗಾಗಿ ಹಸಿವಿನಿಂದ ಸಂಭವಿಸುವ ಸಾವುಗಳು 'ಸಹಜ ಸಾವು' ಎನಿಸಿಬಿಡುತ್ತದೆ. 'ದುಡಿದು ತಿನ್ನಬೇಕಿತ್ತು' ಎನ್ನುವ ದಾರ್ಷ್ಟ್ಯದ ಮಾತುಗಳು ಮೇಲ್ಪದರದ ಸಮಾಜದಿಂದ ಬರುವ ಪ್ರತಿಕ್ರಿಯೆ. ಆದರೆ ದುಡಿಮೆಯ ಹಾದಿಗಳನ್ನು ಮುಚ್ಚಿಹಾಕುವ ವ್ಯವಸ್ಥೆಯ ಕ್ರೌರ್ಯ ಈ ಸುಶಿಕ್ಷಿತ-ಆಧುನಿಕ ಸಮಾಜದ ಗ್ರಹಿಕೆಗೂ ನಿಲುಕುವುದಿಲ್ಲ.

ಅಸಹಜ ಸಾವು ಎಂಬ ಮಿಥ್ಯೆ

ಡಿಜಿಟಲ್ ಯುಗದಲ್ಲೂ ಭಾರತದಲ್ಲಿ ನಮಗೆ ದಿನಬೆಳಗಾದರೆ ಗೋಚರಿಸುತ್ತಿರುವ 'ಅಸಹಜ ಸಾವುಗಳು' ಸಮಾಜಘಾತುಕರ ದುಷ್ಕೃತ್ಯಗಳಿಂದ ಸಂಭವಿಸುತ್ತಿವೆ. ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಕೊಲೆ, ಸಾಮಾಜಿಕ ಬಹಿಷ್ಕಾರದ ಅಂತಿಮ ನ್ಯಾಯ 'ಮರ್ಯಾದಾ ಹತ್ಯೆ', ಅಸ್ಪೃಶ್ಯತೆಯ ಆಚರಣೆಯಲ್ಲಿ ಸಂಭವಿಸುವ ಹತ್ಯೆಗಳು,

> **ಯಾವುದೇ ಸಮಾಜವಾದರೂ ತನ್ನ ಔನ್ನತ್ಯವನ್ನು ಕಾಣಬೇಕಿರುವುದು, ಅದು ಲೌಕಿಕ ಜನಜೀವನದ ನಡುವೆ ರೂಢಿಸಿಕೊಳ್ಳುವ ಸಂವೇದನಾಶೀಲ ಹಾಗೂ ಮನುಜ ಸೂಕ್ಷ್ಮ ಸಂಬಂಧಗಳಲ್ಲಿ. ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚನೆಯ ಸಂದರ್ಭದಲ್ಲಿ ಭ್ರಾತೃತ್ವದ (Fraternity) ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದೇ ಅಲ್ಲದೆ, ಭಾರತದಂತಹ ಸ್ತರೀಯ ಅಸಮಾನತೆ (Graded inequality) ಇರುವ ಶ್ರೇಣೀಕೃತ ಸಮಾಜದಲ್ಲಿ ಸಮಾಜಗಳಲ್ಲಿ ಪರಸ್ಪರ ಮನುಜ ಸಂಬಂಧಗಳನ್ನು ಗಟ್ಟಿಗೊಳಿಸುವುದರಿಂದಲೇ ಭಾರತ ತನ್ನ ಏಕತೆ ಮತ್ತು ಅಖಂಡತೆಯನ್ನು ಸಾಕಾರಗೊಳಿಸಬಹುದು ಎಂದು ದೃಢವಾಗಿ ನಂಬಿದ್ದರು. ಭಾರತೀಯ ಸಮಾಜದಲ್ಲಿ ವರ್ತಮಾನದಲ್ಲೂ ತನ್ನ ಗಟ್ಟಿ ಬೇರುಗಳನ್ನು ಉಳಿಸಿಕೊಂಡು ಬಂದಿರುವ ಶ್ರೇಣೀಕೃತ ಜಾತಿ ವ್ಯವಸ್ಥೆಯ ವಿಭಿನ್ನ ಮಜಲುಗಳು ಈ ಭ್ರಾತೃತ್ವದ ಕಲ್ಪನೆಗೆ ಬಹುದೊಡ್ಡ ಸವಾಲಾಗಿಯೇ ಇರುತ್ತದೆ.**

ವರದಕ್ಷಿಣೆ-ಕೌಟುಂಬಿಕ ಕಿರುಕುಳಗಳಿಂದ ಸಂಭವಿಸುವ ಮಹಿಳೆಯರ ಕಗ್ಗೊಲೆ ಇವೆಲ್ಲವನ್ನೂ ಕಾನೂನಾತ್ಮಕವಾಗಿ 'ಅಪರಾಧ' ಎಂಬ ವಿಶಾಲ ಕ್ಯಾನ್ವಾಸ್‌ನೊಳಗಿಟ್ಟು ನೋಡಲಾಗುತ್ತದೆ. ಆದರೆ ಈ ಸಾವುಗಳು ಸ್ವಾಭಾವಿಕವಂತೂ ಅಲ್ಲ ಅಲ್ಲವೇ? ಹಾಗಾದರೆ ಈ ಅಮಾನುಷತೆಗೆ ಉತ್ತರದಾಯಿಗಳು ಯಾರು? 'ನಿರ್ಭಯ' ಹಂತಕರಿಗೆ ಶಿಕ್ಷೆಯಾಯಿತು ಎಂದು ಸಂಭ್ರಮಿಸುವಷ್ಟರಲ್ಲೇ 'ಅಭಯ' ಎದುರಾಗುತ್ತಾಳೆ. ಖೈರ್ಲಾಂಜಿ ವಿಸ್ಮೃತಿಗೆ ಜಾರುವ ಮುನ್ನವೇ ಕೊಪ್ಪಳ ಸಂಭವಿಸುತ್ತದೆ. ಅಧುನಿಕ ಸಮಾಜ ಈ ಸಾವುಗಳನ್ನು ಅಸಹಜ ಎಂದು ನಿರ್ವಚಿಸುವುದಿಲ್ಲ ಆದರೆ ತಾತ್ವಿಕವಾಗಿ ಅದು ವಾಸ್ತವ ಅಲ್ಲವೇ?

ಇದೇ ಸರಪಳಿಯ ಮತ್ತೊಂದು ಕೊಂಡಿಯನ್ನು ಕೋಮುಗಲಭೆಗಳಲ್ಲಿ, ಹತ್ಯಾಕಾಂಡಗಳಲ್ಲಿ, ಮತಾಂಧ ಕಾವಲು ಪಡೆಗಳಿಂದ ನಡೆಯುವ ಅಮಾಯಕರ ಹತ್ಯೆಗಳಲ್ಲಿ ಕಾಣಬೇಕಾಗಿದೆ. 1984ರ ಸಿಖ್ ಹತ್ಯಾಕಾಂಡದ ರೂವಾರಿ ಸಜ್ಜನ್ ಕುಮಾರ್ ಅವರಿಗೆ ಜೀವಾವಧಿ ಶಿಕ್ಷೆಯಾಗಿರುವುದು ಸಮಾಧಾನಕರ. ಆದರೆ 1970ರಲ್ಲಿ ನಡೆದ ನೆಲ್ಲಿ ಹತ್ಯಾಕಾಂಡದಿಂದ, ಬಾಬ್ರಿಮಸೀದಿಯ ಧ್ವಂಸ-ಗೋದ್ರಾ-ಗುಜರಾತ್-ಮುಝಫರ್‌ಪುರ-ದೆಹಲಿಯವರೆಗೂ ದೃಷ್ಟಿಹಾಯಿಸಿದರೆ, ನಮಗೆ ಕಾಣುವುದು ಸಾವಿರಾರು ಅಮಾಯಕ ಜನರ ಮಾರಣಹೋಮ. ಈ ಸಾವುಗಳನ್ನು ಕಾನೂನಾತ್ಮಕವಾಗಿ 'ಸಾಮೂಹಿಕ ಅಪರಾಧ' ಎಂದು ನಿರ್ವಚಿಸಲಾಗುವುದಾದರೂ, ಸತ್ತ ವ್ಯಕ್ತಿಯ ಮತೀಯ, ಧಾರ್ಮಿಕ, ಜಾತೀಯ ಅಸ್ಮಿತೆಗಳು ಅಪರಾಧದ ತೀವ್ರತೆಯನ್ನೂ ನಿರ್ಧರಿಸುತ್ತವೆ. ಈ ಅಸಹಜ ಸಾವುಗಳಲ್ಲಿ ಹೆಣಗಳನ್ನು ಅಸ್ಮಿತೆಯ ಆಧಾರದಲ್ಲಿ ಹೆಕ್ಕಿ ತೆಗೆದು ನೋಡುವ ಒಂದು ಆಧುನಿಕ ಪರಂಪರೆಯನ್ನೂ ನಾವು ಮೈಗೂಡಿಸಿಕೊಂಡಿದ್ದೇವೆ.

ಸ್ವತಂತ್ರ ಭಾರತದ ಮತ್ತೊಂದು ವಿಡಂಬನೆ ಮತ್ತು ವೈಚಿತ್ರ್ಯ ಎಂದರೆ ನಮ್ಮ ಇಡೀ ಸಮಾಜ ಮತ್ತು ಸರ್ಕಾರಗಳೂ ಸಹ, ದುಡಿಮೆಯನ್ನು ಅರಸಿ ತಮ್ಮ ಮೂಲ ನೆಲೆಯಿಂದ ನಿರ್ಗಮಿಸಿ ಕೌಟುಂಬಿಕ ಬದುಕಿನಿಂದ ವಂಚಿತರಾಗುವ ವಲಸೆ ಕಾರ್ಮಿಕರತ್ತ ತಿರುಗಿ ನೋಡಲು ಸ್ವಾತಂತ್ರ್ಯದ 70 ವರ್ಷಗಳ ನಂತರ ಕೋವಿಡ್-19 ಸಾಂಕ್ರಾಮಿಕ ಬರಬೇಕಾಯಿತು, ಸಾವಿರಾರು ಕಿಲೋಮೀಟರ್ ದೂರದಿಂದ ಬಂದು ತಮ್ಮದಲ್ಲದ ನೆಲದಲ್ಲಿ ಬೆವರು ಸುರಿಸಿ, ಆರ್ಥಿಕ ವೃದ್ಧಿಗೆ ನೆರವಾಗುವ ಈ ಶ್ರಮಜೀವಿಗಳಿಗೆ 'ತವರು' ಎಂಬ ಕಲ್ಪನೆಯೇ ಇರುವುದಿಲ್ಲ. ಈ ಶ್ರಮಿಕರ ಸಾವು ನೋವುಗಳು ಆಧುನಿಕ ಭಾರತದ ಅರಿವಿಗೆ ಬಂದಿದ್ದು ಕೋವಿಡ್ ಸೃಷ್ಟಿಸಿದ ಭೀಕರ ಸನ್ನಿವೇಶದ ಮೂಲಕ. ಈ ಸಂದರ್ಭದಲ್ಲಿ ನೂರಾರು ಕಿಲೋಮೀಟರ್ ನಡೆದು ನಿತ್ರಾಣರಾಗಿ, ಹಸಿವನಿಂದ ಬಳಲಿ ಸತ್ತವರ ಸಂಖ್ಯೆ ಇಂದಿಗೂ ನಮಗೆ ಲಭ್ಯವಾಗಿಲ್ಲ. 2020ರಲ್ಲಿ ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ರೈಲು ಹಳಿಯ ಮೇಲೆ ಮಲಗಿದ್ದ 16 ಕಾರ್ಮಿಕರು ರೈಲಿನಡಿ ಸಿಕ್ಕು ಮೃತಪಟ್ಟಿದ್ದನ್ನು ಬಹುಶಃ ನಾವು ಮರೆತಿರಲಿಕ್ಕಿಲ್ಲ. ಇಂತಹ ಹಲವು ಸಾವುಗಳನ್ನೂ ನಾವು 'ಅಸಹಜ' ಎಂದು ಪರಿಗಣಿಸಲಿಲ್ಲ.

ಮಾನವ ಸಮಾಜ ಏಕೆ ಹೀಗೆ? ಈ ಪ್ರಶ್ನೆ ನಮ್ಮ ಪ್ರಜ್ಞೆಯನ್ನು ಕಾಡಲೇಬೇಕಲ್ಲವೇ? ಕಳೆದ ಮೂರ್ನಾಲ್ಕು ದಶಕಗಳ ಸಾಂಸ್ಕೃತಿಕ ರಾಜಕಾರಣದ ಪರಿಸರದಲ್ಲಿ ಭಾರತೀಯ ಸಮಾಜದ ಮಾನವೀಯ ಮಾಲ್ಯಗಳು ಜಡಗಟ್ಟಿರುವ ಹಿನ್ನೆಲೆಯಲ್ಲಿ ನೋಡಿದಾಗ, ಸಹಮಾನವನ ಸಾವನ್ನು ಸಂಭ್ರಮಿಸುವ ಒಂದು ವಿಕೃತ ಸಂಸ್ಕೃತಿಯನ್ನೂ ಗಮನಿಸಬೇಕಿದೆ. ಅತ್ಯಾಚಾರಿಗಳನ್ನು, ಕೊಲೆಗಡುಕರನ್ನು ವೈಭವೀಕರಿಸಿ ವಿಜೃಂಭಿಸುವ, ಸನ್ಮಾನಿಸುವ ಹೊಸ ಪರಂಪರೆಗೆ 21ನೇ ಶತಮಾನ ಸಾಕ್ಷಿಯಾಗಿದೆ. ಈ ತಣ್ಣನೆಯ ಬೌದ್ಧಿಕ ಕ್ರೌರ್ಯದ ಮತ್ತೊಂದು ಆಯಾಮವನ್ನು, ನಮ್ಮ ಸುತ್ತಲೂ ನಡೆಯುವ ಅಮಾನುಷ ಹತ್ಯೆಗಳಿಗೆ ಸಮಾಜದ ಒಂದು ವರ್ಗ ಮೌನ ವಹಿಸುವುದರಲ್ಲೂ ಕಾಣಬಹುದು. ಈ ಎರಡೂ ಪ್ರವೃತ್ತಿಗಳಿಗೆ ತಾತ್ವಿಕವಾಗಿ ಯಾವ ವ್ಯತ್ಯಾಸವೂ ಇರಲಾರದು. ನೆರೆಯಲ್ಲೇ ಸಂಭವಿಸುವ ಸಹಜೀವಿಗಳ ಸಾವಿಗೆ ವಿಚಲಿತರಾಗದೆ ನಿರ್ಲಿಪ್ತರಾಗಿರಲು ಜಾತಿ, ಮತ, ಲಿಂಗ ಮತ್ತು ಸಾಮಾಜಿಕ ಅಂತಸ್ತು ಇವೆಲ್ಲವೂ ಕಾರಣವಾಗುತ್ತವೆ.

ಸಾಮಾಜಿಕ ಸೂಕ್ಷ್ಮತೆ ಮತ್ತು ಸ್ಪಂದನೆ

ಈ ಸಾವುಗಳು ಏಕೆ ನಮ್ಮ ಸಾಮಾಜಿಕ ಪ್ರಜ್ಞೆಯನ್ನು ವಿಚಲಿತಗೊಳಿಸುವುದಿಲ್ಲ? ಈ ಪ್ರಶ್ನೆ ನಮ್ಮನ್ನು ಕಾಡಬೇಕಿದೆ. ಇದಕ್ಕೆ ಹಲವು ಆಯಾಮಗಳಲ್ಲಿ ಕಾರಣಗಳನ್ನು ಶೋಧಿಸಬಹುದು.

ಮೊದಲನೆಯದಾಗಿ, ಧಾರ್ಮಿಕ ಉತ್ಸವ, ಸಮಾವೇಶ ಮತ್ತು ಕುಂಭಮೇಳದಂತಹ ಪ್ರಸಂಗಗಳಲ್ಲಿ ಸಂಭವಿಸುವ ಕಾಲ್ತುಳಿತ ಪ್ರಕರಣಗಳನ್ನು ಗುರುತಿಸಬಹುದು. ಇತ್ತೀಚಿನ ಕುಂಭಮೇಳದಲ್ಲಿ ಮಡಿದ 30ಕ್ಕೂ ಹೆಚ್ಚು ಜನ, ಕಳೆದ ವರ್ಷ ಉತ್ತರ ಪ್ರದೇಶದ ಹಾಥ್ರಸ್‌ನಲ್ಲಿ ಬೋಲೆಬಾಬಾ ಸಮಾವೇಶದಲ್ಲಿ ಮಡಿದ 121 ಜನರು, ತಿರುಪತಿ ದೇವಸ್ಥಾನದ ದರ್ಶನದ ವೇಳೆ ಸತ್ತ 8 ಜನರು ಹೀಗೆ ಧಾರ್ಮಿಕ/ಆಧ್ಯಾತ್ಮಿಕ ಸಮಾವೇಶಗಳಲ್ಲಿ ಭಕ್ತಾದಿಗಳು, ಹಿಮಾಲಯ ತಪ್ಪಲಿನ ಬದರಿ-ಕೇದಾರದಲ್ಲಿ 'ಅಸಹಜ' ಸಾವುಗಳು ಸಂಭವಿಸುತ್ತಲೇ ಇರುತ್ತವೆ. ಈ ಸಾವುಗಳಿಗೆ ಅಲ್ಲಿ ನೆರೆಯುವ ಭಕ್ತಾದಿಗಳನ್ನೇ ಕಾರಣ ಮಾಡಲಾಗುತ್ತದೆಯೇ ಹೊರತು, ಯಾವುದೇ ಸಂಸ್ಥೆ ಅಥವಾ ಧಾರ್ಮಿಕ ಗುಂಪು ಉತ್ತರದಾಯಿಯಾಗುವುದಿಲ್ಲ. ಸಮಾಜದ ದೃಷ್ಟಿಯಲ್ಲೂ ಈ ಸಾವುಗಳಿಗೆ, ದೆಹಲಿ ರೈಲ್ವೆ ನಿಲ್ದಾಣದಲ್ಲಿ ಸಂಭವಿಸಿದ ಸಾವುಗಳಿಗೂ ಸಹ, ನಮ್ಮ ಸಮಾಜ ಉತ್ತರದಾಯಿತ್ವವನ್ನು ಅಪೇಕ್ಷಿಸುವುದಿಲ್ಲ. ಏಕೆಂದರೆ ಇಲ್ಲಿ ನೆರೆದು, ಮಡಿದ ಜನರ ಶ್ರದ್ಧಾಭಕ್ತಿಗಳು, ಅದರಿಂದುಂಟಾಗುವ ಉನ್ಮಾದ ಇವೇ ಸಾವಿಗೆ ಕಾರಣವಾಗಿಬಿಡುತ್ತದೆ.

ಎರಡನೆಯದಾಗಿ, ಆರ್ಥಿಕ ದುಸ್ಥಿತಿಯಿಂದ ಮತ್ತು ಅಸಮಾನತೆಯ ಯಾತನೆಯನ್ನು ತಡೆಯಲಾಗದೆ ಸಾವನ್ನಪ್ಪುವ ತಳಸಮಾಜದ ಅಸಂಖ್ಯಾತ ಜನರ ಸಾವುಗಳಿಗೆ ಯಾರನ್ನೂ ದೂಷಿಸುವುದಿಲ್ಲ. ಲಕ್ಷಾಂತರ ರೈತರ ಆತ್ಮಹತ್ಯೆ ಒಂದು ನಿದರ್ಶನ. ಸಮಾಜದಲ್ಲಿ ಅಸಮಾನತೆ ಏಕೆ ಹೆಚ್ಚಾಗುತ್ತದೆ, ದುಡಿಯುವ ದೈಹಿಕ ಶಕ್ತಿ ಇರುವವರೂ ಏಕೆ ಅಕಾಲಿಕ ಮರಣಕ್ಕೆ ತುತ್ತಾಗುತ್ತಾರೆ? ಇದಕ್ಕೆ ಕಾರಣ ನಮ್ಮ ಸರ್ಕಾರಗಳು ಅನುಸರಿಸುವ ಆರ್ಥಿಕ ನೀತಿಗಳು ಎನ್ನುವುದು ನಿರ್ವಿವಾದ ಸತ್ಯ. ಆದರೆ ಯಾವುದೇ ಕಾಲಘಟ್ಟದಲ್ಲೂ ಈ ಸಾವುಗಳಿಗೆ ಸರ್ಕಾರಗಳು ಉತ್ತರದಾಯಿಯಾಗುವುದನ್ನು ಚರಿತ್ರೆಯಲ್ಲಿ ಕಾಣಲಾಗುವುದಿಲ್ಲ. ಇತ್ತೀಚೆಗೆ ತೆಲಂಗಾಣದ ಶ್ರೀಶೈಲಂ ಎಡದಂಡೆ ನಾಲೆಯ ಸುರಂಗ ನಿರ್ಮಾಣದ ವೇಳೆ ಎಂಟು ಕಾರ್ಮಿಕರು ಸಿಲುಕಿದ್ದಾರೆ. ಹಿಮಾಲಯ ತಪ್ಪಲಿನ ಚಮೋಲಿಯಲ್ಲಿ ಹಿಮಪಾತಕ್ಕೆ ಸಿಲುಕಿ ಪಾರು ಮಾಡಲಾಗಿದ್ದರೂ, ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ. 2021ರಲ್ಲಿ ಇದೇ ಪ್ರದೇಶದಲ್ಲಿ 15 ಕಾರ್ಮಿಕರು ಮೃತಪಟ್ಟಿದ್ದರು.

ಇಂತಹ ಅವಘಡಗಳಲ್ಲಿ ಸಾವನ್ನಪ್ಪುವ ಕಾರ್ಮಿಕರು ಬಹುತೇಕ ವಲಸೆ ಬಂದವರಾಗಿರುತ್ತಾರೆ. ತೆಲಂಗಾಣದ ಘಟನೆಯಲ್ಲಿ ಇನ್ನೂ ಭೂಗತರಾಗಿರುವ ಎಂಟು ಜನರೂ ಜಾರ್ಖಂಡ್, ಬಿಹಾರ ಮೊದಲಾದ ಉತ್ತರ ರಾಜ್ಯಗಳಿಗೆ ಸೇರಿದವರು. ಸಾವಿರಾರು ಕಿಲೋಮೀಟರ್ ದೂರದಿಂದ ದುಡಿಮೆಗಾಗಿ ವಲಸೆ ಬರುವ ಈ ಕಾರ್ಮಿಕರಿಗೆ ದಿನಕ್ಕೆ ಎಂಟು ಗಂಟೆಯ ದುಡಿಮೆಗೆ 300 ರಿಂದ 600 ರೂ. ದಿನಗೂಲಿ ನೀಡಲಾಗುತ್ತದೆ. ಇದು ಸರ್ಕಾರವೇ ನಿಗದಿ ಪಡಿಸಿರುವ ಮಿತಿಗಿಂತಲೂ ಕಡಿಮೆ. ಜೊತೆಗೆ ಈ ಕಾರ್ಮಿಕರಿಗೆ ಸೂಕ್ತ ಸುರಕ್ಷತೆಯ

ಪುಟ 4 ಕ್ಕೆ

ದಿಗಂತ್ ನಾಪತ್ತೆ ಪ್ರಕರಣ: ಕೋಮು ಬಣ್ಣ ಹಚ್ಚಿದ ಶಾಸಕರ ಮೇಲೆ ಕಾನೂನು ಕ್ರಮಕ್ಕೆ ಆಗ್ರಹ

ದಿಗಂತ್ ನಾಪತ್ತೆ ಪ್ರಕರಣಕ್ಕೆ ಕೋಮುಬಣ್ಣ ಹಚ್ಚಿ ಮತೀಯ ಸಂಘರ್ಷಕ್ಕೆ ಯತ್ನಿಸಿದ ಶಾಸಕರುಗಳಾದ ಭರತ್ ಶೆಟ್ಟಿ, ಹರೀಶ್ ಪೂಂಜಾ ಸಹಿತ ಸಂಘಪರಿವಾರದ ಪ್ರಮುಖರ ಮೇಲೆ ಸುಮಟೋ ಮೊಕದ್ದಮೆ ಹೂಡಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ದ.ಕ. ಜಿಲ್ಲಾ ಎಸ್.ಪಿ. ಅವರನ್ನು "ದ.ಕ. ಜಿಲ್ಲಾ ಜಾತ್ಯಾತೀತ ಪಕ್ಷಗಳು ಹಾಗೂ ಸಂಘಟನೆಗಳ ಜಂಟಿ ವೇದಿಕೆ" ಯ ನಿಯೋಗ ಭೇಟಿ ಮಾಡಿ ಮನವಿ ಸಲ್ಲಿಸಿತು.



ಬಂಟ್ವಾಳ ತಾಲೂಕು ಫರಂಗಿಪೇಟೆಯ ನಿವಾಸಿ, ಹದಿಹರೆಯದ ವಿದ್ಯಾರ್ಥಿ ದಿಗಂತ್ ನಾಪತ್ತೆ ಪ್ರಕರಣ ವಿದ್ಯಾರ್ಥಿಯ ಸುರಕ್ಷಿತ ಪತ್ತೆಯ ಮೂಲಕ ಸುಖಾಂತ್ಯ ಕಂಡಿದೆ. ದಿಗಂತ್ ಪತ್ತೆಗೆ ಅಪಾರ ಶ್ರಮ ವಹಿಸಿದ ಪೊಲೀಸ್ ಇಲಾಖೆಯ ಕ್ರಮಗಳನ್ನು ನಾವು ಶ್ಲಾಘಿಸಿದ್ದಾರೆ.

ಆದರೆ, ವಿದ್ಯಾರ್ಥಿ ದಿಗಂತ ನಾಪತ್ತೆಯ ವಿಚಾರ ಬಹಿರಂಗಗೊಂಡ ಕ್ಷಣದಿಂದ ಬಜರಂಗ ದಳ ಸಹಿತ ಸಂಘಪರಿವಾರದ ಸಂಘಟನೆಗಳು ಹಾಗು ಬಿಜೆಪಿ ಪ್ರಮುಖರು ಪ್ರಕರಣಕ್ಕೆ ಕೋಮು ಬಣ್ಣ ಬಳಿದು ಎರಡು ಸಮುದಾಯಗಳ ನಡುವೆ ಸಂಘರ್ಷ ಹುಟ್ಟುಹಾಕುವ, ಅಪನಂಬಿಕೆಯನ್ನು ಹೆಚ್ಚಿಸುವ ಕೆಲಸ ನಡೆಸಿದ್ದಾರೆ. ಯಾವ ಸಣ್ಣ ಆಧಾರವೂ ಇಲ್ಲದೆ, "ವಿದ್ಯಾರ್ಥಿ ದಿಗಂತ್ ನನ್ನುಅಪಹರಣ ನಡೆಸಲಾಗಿದೆ, ಮುಸ್ಲಿಂ ಸಮುದಾಯ ಈ ಘಟನೆಯ ಹಿಂದಿದೆ" ಎಂದು ಕತೆಕಟ್ಟಲಾಗಿದೆ ಎಂದು ನಿಯೋಗ ದೂರಿದೆ.

ಮಾಧ್ಯಮಗಳಿಗೂ ಅದೇ ಅರ್ಥದ ಹೇಳಿಕೆ ನೀಡಲಾಗಿದೆ. ಅದರ ಜೊತೆಗೆ ಫರಂಗಿಪೇಟೆ ಪರಿಸರದಲ್ಲಿ ಮುಸ್ಲಿಂ ಬಾಹುಳ್ಯದ ಪ್ರದೇಶಗಳನ್ನೇ ಗುರಿಯಾಗಿಸಿ "ಅಮ್ಮೆಮಾರ್ ಪ್ರದೇಶದಲ್ಲಿ ಬಹು ಸಂಖ್ಯಾತರು ಓಡಾಡುವುದೇ ಕಷ್ಟವಾಗಿದೆ, ಅಲ್ಲಿ ಓಡಾಡುವವರಿಗೆ ಜೀವ ಭಯ ಒಡ್ಡಲಾಗುತ್ತದೆ, ಗಾಂಜಾ ವ್ಯಸನಿಗಳು, ಪೆಡ್ಲರ್ ಗಳು, ಕ್ರಿಮಿನಲ್ ಗಳು ಅಮ್ಮೆಮಾರ್ ನಲ್ಲಿ ತುಂಬಿಕೊಂಡಿದ್ದಾರೆ" ಎಂದು ಇಡಿಯಾಗಿ ಒಂದು ಊರು ಹಾಗೂ ಸಮುದಾಯವನ್ನು ಕ್ರಿಮಿನಲೀಕರಣಗೊಳಿಸಿ ತೀರಾ ಕೆಟ್ಟದಾಗಿ ಆರೋಪಿಸಲಾಗಿದೆ. ಮತೀಯ ದ್ವೇಷ, ಪೂರ್ವಾಗ್ರಹಗಳನ್ನು ಹುಟ್ಟಿಸಲು ಯತ್ನಿಸಲಾಗಿದೆ.

ಇಷ್ಟು ಸಾಲದು ಎಂಬಂತೆ, ನಾಪತ್ತೆ ಪ್ರಕರಣದ ಸರಿಯಾದ ತನಿಖೆಗೆ ಅವಕಾಶ ಕೊಡದೆ ಮತೀಯತೆಯ ಆಧಾರದಲ್ಲಿ ಪ್ರತಿಭಟನೆ, ಬಂದ್ ನಡೆಸಿ ಪೊಲೀಸ್ ಇಲಾಖೆಯನ್ನು ತೀರಾ ಒತ್ತಡಕ್ಕೆ ಸಿಲುಕಿಸಲಾಗಿದೆ, ಪೊಲೀಸ್ ಇಲಾಖೆಯನ್ನು "ಕ್ರಿಮಿನಲ್ ಸಮುದಾಯದ ಪಕ್ಷಪಾತಿಗಳು" ಎಂದು ವಿನಾಕಾರಣ ಆರೋಪಿಸಲಾಗಿದೆ. ಫರಂಗಿ ಪೇಟೆ ಬಂದ್ ದಿವಸ ಮಂಗಳೂರು ಉತ್ತರ ಹಾಗೂ ಬೆಳ್ತಂಗಡಿಯ ಬಿಜೆಪಿ ಶಾಸಕರುಗಳಾದ ಭರತ್ ಶೆಟ್ಟಿ, ಹರೀಶ್ ಪೂಂಜಾ ಹಾಗೂ ಸಂಘ ಪರಿವಾರದ ಸ್ಥಳೀಯ ಮುಂದಾಳುಗಳು ದ್ವೇಷ ಭಾಷಣ ಮಾಡಿದ್ದಾರೆ.

ಮತೀಯ ಉದ್ವಿಗ್ನತೆ ಕೆರಳಿಸುವ ರೀತಿಯಲ್ಲಿ ಮುಸ್ಲಿಂ ಸಮುದಾಯದ ಮೇಲೆ ಆಧಾರ ರಹಿತ ಆರೋಪಗಳನ್ನು ಮಾಡಿದ್ದಾರೆ. ಆ ಮೂಲಕ ಧರ್ಮಗಳ ನಡುವೆ ಸಂಘರ್ಷವನ್ನು ಹುಟ್ಟಿಸಲು ಯತ್ನಿಸಿದ್ದಾರೆ. ಇಡೀ ಮುಸ್ಲಿಂ ಸಮುದಾಯವನ್ನು ಕ್ರಿಮಿನಲ್ ಸಮುದಾಯ ಎಂಬ ಭಾವನೆ ಹುಟ್ಟುವ ರೀತಿಯ ಮಾತುಗಳನ್ನು ಆಡಿದ್ದಾರೆ. ಮುಸ್ಲಿಂ ಬಾಹುಳ್ಯದ ಪ್ರದೇಶಗಳು ಅಪಾಯಕಾರಿ ವಲಯ, ಅಪರಾಧಿಗಳ ನೆಲೆ ಎಂಬ ಆರೋಪ ಮಾಡಿದ್ದಾರೆ. ಮುಸ್ಲಿಮರು ಮಾತ್ರ ಗಾಂಜಾ, ಡ್ರಗ್ಸ್ ದಂಧೆ ನಡೆಸುತ್ತಾರೆ ಎಂಬರ್ಥದ ಮಾತುಗಳನ್ನು ಆಡಿದ್ದಾರೆ.

ಇದು ನೆಲದ ಕಾನೂನು ಹಾಗು ಸಂವಿಧಾನದ ಜಾತ್ಯಾತೀತ ಆಶಯಗಳಿಗೆ, ನಿಯಮಗಳಿಗೆ ವಿರುದ್ಧ ವಾಗಿದೆ. ಮೊದಲೆ ಕೋಮು ಸೂಕ್ಷ್ಮ ಪ್ರದೇಶಗಳು ಎಂದು ಗುರುತಿಸಲಾಗಿರುವ ಫರಂಗಿ ಪೇಟೆ, ಬಂಟ್ವಾಳ, ಮಂಗಳೂರಿನಲ್ಲಿ ಇಂತಹ ನಡೆಗಳು ದೊಡ್ಡ ಸಂಘರ್ಷಕ್ಕೆ, ಅನಾಹುತಕ್ಕೆ ಕಾರಣವಾಗುವ ಸಾಧ್ಯತೆಗಳು ಹೆಚ್ಚು. ಪ್ರಕರಣಕ್ಕೆ ಮತೀಯ ಬಣ್ಣ ಹಚ್ಚಿದ, ಒಂದು ಸಮುದಾಯವನ್ನು ಅಪಾರಾಧಿ ಸಮುದಾಯ ಎಂದು ಹಣೆಪಟ್ಟಿ ಕಟ್ಟಿದ, ಮುಸ್ಲಿಂ ಬಾಹುಳ್ಯದ ಊರುಗಳು ಕ್ರಿಮಿನಲ್ ಗಳು ತುಂಬಿದ ಅಪಾಯಕಾರಿ ವಲಯಗಳು ಎಂದು ಆರೋಪ ಹೊರಿಸಿದೆ.

ಕೋಮು ಸಂಘರ್ಷಕ್ಕೆ ಪ್ರಚೋದಿಸಿದ ಶಾಸಕರುಗಳಾದ ಭರತ್ ಶೆಟ್ಟಿ, ಹರೀಶ್ ಪೂಂಜಾ, ಹಾಗೂ ಬಜರಂಗದಳದ ಭರತ್ ಕುಂಬ್ಡೇಲು ಮತ್ತಿತರರ ಮೇಲೆ ಪೊಲೀಸ್ ಇಲಾಖೆ ಸ್ವಯಂ ಪ್ರೇರಣೆಯಿಂದ ಮೊಕದ್ದಮೆ ಹೂಡಬೇಕು, ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು "ದಕ್ಷಿಣ ಕನ್ನಡ ಜಿಲ್ಲಾ ಜಾತ್ಯಾತೀತ ಪಕ್ಷಗಳು ಹಾಗೂ ಸಂಘಟನೆಗಳ ಜಂಟಿ ವೇದಿಕೆ" ಯ ಪ್ರಮುಖರ ನಿಯೋಗ ಆಗ್ರಹಿಸಿದೆ.

ನಿಯೋಗದಲ್ಲಿ ವೇದಿಕೆಯ ಸಂಚಾಲಕ, ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ, ಕಾಂಗ್ರೆಸ್ ರಾಜ್ಯ ವಕ್ತಾರ ಎಮ್.ಜಿ. ಹೆಗ್ಡೆ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಶೇಖರ್ ಬಿ., ಆಮ್ ಆದ್ಮಿಯ ಎಸ್.ಎಲ್. ಪಿಂಟೊ, ಮುಸ್ಲಿಂ ಒಕ್ಕೂಟದ ಅಧ್ಯಕ್ಷರಾದ ಮಾಜಿ ಮೇಯರ್ ಕೆ. ಅಶ್ರಫ್, ಕರ್ನಾಟಕ ಪ್ರಾಂತ ರೈತ ಸಂಘದ ಕೆ.ಯಾದವ ಶೆಟ್ಟಿ, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಸದಾಶಿವ ಪಡುಬಿದ್ರೆ, ಸಾಮರಸ್ಯ ಮಂಗಳೂರಿನ ಮಂಜುಳಾ ನಾಯಕ್, ಎಐಟಿಯುಸಿ ಮುಂದಾಳು ಎಚ್.ವಿ. ರಾವ್, ಕಾರ್ಮಿಕ ಮುಂದಾಳುಗಳಾದ ವಿ. ಕುಕ್ಯಾನ್, ಸೀತಾರಾಮ ಬೇರಿಂಜೆ, ಡಿವೈಎಫ್ಐ ನ ಬಿ.ಕೆ. ಇಮ್ತಿಯಾಝ್, ಸಂತೋಷ್ ಬಜಾಲ್, ಜನವಾದಿ ಮಹಿಳಾ ಸಂಘಟನೆಯ ಜಯಂತಿ ಶೆಟ್ಟಿ, ಪ್ರಮೀಳಾ ಕೆ., ಎಸ್ಎಫ್ಐ ನ ವಿನುಷ ರಮಣ, ಸಮುದಾಯ ರಾಜ್ಯ ಕಾರ್ಯದರ್ಶಿ ಮನೋಜ್ ವಾಮಂಜೂರು, ವಿವಿಧ ಸಂಘಟನೆಗಳ ಮುಂದಾಳುಗಳಾದ ಸರೋಜಿನಿ ಬಂಟ್ವಾಳ, ಕರುಣಾಕರ ಮಾರಿಪಳ್ಳ, ಸಮರ್ಥ್ ಭಟ್, ನೀತ್ ಶರಣ್, ಯೋಗಿತಾ ಮುಂತಾದವರು ಉಪಸ್ಥಿತರಿದ್ದರು.

ಕೊರಗಜ್ಜ ತುಳುನಾಡಿನ ಜನಪದ ನಾಯಕ

ಕೊರಗಜ್ಜ ತುಳುನಾಡಿನ ಜನಪದ ನಾಯಕ. ಕೊರಗಜ್ಜನ ಸಮುದಾಯವಾದ ಕೊರಗರು ಬಹುಷ ಭಾರತ ದೇಶದಲ್ಲೆ ಅತಿ ಹೆಚ್ಚು ಜಾತಿ ಶೋಷಣೆ, ದೌರ್ಜನ್ಯಕ್ಕೆ ಒಳಗಾದ ಸಮುದಾಯ. ಈ ಸಮುದಾಯ ಈಗ ಅಳಿವಿನಂಚಿನಲ್ಲಿದೆ. ಕೊರಗರ ಸರಾಸರಿ ಆಯಸ್ಸು ಸುಮಾರು 40 ವರ್ಷ. ಈ ಸಮುದಾಯದ ಸಾಂಸ್ಕತಿಕ ನಾಯಕ ಕೊರಗ ತನಿಯ(ಕೊರಗಜ್ಜ) ಅಸಮಾನತೆಯ ವಿರುದ್ದ ಧ್ವನಿ ಎತ್ತಿ ಬಲಿದಾನ ಆದವರು. ಆ ತರುವಾಯ ಕಾರಣಿಕ ದೈವವಾಗಿ ತುಳುನಾಡಿನಲ್ಲಿ ಆರಾಧಿಸಲ್ಪಡುತ್ತಿರುವವರು. ತುಳುನಾಡಿನ ಶೂದ್ರ ಸಮುದಾಯಗಳು ಕೊರಗಜ್ಜನನ್ನು ಆರಾಧಿಸುತ್ತವೆ. ಹರಕೆ ಹೊತ್ತುಕೊಳ್ಳುತ್ತವೆ.

ಕೊರಗಜ್ಜನ ಸನ್ನಿಧಾನದಲ್ಲಿ ದ್ವೇಷಕ್ಕೆ ಆಸ್ಪದ ಇಲ್ಲ. ಧರ್ಮ ಭೇದಕ್ಕೂ ಅವಕಾಶ ಇಲ್ಲ. ಎಲ್ಲರನ್ನೂ ಪ್ರೀತಿಯಿಂದ ಕಾಣುವ, ನಂಬಿ ಬಂದವರನ್ನು ತಾರತಮ್ಯ ಇಲ್ಲದೆ ಕೊರಗಜ್ಜ ಕಾಪಾಡುತ್ತಾನೆ ಎಂಬುದು ಪ್ರತೀತಿ. ಕೊರಗಜ್ಜ ದೈವದಲ್ಲಿ ಆಕ್ರೋಶ, ಸಿಟ್ಟಿಗೆ, ಕೋಪಕ್ಕೆ ಅವಕಾಶ ಇಲ್ಲ. ನೋವುಂಡವರಿಗೆ ಸಾಂತ್ವನಕ್ಕಷ್ಟೆ ಸ್ಥಾನ. ಇದು ನಂಬಿಕೆ.

ಇಂತಹ ಕೊರಗಜ್ಜನ ಆದಿಸ್ಥಳದಲ್ಲಿ (ಕುತ್ತಾರು)ಬಜರಂಗ ದಳ ದ್ವೇಷದ ವೇದಿಕೆ ನಿರ್ಮಿಸಿದೆ. ಸೂಲಿಬೆಲೆಯನ್ನು ಕರೆಸಿ ಮುಸ್ಲಿಮರನ್ನು ದ್ವೇಷಿಸುವ, ತೀರಾ ಕೊಳಕಾದ ಭಾಷಣ ಮಾಡಿಸಿದೆ. ಧರ್ಮ ದ್ವೇಷದಿಂದ ಕುರುಡಾದ ಯುವಕರನ್ನು ಸೇರಿಸಿ ಈ ಸಮಾಜವನ್ನು ಒಡೆಯುವ ಭಾಷಣಕ್ಕೆ ಕೇಕೆ ಹಾಕಿಸಿದೆ. ಇದು ಕೊರಗಜ್ಜನ ಆದಿಕ್ಷೇತ್ರಕ್ಕೆ ಕಪ್ಪು ಚುಕ್ಕೆ. ಕೊರಗಜ್ಜನ ನ್ಯಾಯ, ಪ್ರೀತಿ, ಸಮಾನತೆಯ ಆಶಯಗಳಿಗೆ ಕಳಂಕ. ಕೊರಗ ಸಮುದಾಯ ಯಾವತ್ತೂ ಧರ್ಮ ದ್ವೇಷದ ಕಾರ್ಯದಲ್ಲಿ ಭಾಗಿಯಾಗಿಲ್ಲ. ಬಹುಷ, ಕರಾವಳಿಯಲ್ಲಿ ಕೋಮು ಘರ್ಷಣೆಗಳಲ್ಲಿ ಭಾಗಿಯಾಗದ ಏಕೈಕ ಸಮುದಾಯ ಕೊರಗ ಸಮುದಾಯ. ಈಗ, ಅವರ ಸಾಂಸ್ಕೃತಿಕ, ಜನಪದ ನಾಯಕನ ಪವಿತ್ರ ಕ್ಷೇತ್ರದಲ್ಲಿ ನಿಂತು ಇಂತಹ ಮತೀಯ ಸಂಘರ್ಷದ ಕಿಡಿ ಹಚ್ಚುವ, ಮುಸ್ಲಿಂ ದ್ವೇಷದ ಭಾಷಣಗಳನ್ನು ಮೊಳಗಿಸಲಾಗಿದೆ.

ಮುಂದಕ್ಕೆ ಇದು ಇನ್ನಷ್ಟು ಕೆಟ್ಟ ಬೆಳವಣಿಗೆಗಳಿಗೆ ಕಾರಣ ಆದರೂ ಅಚ್ಚರಿ ಇಲ್ಲ. ಕೊರಗಜ್ಜನ ಆದಿ ಕ್ಷೇತ್ರದ ಆಡಳಿತ ಸಮಿತಿಯಲ್ಲಿ ಆ ಪ್ರದೇಶದ ಗಣ್ಯರು, ಸಾಮಾಜಿಕ ಮುಂದಾಳುಗಳೆಲ್ಲಾ ಇದ್ದಾರೆ. ಇಂತಹ ಘಟನೆಗಳಿಗೆ ಅವರು ಆಸ್ಪದಕೊಡಬಾರದಿತ್ತು. ಕ್ಷೇತ್ರದ ಗೌರವಕ್ಕೆ ಕುಂದುಂಟಾಗಲು ಬಿಡಬಾರದಿತ್ತು. ಈಗಲಾದರು ಆಡಳಿತ ಸಮಿತಿ ಎಚ್ಚೆತ್ತುಕೊಳ್ಳಬೇಕು. ಕೊರಗಜ್ಜನ ಆದಿಕ್ಷೇತ್ರವನ್ನು ದುರ್ಬಳಕೆ ಮಾಡಿರುವ ಕುರಿತು ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಇದು ತುಳನಾಡಿನ ನ್ಯಾಯಪರ ಜನಗಳ ಆಗ್ರಹ.

–ಮುನೀರ್ ಕಾಟಿಪಳ್ಳ

ಅರ್ಥಿಕತೆ ತಳಹದಿಯನ್ನು ಖಾಸಗೀಕರಿಸುವ ಅಭಿವೃದ್ಧಿಯ ಹಗಲು ಕನಸಿನ ಬಜೆಟ್: ಸಿಪಿಐ(ಎಂ) ಟೀಕೆ

ಹೆಚ್ಚು ಹೆಚ್ಚು ಸಾಲದ ಮೇಲೆ ಅವಲಂಬಿಸಿ ಸುಮಾರು 19,000 ಕೋಟಿ ರೂ.ಗಳ ಕೊರತೆ ಬಜೆಟ್ ರೈತ–ಕಾರ್ಮಿಕರ ಕಲ್ಯಾಣವನ್ನು ಕಡೆಗಣಿಸಿದೆ. ಇವತ್ತಿನ ತೀವ್ರ ಬೆಲೆ ಏರಿಕೆಗೆ ಅನುಗುಣವಾಗಿ ಜೀವನಾಶ್ಯಕ ಕನಿಷ್ಠ ಕೂಲಿ ಖಾತರಿಪಡಿಸದೇ, ಕನಿಷ್ಠ ದುಡಿಮೆ ಅವಧಿಯನ್ನು ಮಾಲೀಕರ ಮರ್ಜಿಗೆ ಅನುಗುಣವಾಗಿ 12–14 ಗಂಟೆಗಳಷ್ಟು ಅಮಾನವೀಯಗೊಳಿಸಿರುವ ಬಂಡವಾಳ ಸ್ನೇಹಿ ನೀತಿಗಳನ್ನು ಅನುಸರಿಸುವ ಪ್ರಸ್ತಾಪಗಳ ಮೂಲಕ ಅರ್ಥಿಕತೆಯ ತಳಹದಿಯನ್ನು ಧ್ವಂಸಗೊಳಿಸುತ್ತಾ ಅಭಿವೃದ್ಧಿಯ ಹಗಲು ಕನಸು ಕಾಣುತ್ತಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಟುವಾಗಿ ಟೀಕಿಸಿದೆ.

ಕಾರ್ಮಿಕರ ಹಕ್ಕುಗಳ ಮೇಲೆ ಪರಿಣಾಮ

ಕೈಗಾರಿಕಾ ಮಾಲೀಕರು ಎಸುಗುವ ಕಾನೂನು ಉಲ್ಲಂಘನೆಗಳನ್ನು ಕ್ರಿಮಿನಲ್ ಅಪರಾಧ ವ್ಯಾಪ್ತಿಯಿಂದ ಹೊರಗಿಡುವ ಪ್ರಸ್ತಾಪವನ್ನು ಈ ಬಜೆಟ್‌ನಲ್ಲಿ ಮಾಡಲಾಗಿದೆ. ಇದರ ಪರಿಣಾಮ ಕಾರ್ಮಿಕರ ಹಕ್ಕುಗಳ ಮೇಲೆ ಗಂಭೀರವಾದ ಪರಿಣಾಮಗಳು ಉಂಟಾಗಲಿವೆ. ಸಿದ್ದರಾಮಯ್ಯ ಸರ್ಕಾರದ ಈ ನಿಲುವು ಅತ್ಯಂತ ಕಾರ್ಮಿಕ ವಿರೋಧಿಯಾಗಿದೆ.

ಹಳಸಲು ಉದಾರೀಕರಣ ಕ್ರಮಗಳು

ಕೇಂದ್ರ ಸರ್ಕಾರದ ತೆರಿಗೆ ಹಂಚಿಕೆ ಹಾಗೂ ಅನುದಾನ ವಿತರಣೆಯಲ್ಲಿ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳು ದೊಡ್ಡ ಪ್ರಮಾಣದ ತಾರತಮ್ಯ ಹಾಗೂ ಅನ್ಯಾಯವನ್ನು ಅನುಭವಿಸುತ್ತಿದೆ ಎಂಬುದು ವಾಸ್ತವ. ಇಂತಹ ಹಣಕಾಸು ಸಂಕಟದ ಪರಿಸ್ಥಿತಿಯನ್ನು ಸುಮಾರು ಶೇ. 52ರಷ್ಟು ಸ್ವಂತ ತೆರಿಗೆ ಮಾತ್ರ ಹೊಂದಿರುವಂತಹ ಮತ್ತು ಹೆಚ್ಚು ಹೆಚ್ಚು ಸಾಲದ ಮೇಲೆ ಅವಲಂಬನೆ ಮೂಲಕ ಸರಿಪಡಿಸಲು ಸಾಧ್ಯವಿಲ್ಲ. ಇರುವ ಸೀಮಿತ ಸಂಪನ್ಮೂಲಗಳನ್ನು ದುಡಿಯುವ ಜನತೆಯ ಕೊಳ್ಳುವ ಶಕ್ತಿ ಹೆಚ್ಚಿಸಲು ಸಮರ್ಥವಾಗಿ ಬಳಸಿಕೊಳ್ಳಬೇಕಾಗುತ್ತದೆ. ಬೆಲೆ ಏರಿಕೆ, ನಿರುದ್ಯೋಗ, ಕೃಷಿ ಬಿಕ್ಕಟ್ಟು ನಿವಾರಣೆ ಮತ್ತು ಕಾರ್ಮಿಕ ಸ್ನೇಹಿ ಕ್ರಮಗಳ ಮೂಲಕ ದುಡಿಯುವ ಜನರ ಕಲ್ಯಾಣವನ್ನು ಸಾಧಿಸದೇ ಖಾಸಗೀಕರಣ ಹಾಗೂ ಖಾಸಗಿ ಸಹಭಾಗಿತ್ವದ ಕ್ರಮಗಳ ಮೂಲಕ ಅದೇ ಹಳಸಲು ಉದಾರೀಕರಣ ಕ್ರಮಗಳು ಅರ್ಥಿಕತೆಯ ತಳಹದಿಯನ್ನು ದುರ್ಬಲಗೊಳಿಸುತ್ತವೆ.

ಕನ್ನಡ ಸರ್ಕಾರಿ ಶಾಲೆಗಳನ್ನು ಮುಚ್ಚುವಂತಹ ನಿರ್ಧಾರ

ಪ್ರತಿ ಗ್ರಾಮಗಳ ಸರ್ಕಾರಿ ಶಾಲೆಗಳನ್ನು ಪುನಶ್ಚೇತನ ಮಾಡದೇ ಬಹುತೇಕ ಅತಿಥಿ ಶಿಕ್ಷಕರನ್ನೇ ಆಶ್ರಯಿಸಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲಾಗುತ್ತಿದೆ. ಇದು ಕನ್ನಡ ಸರ್ಕಾರಿ ಶಾಲೆಗಳು ಮುಚ್ಚುವಂತಹ ನಿರ್ಧಾರವಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸದೇ ಆರೋಗ್ಯ ಕುಟುಂಬ ಕಲ್ಯಾಣದ ತಾಯಿ–ಶಿಶು ಮರಣ ಪ್ರಮಾಣ ಇಳಿಕೆ ಸಾಧಿಸುವ ಗುರಿ ಇಟ್ಟುಕೊಳ್ಳಲಾಗಿದೆ. ವಸತಿಯಂತಹ ಬಹಳ ಪ್ರಮುಖವಾದ ಕ್ಷೇತ್ರದಲ್ಲಿಯೂ ಖಾಸಗಿ ಸಹಭಾಗಿತ್ವವನ್ನು ಪ್ರತಿಪಾದಿಸಲಾಗಿದೆ. ಕನಿಷ್ಠ ದುಡಿಮೆ ಅವಧಿಯನ್ನು ಎಂಟು ಗಂಟೆಗೆ ಇಳಿಕೆ ಮಾಡಬೇಕೆಂಬ, ಕಾರ್ಮಿಕ–ರೈತ ಪರ ನೀತಿಗಳನ್ನು ಜಾರಿಗೊಳಿಸಬೇಕೆಂಬ ಆಗ್ರಹಗಳನ್ನು ನಿರ್ಲಕ್ಷಿಸಿ, ಈ ಬಜೆಟ್‌ನಲ್ಲಿ ಬಂಡವಾಳಶಾಹಿಗಳ ಹಿತರಕ್ಷಣೆಗೆ ಅಧ್ಯತೆ ನೀಡಲಾಗಿದೆ.

ಖಾಸಗಿ ಸಹಭಾಗಿತ್ವಕ್ಕೆ ಒತ್ತು

ಕೃಷಿ ಬಿಕ್ಕಟ್ಟು, ಗ್ರಾಮೀಣ ನಿರುದ್ಯೋಗಕ್ಕೆ ಪರಿಹಾರದಂತಹ ಸುಸ್ಥಿರ ಕ್ರಮಗಳನ್ನು ಅನುಸರಿಸದೇ ನಗರೀಕರಣ ವಿಶೇಷವಾಗಿ ಬೆಂಗಳೂರು ನಗರ ಕೇಂದ್ರಿತ ಖಾಸಗಿ ಸಹಭಾಗಿತ್ವದ ಮೂಲಭೂತ ಸೌಕರ್ಯಗಳಿಗೆ ಒತ್ತು ನೀಡುತ್ತಿರುವ ಈ ಬಜೆಟ್ ಮತ್ತಷ್ಟು ನಗರೀಕರಣ ಹಾಗೂ ವಲಸೆಯನ್ನು ಹೆಚ್ಚಲು ಕಾಣಿಕೆ ನೀಡುತ್ತದೆ. ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಬಂಡವಾಳ ಆಕರ್ಷಿಸಲು ಬೆಂಗಳೂರನ್ನು ಮಾತ್ರವೇ ಪರಿಗಣಿಸದೇ ರಾಜ್ಯದ ಸಮಗ್ರ ಬೆಳವಣಿಗೆಗೆ ಒತ್ತು ನೀಡುವಂತೆ ಯೋಜನೆಗಳನ್ನು ರೂಪಿಸುವುದು ಅಗತ್ಯ.

ಖಾಸಗಿ ಸಹಭಾಗಿತ್ವದ ಮೂಲಭೂತ ಸೌಕರ್ಯಗಳು ಬೆಂಗಳೂರು ನಗರದ ಜನ ಜೀವನವನ್ನು ಮತ್ತಷ್ಟು ದುಬಾರಿಗೊಳಿಸಿ ಈಗ ಇರುವ ನೀರು, ವಿದ್ಯುತ್, ವಸತಿ, ಸಂಚಾರ ಮುಂತಾದ ಎಲ್ಲಾ ರೀತಿಯ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಳ್ಳಲಿವೆ. ಬೆಂಗಳೂರು ಸುತ್ತ ಮುತ್ತ ಇರುವ ರಿಯಲ್ ಎಸ್ಟೇಟ್ ಕುಳಗಳನ್ನು ಬೆಳೆಸಲು ನಗರವನ್ನು ವಿರೂಪಗೊಳಿಸುವ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡಬಾರದು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್‌ರವರು ಹೇಳಿಕೆಯಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅಂಗನವಾಡಿ ನೌಕರರಿಗೆ ಈ ಬಜೆಟ್‌ನಲ್ಲಿಯೂ ನ್ಯಾಯ ಒದಗಿಸಿಲ್ಲ: ಎಸ್.ವರಲಕ್ಷ್ಮಿ

ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಅಂಗನವಾಡಿ ನೌಕರರಿಗೆ 4000 ರೂ. ಹೆಚ್ಚಳದ ಆಶ್ವಾಸನೆ ಕೊಟ್ಟಿತ್ತು. ಆದರೆ ಈ ಬಜೆಟ್‌ನಲ್ಲಿಯೂ ನ್ಯಾಯ ಒದಗಿಸಿಲ್ಲ ಎಂದು ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಕಿಡಿಕಾರಿದ್ದಾರೆ. ಚುನಾವಣೆ ಬಳಿಕ ಎರಡು ಬಜೆಟ್ ಮಂಡನೆ ಮುಗಿದಿದೆ. ಕನಿಷ್ಠ 2,000 ಹೆಚ್ಚಳದ ನಿರೀಕ್ಷೆ ಇತ್ತು. ಆದರೆ ಸಿದ್ದರಾಮಯ್ಯರವರು ನಮ್ಮನ್ನು ಪರಿಗಣಿಸಲಿಲ್ಲ. ಇದು ತುಂಬಾ ನೋವಿನ ವಿಷಯ. ಅಂಗನವಾಡಿ ಕೇಂದ್ರಗಳನ್ನು ಅಂಗನವಾಡಿ ಮಾಂಟೆಸ್ಸರಿ ಎಂದು ಘೋಷಿಸಿ, ಎಲ್ಲಾ ಕೇಂದ್ರಗಳಲ್ಲಿ LKG/UKG ಯನ್ನು ಪ್ರಾರಂಭಿಸಬೇಕು. ಬಹುಶಃ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಜೆಟ್ ಗೃಹ ಲಕ್ಷ್ಮಿ ಹಣ ಸೇರಿದೆ ಎಂದು ಕಾಣುತ್ತದೆ. ಜನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರ ಇಲಾಖೆಗೆ ಮತ್ತಷ್ಟು ಅನುದಾನ ಅಗತ್ಯತೆ ಇತ್ತು. ಕೇಂದ್ರ ಸರ್ಕಾರ ಅಂಗನವಾಡಿಗಳಿಗೆ ಕೊಡುವ ಬಜೆಟ್‌ನ ಪಾಲನ್ನು ಹೆಚ್ಚಿಸದೇ ಇರುವುದು ಈ ಪರಿಸ್ಥಿತಿಗೆ ಕಾರಣವಾಗಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಕೇಂದ್ರ ಸರ್ಕಾರ ತಂದಿರುವ ಕಾರ್ಮಿಕ ಸಂಹಿತೆಗಳನ್ನು ರಾಜ್ಯದಲ್ಲಿ ಜಾರಿ ಮಾಡುವ ಬದಲು ರದ್ದು ಮಾಡಬೇಕು, ಕನಿಷ್ಠ ವೇತನ 36,000 ರೂ. ನೀಡಬೇಕು, ಸಂಘಟಿತ, ಅಸಂಘಟಿತ ಹಾಗೂ ಸ್ಕೀಮ್ ನೌಕರರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಶ್ರಮಜೀವಿಗಳು ಸಿಐಟಿಯು ನೇತೃತ್ವದಲ್ಲಿ ಮಾರ್ಚ್ 03 ರಿಂದ ಹಗಲು ರಾತ್ರಿ ಧರಣಿ ನಡೆಸುತ್ತಿದ್ದಾರೆ. ಇವರ ಬೇಡಿಕೆಗಳನ್ನು ಈಡೇರಿಸುವ ಬದಲು ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದೆ ಎಂದು ಅವರು ಆರೋಪಿಸಿದ್ದಾರೆ.

ಅಸಹಜ ಸಾವುಗಳೂ ಸಾಮಾಜಿಕ ಸಂವೇದನೆಯೂ..... ಪುಟ 2 ರಿಂದ

ವ್ಯವಸ್ಥೆಯೂ ಇರುವುದಿಲ್ಲ ಎಂದು ಕಾರ್ಮಿಕರ ಬಂಧುಗಳು ಹೇಳುತ್ತಾರೆ. (ನೋಡಿ: Looking for workers at the end of tunnel – ದ ಹಿಂದೂ ಮಾರ್ಚ್ 1 2025.) ಒಂದು ವೇಳೆ ಈ ಕಾರ್ಮಿಕರು ಮೃತಪಟ್ಟರೂ ಅವರ ಸಾವುಗಳಿಗೆ ಗುತ್ತಿಗೆದಾರರಾಗಲೀ, ಉದ್ಯೋಗದಾತರಾಗಲೀ ಉತ್ತರದಾಯಿತ್ವ ಹೊರುವುದಿಲ್ಲ. ನಿಷೇಧದ ಹೊರತಾಗಿಯೂ ಮಲಗುಂಡಿಯೊಳಗೆ ಇಳಿದು ಮೃತಪಟ್ಟ ದಾರುಣ ಘಟನೆಗಳು ನಮ್ಮ ಕಣ್ಣ ಮುಂದಿವೆ.

300–600 ರೂ. ದಿನಗೂಲಿಗಾಗಿ 1400 ಕಿಲೋಮೀಟರ್ ದೂರದಿಂದ ಶ್ರಮಿಕರು ಏಕೆ ವಲಸೆ ಬರುತ್ತಾರೆ? ಅವರ ತವರಿನಲ್ಲೇ ಇದಕ್ಕಿಂತಲೂ ಕಡಿಮೆ ಕೂಲಿ ದೊರೆತರೂ ಜೀವನ ನಡೆಸಬಹುದಲ್ಲವೇ? ಹೀಗೆ ವಲಸೆ ಹೋಗುವಂತೆ ಮಾಡುವ ಅರ್ಥವ್ಯವಸ್ಥೆಗೆ ಜವಾಬ್ದಾರರು ಯಾರು? ನಾಗರಿಕ ಸಮಾಜದ ಗುಂಪುಗಳಲ್ಲೂ (Civil Society groups) ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೋಗುವುದಿಲ್ಲ. ಹಾಗಾಗಿ ಈ ದುಡಿಮೆಗಾರರ ಸಾವು 'ಅಸಹಜ' ಎನಿಸಿಕೊಳ್ಳುವುದಿಲ್ಲ. ಬದಲಾಗಿ ಆರ್ಥಿಕ ಅಭಿವೃದ್ಧಿಗಾಗಿ ಮಾಡಬೇಕಾದ 'ತ್ಯಾಗ' ಎನಿಸಿಕೊಳ್ಳುತ್ತದೆ ಅಥವಾ ವ್ಯವಸ್ಥೆಯ ಒಂದು ಭಾಗವಾಗಿಬಿಡುತ್ತದೆ. ಈಗಲೂ ಭಾರತದಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಯಾವುದೇ ರೀತಿಯ 'ವಲಸೆ ಕಾರ್ಮಿಕ ನೀತಿ'ಯನ್ನು ರೂಪಿಸಿಲ್ಲ ಎನ್ನುವುದು ಗಮನಿಸಬೇಕಾದ ಅಂಶ.

ಮೂರನೆಯದಾಗಿ ಕೋಮು ಸಂಘರ್ಷಗಳಲ್ಲಿ, ಜಾತಿ ಕೇಂದ್ರಿತ ಘಟನೆಗಳಲ್ಲಿ ಸಾವನ್ನಪ್ಪುವ ಅಮಾಯಕ ಜನರು ಪರಿಸ್ಥಿತಿಯ ಕೂಸುಗಳಾಗಿಬಿಡುತ್ತಾರೆ. ಕಲಿತ ಸಮಾಜದ ಸಂಕಥನಗಳಲ್ಲಿ 'ಅವರೇಕೆ ಹಾಗೆ ಮಾಡಬೇಕಿತ್ತು? ಅವನು ಜಾತಿ ನಿಯಮಗಳನ್ನು ಏಕೆ ಉಲ್ಲಂಘಿಸಬೇಕಿತ್ತು? ಅವಳೇಕೆ ಆ ಹೊತ್ತಿನಲ್ಲಿ ಹೊರಗೆ ಹೋಗಬೇಕಿತ್ತು?' ಎಂಬ ಪ್ರಶ್ನೆಗಳೇ ಪ್ರಧಾನವಾಗಿ ಕೇಳಿಬರುತ್ತವೆ. ಅತ್ಯಾಚಾರಕ್ಕೊಳಗಾಗಿ, ಹತ್ಯೆಯಾದ ಮಹಿಳೆಯೂ ಇದೇ ಪ್ರಶ್ನೆ ಎದುರಿಸುತ್ತಾಳೆ. ಅಂದರೆ ಸಂತ್ರಸ್ತರೇ ತಮ್ಮ ಸಾವುನೋವಿಗೆ ಕಾರಣರಾಗುವ ಒಂದು ಸಂಸ್ಕೃತಿಯನ್ನು ನಾವು ರೂಢಿಸಿಕೊಂಡಿದ್ದೇವೆ. ಹಾಗಾಗಿಯೇ ಆಸಿಫಾ, ಹಾಥ್ರಸ್, ಅಕ್ಲಾಖ್, ಪೆಹ್ಲೂ ಖಾನ್, ಸೌಜನ್ಯ ಯಾವುದೇ ಪ್ರಕರಣವನ್ನು ಗಮನಿಸಿದರೂ ಅಲ್ಲಿ ಉತ್ತರದಾಯಿತ್ವ ಎನ್ನುವುದು ಕಾಣುವುದಿಲ್ಲ. ಈ ಅಮಾನುಷ ಸಾವುಗಳು 'ಅಸಹಜ' ಎಂದು ನಿರ್ವಚಿಸಲ್ಪಡುವುದೂ ಇಲ್ಲ. ನಾವೇ ಕಟ್ಟಿರುವ ಸಮಾಜ ಮತ್ತು ಸಾಮಾಜಿಕ–ಸಾಂಸ್ಕೃತಿಕ–ರಾಜಕೀಯ–ಧಾರ್ಮಿಕ ಚೌಕಟ್ಟುಗಳೇ ಉತ್ತರದಾಯಿ ಎಂಬ ಪ್ರಜ್ಞೆ ಕಾಣುವುದೂ ಇಲ್ಲ. ಆದರೆ ಅಕಾಲಿಕ ಮರಣಕ್ಕೆ ತುತ್ತಾದ ಈ ಅಮಾಯಕರ ಸಾವು ತಾತ್ವಿಕವಾಗಿ 'ಅಸಹಜ' ಅಲ್ಲವೇ?

ಸಹಮಾನವರ 'ಸಾವನ್ನು ಸಂಭ್ರಮಿಸುವ' ವಿಕೃತ ಮನಸ್ಥಿತಿಯನ್ನು ಹೊರಗಿಟ್ಟು ನೋಡಿದರೂ, ವಿಶಾಲ ಸಮಾಜದಲ್ಲೂ ಸಹ ಇಂತಹ ಸಾವುಗಳು ನಮ್ಮನ್ನು ವಿಚಲಿತಗೊಳಿಸುತ್ತಿಲ್ಲ. ಪುಲ್ವಾಮಾ ಘಟನೆಯಲ್ಲಿ ಭಾರತೀಯ ಯೋಧರು ಭಯೋತ್ಪಾದಕ ಕೃತ್ಯಕ್ಕೆ ತುತ್ತಾಗಿ ಹುತಾತ್ಮರಾಗಿ ಐದು ವರ್ಷಗಳೇ ಕಳೆದಿವೆ. ಈವರೆಗೂ ಈ ಘಟನೆಯ ಉತ್ತರದಾಯಿಯನ್ನು ಗುರುತಿಸಲು, ಹುತಾತ್ಮ ಯೋಧರಿಗೆ ನ್ಯಾಯ ದೊರಕಿಸಲು ಯಾವುದೇ ರೀತಿಯ ಹೋರಾಟಗಳು ಕಂಡುಬಂದಿಲ್ಲ. ಏಕೆಂದರೆ ನಾವು ಸಹಮಾನವರ ಸಾವು ನೋವುಗಳನ್ನೂ ನಾವೇ ಸೃಷ್ಟಿಸಿಕೊಂಡಿರುವ 'ಅಸ್ಮಿತೆ'ಗಳ ಮಸೂರದಲ್ಲೇ ನೋಡುವ ಒಂದು ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದೇವೆ. ನಮ್ಮ ನ್ಯಾಯಕ್ಕಾಗಿ ಹೋರಾಟ, ಪ್ರತಿಭಟನೆ, ಪ್ರತಿರೋಧ, ಸಂವಾದ, ಚರ್ಚೆ ಮತ್ತು ವಿಚಾರ ಸಂಕಿರಣಗಳೂ ಇದೇ ದಿಕ್ಕಿನಲ್ಲಿ ಸಾಗುತ್ತವೆ. ಅಸಹಜ

ಸಾವಿಗೆ ಸ್ಪಂದಿಸುವ ಸಂವೇದನೆ!

ಸಾವನ್ನು ಸಂಭ್ರಮಿಸುವುದಕ್ಕೂ, ಸಮ್ಮತಿಸಿ ಮೌನ ವಹಿಸುವುದಕ್ಕೂ ತಾತ್ವಿಕವಾಗಿ ಏನೇನೂ ವ್ಯತ್ಯಾಸ ಇರುವುದಿಲ್ಲ. ಮೊದಲನೆಯದು ಕ್ರೌರ್ಯ ಎನಿಸುತ್ತದೆ, ಎರಡನೆಯದು ಕ್ರೌರ್ಯದ ಅನುಮೋದನೆಯಾಗುತ್ತದೆ. ಈ ವಿದ್ಯಮಾನವನ್ನು ಒಂದು ಪ್ರಬುದ್ಧ ಸಮಾಜವಾಗಿ ನಾವು ವಸ್ತುನಿಷ್ಠರಾಗಿ, ಸಮಷ್ಟಿ ಪ್ರಜ್ಞೆಯೊಂದಿಗೆ, ವಿಶಾಲ ದೃಷ್ಟಿಕೋನದಲ್ಲಿ, ಮುಕ್ತ ಚಿಂತನೆಯ ಮೂಲಕ ಪರಾಮರ್ಶಿಸಬೇಕಿದೆ. ಇದು ರಾಜಕೀಯ ಪ್ರಶ್ನೆ ಅಲ್ಲ, ನಮ್ಮನ್ನು ಕಾಡಬೇಕಾದ ಸಾಮಾಜಿಕ–ಸಾಂಸ್ಕೃತಿಕ ಪ್ರಶ್ನೆ. ಇಲ್ಲವಾದರೆ ವಾಹನ ಅಪಘಾತಗಳಿಂದಾಗುವ ಸಾವುಗಳಿಗೂ, ಮಾನವ ನಿರ್ಮಿತ ಅಪಾಯಗಳಿಂದಾಗುವ ಸಾವುಗಳಿಗೂ ವ್ಯತ್ಯಾಸವೇ ಇಲ್ಲವಾಗಿಬಿಡುತ್ತದೆ.

ಭ್ರಾತೃತ್ವ–ಸೋದರಿತ್ವ–ಸಮನ್ವಯ–ಸೌಹಾರ್ದತೆ ಮೊದಲಾದ ಸಾಂವಿಧಾನಿಕ ಪದಗಳನ್ನು ನಿರ್ವಚಿಸುವಾಗ ಈ ಮಾನವೀಯ ಪ್ರಜ್ಞೆ ನಮ್ಮೊಳಗೆ ಜಾಗೃತವಾಗಿರಬೇಕು. ಉತ್ತರದಾಯಿತ್ವ ಇಲ್ಲದ ಸಮಾಜ ಆರೋಗ್ಯಕರವಾಗಿ ಬೆಳೆಯಲಾಗುವುದಿಲ್ಲ. ಬಹುಶಃ ಈ ವಿದ್ಯಮಾನವನ್ನು ವಿಶಾಲ ನೆಲೆಯಲ್ಲಿ ಚರ್ಚಿಸುವಂತಹ ವಿಚಾರ ಸಂಕಿರಣಗಳಾಗಲೀ, ಸಾರ್ವಜನಿಕ ಗುಂಪು ಚರ್ಚೆ–ಸಂವಾದಗಳಾಗಲೀ ಸಾಂಸ್ಥಿಕವಾಗಿಯೂ ನಡೆಯುತ್ತಿಲ್ಲ, ಸಾಂಘಿಕವಾಗಿಯೂ ಕಂಡುಬರುವುದಿಲ್ಲ.

ಭವಿಷ್ಯದ ತಲೆಮಾರಿಗೆ ನಾವು ಸಕಲ ಜೀವಿಗಳ ಶ್ರೇಯ ಬಯಸುವ 'ಸರ್ವ ಜನಾಂಗದ ಶಾಂತಿಯ ತೋಟ'ವೊಂದನ್ನು ಬಿಟ್ಟುಹೋಗುವುದಾದರೆ, ಅಲ್ಲಿ ಮಾನವತೆಯ ಬೀಜಗಳನ್ನು ಬಿತ್ತುವ ಕೆಲಸವನ್ನು ಈಗಲೇ ಮಾಡಬೇಕಲ್ಲವೇ? ಈ ಬೀಜ ಬಿತ್ತನೆಗೆ ನೆಲ ಹಸನುಗೊಳಿಸುವ ಪ್ರಕ್ರಿಯೆಯಲ್ಲಿ ಮನುಜ ಸೂಕ್ಷ್ಮತೆ ಮತ್ತು ಸಂವೇದನೆಯನ್ನು ಬೆಳೆಸುವ ಕೆಲಸ ಬಹಳ ಮುಖ್ಯವಾಗುತ್ತದೆ. ಉತ್ತರದಾಯಿತ್ವ ಇರುವ ಸಮಾಜವನ್ನು ಕಟ್ಟಬೇಕಿದೆ. "ಇತಿಹಾಸ ನಮ್ಮನ್ನು ಕ್ಷಮಿಸುವುದಿಲ್ಲ" ಎಂಬ ಕ್ಲೀಷೆಯಿಂದಾಚೆ ಯೋಚಿಸಿದಾಗ ನಮ್ಮ ನಾಗರಿಕ ಪ್ರಜ್ಞೆ ಚುರುಕಾಗುವುದೇನೋ?

ಕೃಷಿ ಬಿಕ್ಕಟ್ಟು, ಗ್ರಾಮೀಣ ನಿರುದ್ಯೋಗ, ಬೆಲೆ ಏರಿಕೆ ಬವಣೆಗೆ ಪರಿಹಾರ ಒದಗಿಸದ ನಿರಾಶೆ ಬಜೆಟ್-KPRS ಟೀಕೆ

ರಾಜ್ಯಾದ್ಯಂತ ವರದಿಯಾಗುತ್ತಿರುವ ರೈತ–ಕೃಷಿಕೂಲಿಕಾರರ ಆತ್ಮಹತ್ಯೆಗಳು, ವಲಸೆ–ಮರುವಲಸೆ ಸಂಕಟಗಳು, ತೀವ್ರ ಗತಿಯಲ್ಲಿ ಹೆಚ್ಚುತ್ತಿರುವ ಗ್ರಾಮೀಣ ನಿರುದ್ಯೋಗ ಮತ್ತು ಸಾಲಭಾಧೆಗೆ ಪರಿಹಾರ ಒದಗಿಸುವಲ್ಲಿ 2025–26ರ ಈ ಬಜೆಟ್ ಕೂಡ ವಿಫಲವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಕರ್ನಾಟಕ ರಾಜ್ಯ ಸಮಿತಿ ಕಟು ಟೀಕೆ ಮಾಡಿದೆ.


ಉದ್ದೇಶ ಮತ್ತು ಸ್ವರೂಪಗಳ ಪ್ರಸ್ತಾಪ ಇಲ್ಲದೇ ಹೊಸ ಭೂ ಕಂದಾಯ ಕಾಯ್ದೆಯ ಘೋಷಣೆ ಮಾಡಿರುವುದು, ಕೃಷಿ ಭೂಮಿ ಪಹಣಿಗಳಿಗೆ ಆಧಾರ್ ಜೋಡಿಸಿ ಡಿಜಿಟಲೀಕರಣಗೊಳಿಸುವುದು ಈಗಾಗಲೇ ಕೇಂದ್ರಿಕೃತವಾಗಿ ನಿರ್ವಹಿಸಲ್ಪಡುತ್ತಿರುವ ಇಂತಹ ದಾಖಲಾತಿಗಳು, ಭೂ ಗಳ್ಳತನದಂತಹ ಹೊಸ ಹೊಸ ಸೈಬರ್ ಅಪರಾಧಗಳಿಗೆ ಕಾರಣವಾಗಬಹುದಾದ ಆತಂಕವನ್ನು ಉಂಟು ಮಾಡಿವೆ. ಈ ಹಿನ್ನೆಲೆಯಲ್ಲಿ ಇಂತಹ ಯಾವುದೇ ರೀತಿಯ ತೊಂದರೆಗೆ ರೈತರನ್ನು ಸಿಲುಕಿಸುವುದಿಲ್ಲ ಎಂದು ಸ್ಪಷ್ಟ ಶ್ವೇತಪತ್ರ ಹೊರಡಿಸದೇ ಇಂತಹ ಜೋಡಣೆಯ ಕೆಲಸಕ್ಕೆ ಮುಂದಾಗಬಾರದು ಎಂದು ಅದು ಆಗ್ರಹಿಸಿದೆ.

ನವ ಉದಾರೀಕರಣ ನೀತಿಗಳಿಗೆ ಮಣೆ ಹಾಕಿರುವ ಈ ಬಜೆಟ್ ಕೂಡ ಕೃಷಿ ಉತ್ಪಾದನೆ ಹಾಗೂ ಕೃಷಿ ಭೂಮಿ ರಕ್ಷಣೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಸಾಲಭಾಧೆಗೆ ತುತ್ತಾಗಿರುವ ಹಾಗೂ ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ಕಂಗೆಟ್ಟಿರುವ ರೈತ ಸಮುದಾಯಗಳಿಗೆ ಯಾವುದೇ ಪರಿಣಾಮಕಾರಿ ಪರಿಹಾರ ಒದಗಿಸಿಲ್ಲ. ಕೃಷಿಕರ ಆದಾಯ ಮತ್ತು ಜೀವನ ಭದ್ರತೆ ಹಾಗೂ ಕೃಷಿ ಉತ್ಪಾದನೆಯಲ್ಲಿ ಗಣನೀಯ ಕೊಡುಗೆ ನೀಡುತ್ತಿರುವ ಬಗರ್ ಹುಕುಂ, ಅರಣ್ಯ ಸಾಗುವಳಿ, ಗೇಣಿ ರೈತರ ಕಲ್ಯಾಣವನ್ನು ಮತ್ತು ಅವರ ಹಕ್ಕು ಪತ್ರದ ಹಕ್ಕು ಅನ್ನು ನಿರ್ಲಕ್ಷಿಸಲಾಗಿದೆ. ಬಲವಂತದ ಭೂ ಸ್ವಾಧೀನದ ವಿರುದ್ಧ ರಕ್ಷಣೆ ನೀಡುವಂತೆ, ಕೃಷಿ ಪಂಪ್ ಸೆಟ್ ಗಳಿಗೆ ಸ್ಮಾರ್ಟ್ ಮೀಟರ್, ಪ್ರೀಪೇಡ್ ಮೀಟರ್ ಅಳವಡಿಸುವ ಕೇಂದ್ರದ ವಿದ್ಯುತ್ ಖಾಸಗೀಕರಣ ನೀತಿಗೆ ನಿರಾಕರಣೆ, ಕೃಷಿ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಖಾತರಿ ಖರೀದಿಗೆ ವ್ಯವಸ್ಥೆ, ಸಾಲಭಾಧೆಯಿಂದ ಆತ್ಮಹತ್ಯೆಗೆ ತುತ್ತಾಗದಂತೆ ಕೇರಳ ಮಾದರಿಯಲ್ಲಿ ಋಣಮುಕ್ತ ಕಾಯ್ದೆ ಜಾರಿ ಮಾಡುವಂತೆ, ಕೈಗಾರಿಕಾ ಪ್ರದೇಶಾಭಿವೃದ್ಧಿ ಹೆಸರಿನಲ್ಲಿ ಭೂ ಮಾಫಿಯಾದ ಚಟುವಟಿಕೆಗಳನ್ನು ನಿಯಂತ್ರಿಸಿ ಕೃಷಿ ಭೂಮಿಯ ಕಾರ್ಪೊರೇಟ್ ಲೂಟಿ ತಡೆಯುವಂತೆ, ಗ್ರಾಮೀಣ ಜನತೆ ಭೂ ಹೀನತೆ ಹಾಗೂ ವಸತಿ ಹೀನತೆ ನಿವಾರಿಸುವಂತೆ ಬಜೆಟ್ ಪೂರ್ವ ದಲ್ಲಿ ತೀವ್ರ ಪ್ರತಿಭಟನೆ ಮೂಲಕ ಒತ್ತಾಯಿಸಿದ್ದರೂ ಈ ಬಜೆಟ್ ತೀವ್ರವಾಗಿ ಕಡೆಗಣಿಸಿದೆ ಎಂದು ಕೆಪಿಆರ್‌ಎಸ್ ಆಕ್ರೋಶ ವ್ಯಕ್ತಪಡಿಸಿದೆ.

ಮೂಲಭೂತ ಸಮಸ್ಯೆಗಳಿಗೆ ಪರಿಹಾರವಿಲ್ಲ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದಿಂದ ಆಗಿರುವ ನ್ಯಾಯಬದ್ಧ, ಶಾಸನಬದ್ದ ತೆರಿಗೆ ಪಾಲಿನಲ್ಲಿ ವಂಚನೆ, ಅಭಿವೃದ್ಧಿ ಅನುದಾನದಲ್ಲಿ ತಾರತಮ್ಯ, ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅಗತ್ಯ ಅನುದಾನ ಒದಗಿಸದೇ ರಾಜ್ಯ ಸರ್ಕಾರಗಳ ಕತ್ತು ಹಿಸುಕುವ ಗಂಭೀರ ಸಮಸ್ಯೆ–ಸವಾಲುಗಳ ಮಧ್ಯೆಯೂ ಗ್ಯಾರಂಟಿ ಯೋಜನೆಗಳಿಗೆ ಹಾಗೂ ಕೆಲವು ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರಯತ್ನ ನಡೆಸಲಾಗಿದೆ. ಆದರೆ ಕೃಷಿ ಬಿಕ್ಕಟ್ಟು, ನಿರುದ್ಯೋಗ, ಬೆಲೆ ಏರಿಕೆಯಂತಹ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸದೇ ಕೇವಲ ಗ್ಯಾರಂಟಿ ಯೋಜನೆಗಳು ರಾಜ್ಯದ ಅರ್ಥಿಕ ಅಭಿವೃದ್ದಿಗೆ ಯಾವುದೇ ಪರಿಣಾಮಕಾರಿ ಕೊಡುಗೆ ನೀಡಲು ಸಾಧ್ಯವಿಲ್ಲ ಎಂಬುದನ್ನು ಕಳೆದ ಎರಡು ವರ್ಷಗಳ ಗ್ಯಾರಂಟಿ ಅನುಭವ ತೋರಿಸಿಕೊಟ್ಟಿದೆ. ಶಿಕ್ಷಣ, ಆರೋಗ್ಯ, ಕೃಷಿ ಮಾರುಕಟ್ಟೆ, ವಸತಿ ಮುಂತಾದ ಕ್ಷೇತ್ರಗಳಲ್ಲಿ ಖಾಸಗೀಕರಣ ಹಾಗೂ ಖಾಸಗಿ ಸಹಭಾಗಿತ್ವವನ್ನೇ ಪ್ರೊತ್ಸಾಹಿಸಲಾಗುತ್ತಿದೆ. ಇದು ಮತ್ತಷ್ಟು ನಿರುದ್ಯೋಗ, ಕೃಷಿ ಬಿಕ್ಕಟ್ಟು, ಬೆಲೆ ಏರಿಕೆಗೆ ಕಾರಣವಾಗಲಿದೆ ಎಂದು ಕೆಪಿಆರ್‌ಎಸ್ ಅಭಿಪ್ರಾಯ ಪಟ್ಟಿದೆ.

ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ನೀಡಿದ್ದ ಭರವಸೆಗಳಾದ ಕರಾಳ ಕೃಷಿ ಕಾಯ್ದೆಗಳು ಹಾಗೂ ಭೂ ಸ್ವಾಧೀನ ಕಾಯ್ದೆಗಳ ರದ್ದತಿ ಘೋಷಣೆ ಈ ಬಜೆಟ್‌ನಲ್ಲೂ ಕೂಡ ಮಾಡಿಲ್ಲ. ಕೃಷಿ ಮಾರುಕಟ್ಟೆಯಲ್ಲಿ ಖಾಸಗಿ ಸಹಭಾಗಿತ್ವ ವನ್ನು ಪ್ರೋತ್ಸಾಹಿಸುವ ಪ್ರಸ್ತಾಪ ಅಪಾಯಕಾರಿಯಾಗಿದೆ. ಈಗಾಗಲೇ ಎಪಿಎಂಪಿ ಕಾಯ್ದೆಗಳನ್ನು ದುರ್ಬಲಗೊಳಿಸಿರುವ ಕಾರಣ ಹಾಗೂ ಖಾಸಗಿ ಸಗಟು ಮಾರುಕಟ್ಟೆಗಳಿಗೆ ಅವಕಾಶ ಕಲ್ಪಿಸಿರುವ ಕಾರಣ ಮತ್ತಷ್ಟು ತೊಂದರೆ ರೈತರಿಗೆ ಉಂಟಾಗಲಿದೆ. ಕೂಡಲೇ ಖಾಸಗಿ ಕೃಷಿ ಮಾರುಕಟ್ಟೆ ಪರ ಧೋರಣೆ ಕೈ ಬಿಟ್ಟು ಎಪಿಎಂಸಿ ಮಾರುಕಟ್ಟೆಗಳನ್ನು ಬಲಪಡಿಸಬೇಕು. ಭೂ ಸುಧಾರಣೆ ಕಾಯ್ದೆ 2020 ಸೇರಿದಂತೆ ಎಲ್ಲಾ ಕರಾಳ ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂದು ಕೆಪಿಆರ್‌ಎಸ್ ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.



ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸಿರುವ ವಿದ್ಯಾರ್ಥಿ–ಯುವಜನರ ವಿರೋಧಿ ಬಜೆಟ್–ಎಸ್‌ಎಫ್‌ಐ

ವಿದ್ಯಾರ್ಥಿ ಯುವಜನರ ನಿರೀಕ್ಷೆಯನ್ನು ಬಜೆಟ್ ಹುಸಿಮಾಡಿದೆ. ಕೊಠಾರಿ ಆಯೋಗದ ವರದಿ ಶಿಫಾರಸ್ಸಿನ ಪ್ರಕಾರ ಬಜೆಟ್‌ನಲ್ಲಿ ಶೇ.30ರಷ್ಟನ್ನು ಶಿಕ್ಷಣಕಾಗಿ ಮೀಸಲಿಡಬೇಕು. ಆದರೆ ಇಂದಿನ ಬಜೆಟ್ ಶೇ. 10ರಷ್ಟು (45,286 ಕೋಟಿ ರೂ.) ಮೀಸಲಿಡುವ ಮೂಲಕ ಶಿಕ್ಷಣ ವಿರೋಧಿ ಬಜೆಟ್ ಇದಾಗಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಆರೋಪಿಸಿದೆ.

ಖಾಲಿ ಇರುವ ಶಿಕ್ಷಕ ಹುದ್ದೆಗಳನ್ನು ಭರ್ತಿಮಾಡಲು ಮುಂದಾಗಿಲ್ಲ

ಕಲ್ಯಾಣ ಕರ್ನಾಟಕದ ಭಾಗದಲ್ಲಿ ಖಾಲಿ ಇರುವ 5267 ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡಲು ಕ್ರಮವಹಿಸುವುದನ್ನು ಸ್ವಾಗತಿಸಿದೆ. ಆದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು 23,000 ಶಿಕ್ಷಕ ಹುದ್ದೆಗಳು ಮತ್ತು ರಾಜ್ಯದಲ್ಲಿ ಖಾಲಿ ಇರುವ 59,000 ಶಿಕ್ಷಕ ಹುದ್ದೆಗಳನ್ನು ಭರ್ತಿಮಾಡಲು ಮುಂದಾಗಿಲ್ಲ. ಇದು ಶಾಲಾ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುವ ವ್ಯವಸ್ಥಿತ ದಾಳಿಯಾಗಿದೆ. ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅನುದಾನ ನೀಡುವ ಮೂಲಕ ವಿವಿಯನ್ನು ಬಳಪಡಿಸುವ ಬದಲು, ಡಾ. ಮನಮೋಹನ್ ಸಿಂಗ್ ಬೆಂಗಳೂರು ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡಲು ಮುಂದಾಗಿರುವ ಕ್ರಮವನ್ನು ಅದು ವಿರೋಧಿಸಿದೆ.

ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ವಿಫಲ

ರಾಜ್ಯದಲ್ಲಿ 500 ಹೊಸ ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರೆಯುವ ನಿರ್ಧಾರವನ್ನು ಸ್ವಾಗತಿಸಿರುವ ಎಸ್‌ಎಫ್‌ಐ, ಈಗ ಇರುವ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಬಜೆಟ್ ವಿಫಲವಾಗಿದೆ ಎಂದು ಆರೋಪಿಸಿದೆ. ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಇಲ್ಲದೆ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗಳಿಂದ ದೂರಮಾಡಿ, ಈಗಿರುವ ಸರ್ಕಾರಿ ಶಾಲೆಗಳನ್ನು ಮುಚ್ಚಿ, ಪಂಚಾಯತಿಗೆ ಒಂದು ಶಾಲೆ ಎಂಬ ಸರ್ಕಾರದ ನಿಲುವನ್ನು ಖಂಡಿಸಿದೆ.

ಮೂಲಭೂತ ಸೌಲಭ್ಯ ಒದಗಿಸಲು ಮೀಸಲಿಟ್ಟದ್ದು ಅತ್ಯಲ್ಪ

8ನೇ ತರಗತಿ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಸೈಕಲ್ ಯೋಜನೆಯ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುವ ಮಾಸಿಕ ಹಣವನ್ನು 1850 ರಿಂದ 3500 ರೂ.ಗಳನ್ನು ಹೆಚ್ಚಿಸುವಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಅರೋಗ್ಯ ಭದ್ರತೆ ಒದಗಿಸುವಲ್ಲಿ ಸರ್ಕಾರ ವಿಪಲವಾಗಿದೆ. ಸರ್ಕಾರಿ ಪ್ರಥಮ ದರ್ಜೆ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಖಾಲಿ ಇರುವ 2,000 ಭೋದಕ ಹುದ್ದೆಗಳನ್ನು ಭರ್ತಿಮಾಡುವ ಕ್ರಮವನ್ನು ಸ್ವಾಗತಿಸುತ್ತಾ ರಾಜ್ಯದಲ್ಲಿ ಬಹುತೇಕ ಕಾಲೇಜುಗಳಲ್ಲಿ ಶೇ. 90ರಷ್ಟು ಉಪನ್ಯಾಸಕರು ಅತಿಥಿ ಉಪನ್ಯಾಸಕರಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿ ಮಾಡಿಕೊಳ್ಳಬೇಕಿತ್ತು. ಮತ್ತು ರಾಜ್ಯದಲ್ಲಿ ಇರುವ ಕಾಲೇಜುಗಳಿಗೆ 275 ಕೋಟಿ ರೂ. ಮೀಸಲಿಟ್ಟಿರುವುದು ಎಷ್ಟು ಕಾಲೇಜುಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಸಾಧ್ಯ ಎಂಬುದು ಯಕ್ಷ ಪ್ರಶ್ನೆಯಾಗಿದೆ. ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಮತ್ತು ನರ್ಸಿಂಗ್ ಕಾಲೇಜು ತೆರೆಯಬೇಕು ಎಂಬುದು ನಮ್ಮ ಒತ್ತಾಯ. ಆದರೆ ಇದನ್ನು ಬಜೆಟ್ ಹುಸಿಯಾಗಿಸಿದೆ.

ಸಾರ್ವಜನಿಕ ಖಾಸಗಿ ಸಹಭಾಗಿತ್ವಕ್ಕೆ ವಿರೋಧ

ಕೋಲಾರದಲ್ಲಿ ವೈದ್ಯಕೀಯ ಕಾಲೇಜನ್ನು ತೆರೆಯುವುದನ್ನು ಸ್ವಾಗತಿಸುತ್ತೇವೆ. ಆದರೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಆಧಾರದ ಮೇಲೆ ತೆರೆಯುವುದನ್ನು ವಿರೋಧಿಸುತ್ತೇವೆ. ಇದು ಶಿಕ್ಷಣ ವ್ಯವಸ್ಥೆಯನ್ನು ಖಾಸಗಿಕರಣ ಮಾಡುವ ಉನ್ನಾರವಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಗೊಳಿಸಿ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದೆ. ಆದರೆ ರಾಜ್ಯ ಶಿಕ್ಷಣ ನೀತಿಯನ್ನು ಸಮರ್ಪಕವಾಗಿ ಜಾರಿಮಾಡಲು ಈ ಬಜೆಟ್‌ನಲ್ಲಿ ಮುಂದಾಗಿಲ್ಲ.

ವೃತಿಪರ ಶಿಕ್ಷಣ, ಉನ್ನತ ಶಿಕ್ಷಣ, ಸಂಶೋಧನೆಗೂ ಸಹ ಅನುದಾನ ನೀಡಿಲ್ಲ. ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಕರೆತರುವ ಪ್ರಮುಖ ಯೋಜನೆ ರೂಪಿಸಲು ರಾಜ್ಯ ಸರ್ಕಾರ ವಿಫಲವಾಗಿದೆ. ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಮೂಲಕ ಖಾಸಗಿಕರಣವನ್ನು ಉತ್ತೇಜನ ಮಾಡಲು ತೀರ್ಮಾನಿಸಿರುವುದು ಸ್ಪಷ್ಟವಾಗಿದೆ ಎಂದು ಎಸ್‌ಎಫ್‌ಐ ಆರೋಪಿಸಿದೆ.

ಜನವಿರೋಧಿ ಬಜೆಟ್: ಡಿಎಚ್‌ಎಸ್

ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್‌ನಲ್ಲಿ ರಾಜ್ಯದ ಬಡವರ ಮತ್ತು ಕೃಷಿಕೂಲಿಗಾರರ ಉದ್ಯೋಗದ ಪ್ರಶ್ನೆ ಕುರಿತು ಪ್ರಸ್ತಾಪವಿಲ್ಲ, ನರೇಗಾದಲ್ಲಿ ಕೂಲಿ ಹೆಚ್ಚಾಗಲಿಲ್ಲ, ಭೂ ಪ್ರಶ್ನೆಗಳಾದ ಬಗರ್ ಹುಕುಂ ಉಳುಮೆದಾರರಿಗೆ ಮುಕ್ತಿ ಸಿಗಲಿಲ್ಲ, ದಲಿತರ ವಸತಿ ನಿವೇಶನ ಸಮಸ್ಯೆ ಬಗೆಹರಿಸುವ ಖಾತ್ರಿ ನೀಡಿಲ್ಲ ಎಂದು ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್) ಬೇಸರ ವ್ಯಕ್ತಪಡಿಸಿದೆ.

ದಲಿತರ ಅಭಿವೃದ್ಧಿ ಹಣ ಪರಿಶಿಷ್ಟ ಜಾತಿ ಜನರಿಗೆ 29,992 ಕೋಟಿ ರೂ., ಬುಡಕಟ್ಟು ಜನರಿಗೆ 12,026 ಕೋಟಿ ರೂ. ಒಟ್ಟು 42,018 ಕೋಟಿ ರೂ.ಗಳನ್ನು ನೀಡಿದ್ದಾರೆ. ಇದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿಲ್ಲ.

ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು 33 ವಿಶೇಷ ಪೊಲೀಸ್ ಠಾಣೆಗಳನ್ನು ತೆರೆಯುವುದಾಗಿ ಹೇಳಿರುವುದು ಸ್ವಾಗತಾರ್ಹವಾದರೂ, ಜಿಲ್ಲೆಗೊಂದು ತ್ವರಿತ ನ್ಯಾಯಾಲಯ ಸ್ಥಾಪಿಸಬೇಕಾಗಿದೆ. ಇದರಿಂದ ದೌರ್ಜನ್ಯ ಮಾಡಿದವರಿಗೆ ಶಿಕ್ಷೆಯಾಗುತ್ತದೆ. ಇಲ್ಲವಾದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತದೆ.

ನೋಂದಣಿ ಮತ್ತು ಮುದ್ರಾಂಕದಿಂದ 24,000 ಕೋಟಿ ರೂ. ಆದಾಯ ನಿರೀಕ್ಷಿಸಿರುವ ಮುಖ್ಯಮಂತ್ರಿಗಳು, ಬಡವರ, ಮಧ್ಯಮ ವರ್ಗದ ಮತ್ತು ರೈತಾಪಿ ಜನರಿಂದ ಸುಲಿಗೆಗೆ ಹಾದಿ ಮಾಡಿಕೊಟ್ಟಿದ್ದಾರೆ. ಇದು ಜನವಿರೋಧಿ ಬಜೆಟ್ ಆಗಿದ್ದು ಶ್ರೀಮಂತರ ಪರವಾಗಿದೆ ಮತ್ತು ಹೂಡಿಕೆದಾರರ ಪರವಾಗಿ ರಾಜ್ಯದ ಭೂಮಿಯನ್ನು ಮಾರಾಟಕ್ಕಿಡುವ ಬಜೆಟ್ ಆಗಿ ಕಾಣಿಸುತ್ತಿದೆ ಎಂದು ದಲಿತ ಹಕ್ಕುಗಳ ಸಮಿತಿ ಕರ್ನಾಟಕ ಬಣ್ಣಿಸಿದೆ.

ರೈತರು ಹಾಗು ಶ್ರಮ ಜೀವಿಗಳಿಗೆ ನಿರಾಶೆ: "ಕಾರ್ಪೊರೇಟ್ ಸುಲಿಗೆಗೆ ಮಣೆ ಹಾಕುವ" ರಾಜ್ಯದ ಬಜೆಟ್: ಸಿಐಟಿಯು ಅಸಮಾಧಾನ

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಹಿನ್ನೆಯಲ್ಲಿ ಸಿದ್ದರಾಮಯ್ಯರವರ 16ನೇ ಬಜೆಟ್ ಹಾಗೂ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಈ ಅವಧಿಯ ಎರಡನೆಯ ಬಜೆಟ್ ಜನ ಸಾಮಾನ್ಯರಲ್ಲಿ ನಿರೀಕ್ಷೆಯನ್ನು ಮೂಡಿಸಿತ್ತು. ಆದರೆ, ಬಡಜನರ, ಶ್ರಮಿಕರ ಹಾಗು ರೈತರಿಗೆ ನಿರಾಶೆ ಮೂಡಿಸಿದ ಬಜೆಟ್ ಇದಾಗಿದೆ ಎಂದು ಸಿಐಟಿಯು ರಾಜ್ಯ ಸಮಿತಿಯು ಟೀಕಿಸಿದೆ.

ಕೇಂದ್ರ ಸರಕಾರದ ರಾಷ್ಟ್ರೀಯ ನಗದೀಕರಣದ ಪೈಪ್ ಲೈನ್ (ಎನ್‌ಎಂಪಿಎಲ್) ಮಾದರಿಯಲ್ಲೇ ಸಾರ್ವಜನಿಕ ಆಸ್ತಿಗಳನ್ನು ಕಾರ್ಪೊರೇಟ್ ಬಂಡವಾಳಕ್ಕೆ ವರ್ಗಾಯಿಸಲು ರಾಜ್ಯ ಸರ್ಕಾರ ಮುಂದಾಗಿದೆ. 10 ಕಬ್ಬಿಣ ಅದಿರು ಪ್ರದೇಶಗಳನ್ನು ಖಾಸಗಿಯವರಿಗೆ ವರ್ಗಾಯಿಸುವ ಮೂಲಕ 5847 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಆದಾಯವಾಗಲಿದೆ ಎಂದು ಪ್ರಕಟಿಸಲಾಗಿದೆ. ಸರ್ಕಾರವೇ ಈ ಪ್ರದೇಶಗಳನ್ನು ನಿರ್ವಹಿಸಲು ಸಾಧ್ಯವಾದರೆ ಈ ಮೊತ್ತಕ್ಕಿಂತಲು ಹಲವು ಪಟ್ಟು ಹೆಚ್ಚು ಆದಾಯವನ್ನು ರಾಜ್ಯಸರ್ಕಾರ ಪಡೆಯಲು ಸಾಧ್ಯವಾಗುತ್ತಿತ್ತು. ಸಾರ್ವಜನಿಕರಿಗೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿ ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಖಾತರಿ ಪಡಿಸುವ ಬಜೆಟ್ ಇದಾಗಿದೆ ಎಂದು ಆರೋಪಿಸಿದೆ.

ಹೂಡಿಕೆದಾರರು ಮಾಡುವ ಅಪರಾಧಗಳನ್ನು ಕಾನೂನುಬದ್ಧಗೊಳಿಸುವ...

ದೇಶದಲ್ಲೇ ಮೊದಲ ಬಾರಿಗೆ, ವಿದೇಶಿ ಹಾಗು ಸ್ವದೇಶಿ ಬಂಡವಾಳ ಹೂಡಿಕೆದಾರರು ಮಾಡುವ ಅಪರಾಧಗಳನ್ನು ಕಾನೂನುಬದ್ಧಗೊಳಿಸುವ ಜನವಿರೋಧಿ ಪ್ರಸ್ತಾಪಗಳು ಬಜೆಟ್ಟಿನಲ್ಲಿ ವ್ಯಕ್ತವಾಗಿರುವುದು ಆಘಾತಕಾರಿಯಾಗಿದೆ. ಉದ್ಯೋಗದಾತರು ಮಾಡುವ ಷರತ್ತುಗಳ ಉಲ್ಲಂಘನೆ ಹಾಗು ಅಪರಾಧಗಳನ್ನು ಕ್ರಿಮಿನಲ್ ವ್ಯಾಪ್ತಿಯಿಂದ ಹೊರತರಲು ಅನುಕೂಲವಾಗುವ ಮಸೂದೆಗಳನ್ನು ಜಾರಿಗೆ ತರುವುದಾಗಿ ಪ್ರಕಟಿಸಲಾಗಿದೆ. ಕೈಗಾರಿಕೆಗಳಿಗಾಗಿ ಭೂಮಿ ಕಳೆದುಕೊಂಡ ರೈತ –ಕೃಷಿ ಕೂಲಿಕಾರ್ಮಿಕರಿಗೆ ಉದ್ಯೋಗ ಅವಕಾಶದ ನಿರಾಕರಣೆ, ಅಕ್ರಮವಾಗಿ ಗುತ್ತಿಗೆ ಆದಾರದಲ್ಲಿನ ಕೆಲಸಕ್ಕೆ ಮಾತ್ರ ನೇಮಕ ಮಾಡುವುದು ಮತ್ತು ಹಲವು ರೀತಿಯ ಕಾನೂನು ಉಲ್ಲಂಘನೆ ಮಾಡುವ ಮಾಲಕರಿಗೆ ಸರ್ಕಾರವೇ ರಕ್ಷಣೆಯಾಗಿ ನಿಲ್ಲುತ್ತದೆ. ಬೇಲಿಯೇ ಎದ್ದು ಹೊಲ ಮೇಯುವಂತೆ ಇದು ಸರ್ಕಾರವೇ ಅಪರಾಧಗಳನ್ನು ಕಾನೂನು ಬದ್ಧಗೊಳಿಸುವ ನೀತಿಯಾಗಿದೆ.

ಖಾಯಂ ಉದ್ಯೋಗ ಸೃಷ್ಟಿಮಾಡುವ ಪ್ರಸ್ತಾಪಗಳಿಲ್ಲ

ಅಮಾನವೀಯ ಗುತ್ತಿಗೆ ಪದ್ಧತಿ, ಹಂಗಾಮಿ ಕೆಲಸದ ಪದ್ಧತಿಗಳನ್ನು ನಿಗ್ರಹಗೊಳಿಸುವ "ಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಖಾಯಮಾತಿ ಖಾತರಿಪಡಿಸುವ" ಕಾನೂನು ಜಾರಿಗೆ ಕಾರ್ಮಿಕ ಸಂಘಗಳು ಹಲವು ವರ್ಷಗಳಿಂದ ಮಂಡಿಸುತ್ತಿರುವ ಬೇಡಿಕೆಯನ್ನು ಸರ್ಕಾರ ತಿರಸ್ಕರಿಸಿದೆ. ರಾಜ್ಯದ ಕಾರ್ಮಿಕರಿಗೆ ಖಾಯಂ ಉದ್ಯೋಗ ಸೃಷ್ಟಿಮಾಡುವ ಯಾವ ಪ್ರಸ್ತಾಪಗಳೂ ಈ ಬಜೆಟಿನಲ್ಲಿ ಇಲ್ಲವಾಗಿದೆ. ನಾಡು–ನುಡಿ–ಜನತೆಯ ಕುರಿತ ಬರಿಮಾತಿನ ಕಾಂಗ್ರೆಸ್ ಪಕ್ಷದ ನೀತಿಯು ಬಯಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳ ಮುನಿಸಿಪಲ್ ಕಾರ್ಮಿಕರ ನೇರ ಪಾವತಿಗೆ ತರುವ ನಿರೀಕ್ಷೆಗಳನ್ನು ಸಹ ಹುಸಿ ಮಾಡಿ, ಸರ್ಕಾರದ ಖಜಾನೆಗೆ ಆಗುತ್ತಿದ್ದ ಶೇ. 30ರಷ್ಟು ಉಳಿಕೆಯನ್ನು ಸಹ ಮಾಡದೆ ಗುತ್ತಿಗೆದಾರರ ಹಿತ ರಕ್ಷಣೆಗೆ ಮುಂದಾಗಿದೆ. ಗಾರ್ಮೆಂಟ್ ಕಾರ್ಮಿಕರ ಕನಿಷ್ಠ ವೇತನವನ್ನು ದಶಕಗಳಿಂದ ಪರಿಷ್ಕರಣೆ ಮಾಡಲಾಗದ ರಾಜ್ಯ ಸರ್ಕಾರ, ಸಿದ್ಧ ಉಡುಪು ತಯಾರಿಸುವ ಕಾರ್ಖಾನೆಗಳ ಮಾಲಕರಿಗೆ ರಿಯಾಯಿತಿಗಳನ್ನು ಘೋಷಿಸಿದೆ. ಬಹುಪಾಲು ಮಹಿಳೆಯರ ಶ್ರಮದ ಶೋಷಣೆಗೆ ಅವಕಾಶ ಮಾಡಿಕೊಡುವುದು ಯಾವ ರೀತಿಯ ಸ್ತ್ರೀ ಶಕ್ತಿ ಯೋಜನೆ ಎಂಬುದನ್ನು ಸರ್ಕಾರ ಜನತೆಗೆ ವಿವರಿಸಬೇಕಿದೆ.

ಅಸಂಘಟಿತ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳ ಪ್ರಸ್ತಾಪಗಳಿಲ್ಲ

ಕೌಶಲ್ಯ ಅಭಿವೃದ್ಧಿಯ ನೆಪದಲ್ಲಿ ಅಗ್ಗದ ಕೂಲಿಗೆ ರಾಜ್ಯದ ಯುವಕರನ್ನು ಶೋಷಣೆ ಮಾಡಲು ಕಾರ್ಪೊರೇಟ್ ಬಂಡವಾಳಕ್ಕೆ ಅವಕಾಶ ನೀಡಲಾಗಿದೆ. ಸಂಘಟಿತ ಹಾಗೂ ಐಟಿ ಬಿಟಿ ಕ್ಷೇತ್ರದ ಕಾರ್ಮಿಕರ ಕೆಲಸದ ಅವಧಿಯನ್ನು ವಿಸ್ತರಿಸುವ, ಕಾರ್ಮಿಕ ಕಾನೂನುಗಳಿಂದ ನೀಡಿರುವ ವಿನಾಯಿತಿಗಳನ್ನು ಹಿಂಪಡೆಯುವ ಯಾವುದೇ ಸೂಚನೆಗಳಿಲ್ಲ. ಅಸಂಘಟಿತ ವಲಯದಲ್ಲಿ ದುಡಿಯುವ ವಿವಿಧ ರಂಗಗಳ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ವಿಚಾರದಲ್ಲಿ ರೂ.500 ಕೋಟಿ ಅನುದಾನ ನೀಡುವ ಮೂಲಕ ಪಿಂಚಣಿ ಯೋಜನೆಯನ್ನು ಜಾರಿಮಾಡಲು ಸರ್ಕಾರ ಇಚ್ಚಾಶಕ್ತಿಯನ್ನು ತೋರದೆ ಇರುವುದು ಅಸಂಘಟಿತ ಕಾರ್ಮಿಕರಿಗೆ ಮಾಡಿದ ಅನ್ಯಾಯ. ಈ ಬಜೆಟ್‌ನಲ್ಲಿ ಅಸಂಘಟಿತ ಕಾರ್ಮಿಕರಿಗೆ ಯಾವುದೇ ಕಲ್ಯಾಣ ಯೋಜನೆಗಳ ಪ್ರಸ್ತಾಪಗಳೂ ಇಲ್ಲ. ಸ್ಕೀಂ ನೌಕರರಲ್ಲಿ, ಆಶಾ, ಅಂಗನವಾಡಿ ಹಾಗು ಅಕ್ಷರ ದಾಸೋಹ ಕಾರ್ಮಿಕರಿಗೆ ಅತ್ಯಲ್ಪ ಪ್ರಮಾಣದ ವೇತನ ಹೆಚ್ಚಳವನ್ನು ನೀಡಲಾಗಿದೆ. ಚುನಾವಣೆಗೆ ಮೊದಲು ಅಸಂಘಟಿತ ಹಾಗು ಯೋಜನಾ ಕಾರ್ಮಿಕರಿಗೆ ನೀಡಿದ ಭರವಸೆಗಳನ್ನು ಅಧಿಕಾರಕ್ಕೆ ಬಂದ ನಂತರ ಕಾಂಗ್ರೆಸ್ ಪಕ್ಷ ಮರೆತಿದೆ.

ರಾಜ್ಯದ ರೈತರು ಹಾಗೂ ಶ್ರಮ ಜೀವಿಗಳಿಗೆ ನಿರಾಶೆ ಮೂಡಿಸಿದ ಬಜೆಟ್ ಇದಾಗಿದೆ. ಕೇಂದ್ರ ಸರ್ಕಾರದ ನವ ಉದಾರೀಕರಣದ ಕಾರ್ಪೊರೇಟ್ ಪರ ಒತ್ತಡಗಳಿಗೆ ಕಾಂಗ್ರೆಸ್ ಪಕ್ಷ ಮಣಿದಿರುವುದು ಸ್ಪಷ್ಟವಾಗಿದೆ. ರಾಜ್ಯದ ಸಾಮಾನ್ಯ ಜನರು ಜಿಎಸ್‌ಟಿ, ಸೆಸ್‌ಗಳ ಮೂಲಕ ನೀಡುವ ಹಣದಲ್ಲಿ ರಾಜ್ಯದ ಪಾಲನ್ನು ಕೇಂದ್ರ ಸರ್ಕಾರ ನಿರಾಕರಿಸುತ್ತದೆ. ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ವಿರೋಧಿಸುವ ಹಾಗೂ ರಾಜ್ಯಕ್ಕೆ ನ್ಯಾಯ ಪಡೆಯುವ ಯಾವ ಪ್ರಸ್ತಾಪಗಳು ರಾಜ್ಯ ಬಜೆಟಲ್ಲಿ ಕಾಣುತ್ತಿಲ್ಲ. ಸರ್ಕಾರದ ಯಾವುದೇ ಅನುದಾನ ನೀಡದೆ, ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ ಕೆಲ ಯೋಜನೆಗಳನ್ನು ತನ್ನ ಸಾಧನೆ ಎಂಬಂತೆ ಬಿಂಬಿಸುತ್ತಿರುವುದು ಸರಿಯಾದ ನಡೆಯಾಗದು ಎಂದು ಸಿಐಟಿಯುವಿನ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಅಭಿಪ್ರಾಯ ಪಟ್ಟಿದ್ದಾರೆ.

ವಸತಿ ಶಾಲೆ ನಿರ್ಮಾಣಕ್ಕೆ ಕಲ್ಯಾಣ ನಿಧಿ ಬಳಕೆ; CWFI ವಿರೋಧ

6ನೇ ಕ್ಲಾಸಿನಿಂದ 12ನೇ ಕ್ಲಾಸಿನವರೆಗೆ ವಸತಿ ಶಾಲೆಗಳನ್ನು ಎಲ್ಲಾ 31 ಜಿಲ್ಲೆಗಳಲ್ಲಿ ಸ್ಥಾಪಿಸುವ ಹೆಸರಲ್ಲಿ ಕಲ್ಯಾಣ ಮಂಡಳಿ ನಿಧಿಯ 750 ಕೋಟಿ ರೂ.ಗಳನ್ನು ಬಳಕೆ ಮಾಡಲಾಗುವುದು ಎನ್ನುವ ಪ್ರಸ್ತಾವವನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (CWFI) ತೀವ್ರವಾಗಿ ವಿರೋಧಿಸಿದೆ. ಈ ಪ್ರಸ್ತಾವವು 1996 ಕಾಯಿದೆಗೆ ವಿರೋಧವಾಗಿದೆ. ಮಂಡಳಿ ಆರಂಭಗೊಂಡ ಕಾಲದಿಂದಲೂ ಭವ್ಯ ಸೌಧಗಳನ್ನು ನಿರ್ಮಿಸುವ ಕಾರ್ಮಿಕರಿಗೆ ಸ್ವತಃ ಅವರ ವಸತಿ ನಿರ್ಮಾಣಕ್ಕೆ 2ರಿಂದ 5 ಲಕ್ಷ ಸಹಾಯಧನ ಬೇಕೆಂದು ಕಾರ್ಮಿಕರು ಹೋರಾಡುತ್ತಿದ್ದಾರೆ. ಆದರೆ ಅದನ್ನು ನೀಡಲಿಲ್ಲ. ಬದಲಾಗಿ, ಮಂಡಳಿ ನಿಧಿಯಿಂದ ನಕಲಿ ಕಾರ್ಮಿಕರನ್ನು ಸೃಷ್ಟಿಸಿದ ಕೊಳಚೆ ನಿರ್ಮೂಲನಾ ಮಂಡಳಿಗೆ ರೂ. 522 ಕೋಟಿ ನೀಡಲಾಗಿದೆ. ಈಗ ಸಾಲದೆಂಬಂತೆ ರೂ. 750 ಕೋಟಿ ಹಣದಲ್ಲಿ ವಸತಿ ಶಾಲೆ ನಿರ್ಮಿಸಲು ಹೊರಟಿದೆ. ಇದು ಕಾರ್ಮಿಕ ಸಚಿವರು ಹಾಗೂ ಅವರ ಹಿಂಬಾಲಕರು ಮತ್ತು ಅಧಿಕಾರಿಗಳ ಜೇಬು ತುಂಬಿಸುವ ಕಾರ್ಯಕ್ರಮವಲ್ಲದೆ ಬೇರೆನೂ ಅಲ್ಲ. ಇದರಿಂದ ಬಡ ಕಟ್ಟಡ ಕಾರ್ಮಿಕ ಕುಟುಂಬಗಳಿಗೆ ಪ್ರಯೋಜನವಿಲ್ಲ. ಈಗಾಗಲೇ ಇರುವ ಸರ್ಕಾರಿ ವಸತಿ ಶಾಲೆಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಅಲ್ಲದೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಕೆಲಸವೇ ಹೊರತು ವಸತಿ ಶಾಲೆ ತೆರೆಯುವುದಲ್ಲ ಎಂದು ಹೇಳಿದೆ.

ಕರ್ನಾಟಕ ಹೈಕೋರ್ಟ್ ಕಲ್ಯಾಣ ಮಂಡಳಿ ನಿಧಿ ದುರುಪಯೋಗವಾಗಿರುವ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿ ಸಿಎಜಿ ತನಿಖೆ ನಡೆಸಲು ಆದೇಶಿಸಿದೆ. ಅಲ್ಲದೆ 2021 ಅಧಿಸೂಚನೆ ಅನ್ವಯ ಶೈಕ್ಷಣಿಕ ಧನಸಹಾಯ ವಿತರಿಸಲು ತೀರ್ಪು ನೀಡಿದೆ. ಅದನ್ನು ಒಳಗೊಂಡು ಇತರೆ ಘೋಷಿತ ಕಾರ್ಯಕ್ರಮಗಳನ್ನು ಮಂಡಳಿ ಸಮರ್ಪಕವಾಗಿ ಜಾರಿಗೊಳಿಸುವುದೇ ಕಾರ್ಮಿಕರಿಗೆ ನೀಡುವ ನ್ಯಾಯವಾಗಿದೆ. ಆದ್ದರಿಂದ ಬಜೆಟ್ ಪ್ರಸ್ತಾಪಿತ ವಸತಿ ಶಾಲೆ ನಿರ್ಮಾಣವನ್ನು ಕೈ ಬಿಡಬೇಕೆಂದು ಫೆಡರೇಷನ್ ಆಗ್ರಹಪಡಿಸಿದೆ.

ಮರಣ ಪರಿಹಾರ ಮತ್ತು ವೈದ್ಯಕೀಯ ನೆರವು ಹೆಚ್ಚಳಕ್ಕೆ ಸ್ವಾಗತ

ರಾಜ್ಯ ಬಜೆಟ್‌ನಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಸ್ವಾಭಾವಿಕ ಮರಣ ಹೊಂದಿದಲ್ಲಿ ಪರಿಹಾರ ಧನವನ್ನು ಈಗಿರುವ ರೂ. 75,000 ದಿಂದ ರೂ. 1,50,000 ಕ್ಕೆ, ಕೆಲಸದ ಸ್ಥಳದಲ್ಲಿ ಅಪಘಾತದಿಂದ ಮರಣ ಹೊಂದಿದಲ್ಲಿ ರೂ. 5 ಲಕ್ಷದಿಂದ ರೂ. 8 ಲಕ್ಷಕ್ಕೆ ಹೆಚ್ಚಿಸಿರುವ ತೀರ್ಮಾನವನ್ನು ಸ್ವಾಗತಿಸಿರುವ CWFI, ಅದೇ ಸಂದರ್ಭದಲ್ಲಿ ಹೃದ್ರೋಗ ಮತ್ತು ಕ್ಯಾನ್ಸರ್ ಕಾಯಿಲೆಗಳಿಗೆ ಟಾಪ್‌ಅಪ್ ರೂಪದಲ್ಲಿ ಹೆಚ್ಚಿಗೆ ಪರಿಹಾರ ನೀಡಿರುವುದು ಕೂಡಾ ಸ್ವೀಕಾರಾರ್ಹವಾಗಿದೆ ಎಂದಿದೆ.


ರಾಜಕೀಯ ಸಂಸ್ಥೆಯೊಳಗೆ ಸಂಘ ಪರಿವಾರವು ನಿರಂತರವಾಗಿ ಕೋಮುವಾದಿ ವಿಷವನ್ನು ಸೇರಿಸುತ್ತಿರುವುದು ಹಾಗೂ ಜನಸಾಮಾನ್ಯರು ಮತ್ತು ಆಡಳಿತದಲ್ಲಿ ಅದರ ಬೆಂಬಲಿಗರ ಸಂಖ್ಯೆ ಹೆಚ್ಚುತ್ತಿರುವುದು ಮುಸ್ಲಿಮರ ಮೇಲೆ ನಡೆಯುತ್ತಿರುವ ಅನೇಕ ದಾಳಿಗಳಿಗೆ ಕಾರಣವಾಗಿದೆ. ಇತ್ತೀಚೆಗೆ ಮಕ್ಕಳು ಮತ್ತು ಶಿಶುಗಳನ್ನು ಕೂಡ ಈ ದಾಳಿಗಳ ಟಾರ್ಗೆಟ್ ಮಾಡುತ್ತಿರುವುದು ಮತ್ತಷ್ಟು ದುರಂತದ ಸಂಗತಿಯಾಗಿದೆ.

ಹಸುಗೂಸುಗಳನ್ನೂ ಕೊಲ್ಲುವ ವಿಷಕಾರಿ ಕೋಮು ದಾಳಿ ನಿಲ್ಲಿಸಿ

ಪ್ರಕಾಶ್ ಕಾರತ್

ಮಹಾರಾಷ್ಟ್ರದ ಸಿಂಧ್‌ದುರ್ಗ ಜಿಲ್ಲೆಯ ಸಣ್ಣ ಪಟ್ಟಣ ಮಾಳ್ವನ್‌ನಲ್ಲಿ 15 ವರ್ಷದ ಮುಸ್ಲಿಂ ಬಾಲಕನನ್ನು ವಶಕ್ಕೆ ಪಡೆದ ಪೊಲೀಸರು, ಆತನ ಹೆತ್ತವರನ್ನು ಬಂಧಿಸಿದರು. ಅಲ್ಲದೆ ಅವರ ಸಣ್ಣ ಗುಜರಿ ಅಂಗಡಿಯನ್ನು ಮಹಾನಗರ ಪಾಲಿಕೆ ಫೆಬ್ರವರಿ 25ರಂದು ಬುಲ್ಡೋಜರ್‌ನಿಂದ ನೆಲಸಮ ಮಾಡಿತು. ವಿಶ್ವ ಹಿಂದೂ ಪರಿಷತ್‌ನ ಸದಸ್ಯನೊಬ್ಬ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿದ ಎಫ್‌ಐಆರ್ ಆಧಾರದಲ್ಲಿ ಇವೆಲ್ಲವನ್ನು ಮಾಡಲಾಯಿತು. ಬಾಲಕನ ಮನೆ ಹತ್ತಿರ ಹಾದು ಹೋಗುತ್ತಿದ್ದಾಗ ಆ ಬಾಲಕ ಭಾರತ–ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯವನ್ನು ಟಿವಿಯಲ್ಲಿ ನೋಡುತ್ತಿದ್ದ ವೇಳೆ 'ಪಾಕಿಸ್ತಾನ ಪರ' ಘೋಷಣೆ ಕೂಗಿದ ಎಂದು ದೂರುದಾರ ಹೇಳಿದ್ದ. ದೂರಿನ ಸ್ವರೂಪವನ್ನು ಪರಿಗಣಿಸದೆ ಹಾಗೂ ಯಾವುದೇ ರೀತಿಯ ತನಿಖೆಯನ್ನೂ ನಡೆಸದೆ ಬಾಲಕನ ಮನೆಗೆ ಬಂದ ಪೊಲೀಸರು ಭಯಭೀತನಾದ ಬಾಲಕನನ್ನು ಭಯಾನಕ ರೀತಿಯಲ್ಲಿ ಹೊರಗೆ ಎಳೆದುಕೊಂಡು ಹೋದರು. ಆತ ಅಪ್ರಾಪ್ತನಾಗಿದ್ದರಿಂದ ಆತನನ್ನು ಬಾಲಪರಿವೀಕ್ಷಣಾ ಗೃಹವೊಂದಕ್ಕೆ ಕಳಿಸಲಾಯಿತು ಹಾಗೂ ತಂದೆ–ತಾಯಿಯನ್ನು ಜೈಲಿಗೆ ಅಟ್ಟಲಾಯಿತು.

ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 196 (ಧರ್ಮದ ಆಧಾರದಲ್ಲಿ ವಿವಿಧ ಗುಂಪುಗಳ ನಡುವೆ ವೈರತ್ವ ಬೆಳೆಸುವುದು), 197 (ರಾಷ್ಟ್ರೀಯ ಸಮಗ್ರತೆಗೆ ಹಾನಿಯಾಗುವ ಆರೋಪಗಳು, ಪ್ರತಿಪಾದನೆಗಳು) ಮತ್ತು 3 (5) (ಸಾಮಾನ್ಯ ಉದ್ದೇಶವನ್ನು ಮುಂದುವರಿಸಲು ಅನೇಕ ಜನರು ಸೇರಿ ನಡೆಸುವ ಕೃತ್ಯಗಳು) ಅನ್ವಯ ಅವರ ವಿರುದ್ಧ ಆರೋಪಗಳನ್ನು ಹೊರಿಸಲಾಗಿದೆ. ಈ ಸೆಕ್ಷನ್‌ಗಳನ್ನು ಈಗ ಅಲ್ಪಸಂಖ್ಯಾತ ಸಮುದಾಯದ ಸದಸ್ಯರ ವಿರುದ್ಧ ನಾಚಿಕೆ ಬಿಟ್ಟು ಪದೇ ಪದೇ ಬಳಸಲಾಗುತ್ತಿದೆ. ಹಾಗೆ ನೋಡಿದರೆ, ಹಿಂದೂ ದ್ವೇಷಕಾರರು ಇಂಥ ದುಷ್ಕೃತ್ಯಗಳ ನಿಜವಾದ ಅಪರಾಧಿಗಳಾಗಿದ್ದು ಅವರು ಯಾವುದೇ ಶಿಕ್ಷೆಯಿಲ್ಲದೆ ಪಾರಾಗುತ್ತಿದ್ದಾರೆ. ಘಟನೆಯ ಮರುದಿನವೇ, ಇದು ಉತ್ತರ ಪ್ರದೇಶಕ್ಕೆ ಸೇರಿದ ಕುಟುಂಬವಾಗಿದ್ದು ಅದನ್ನು ಆ ಪ್ರದೇಶದಿಂದ ಹೊರಹಾಕುವಂತೆ ಆಗ್ರಹಿಸಿ ಕೆಲವು ಜನರು ಬೈಕ್ ಮೆರವಣಿಗೆ ನಡೆಸಿದರು. ಅದೇ ದಿನ



ಗುಜರಿ ಅಂಗಡಿಯನ್ನು ಧ್ವಂಸ ಮಾಡಲಾಯಿತು.

ಹೆತ್ತವರಿಗೆ ಜಾಮೀನು ನೀಡಲಾಗಿದ್ದು ಬಾಲಕನನ್ನು ಆತನ ಚಿಕ್ಕಪ್ಪನಿಗೆ ಹಸ್ತಾಂತರಿಸಲಾಗಿದೆ ಯಾದರೂ ಅವರ ಸಂಕಷ್ಟಗಳು ಇನ್ನೂ ಮುಗಿದಿಲ್ಲ. ಅವರು ಜೀವನೋಪಾಯದಿಂದ ವಂಚಿತರಾಗಿದ್ದಾರೆ. ಅವರ ಮಗ ಭಯವಿಹ್ವಲಗೊಂಡಿದ್ದು ಭೀತಿಯಿಂದಾಗಿ ಮಾತನಾಡಲೂ ನಿರಾಕರಿಸುತ್ತಿದ್ದಾನೆ. ಈ ವಿಷಯವನ್ನು ರಾಜಕೀಯ ಬಂಡವಾಳ ಮಾಡಿಕೊಳ್ಳಲು ಸ್ಥಳೀಯ ಬಿಜೆಪಿ ಶಾಸಕ ನಿತೇಶ್ ರಾಣೆ ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಬಾಲಕನ ತಂದೆ ಉಗ್ರಗಾಮಿಯಾಗಿರುವ ಶಂಕೆಯಿದ್ದು ಬಹುಶಃ ಜಿಹಾದಿಯೂ ಆಗಿರಬಹುದೆಂದು ಹೇಳಿರುವುದಲ್ಲದೆ, ಆತನನ್ನು ಜಿಲ್ಲೆಯಿಂದ ಹೊರಹಾಕಲು ಶ್ರಮಿಸುವುದಾಗಿ ಘೋಷಿಸಿದ್ದಾರೆ. ಈಗೀಗ ಸಣ್ಣ ಮಕ್ಕಳು ಕೂಡ ವಿಷಕಾರಿ ಕೋಮುವಾದಿ ದಾಳಿಗಳ ಬಲಿಪಶು ಆಗುತ್ತಿರುವುದು ಕಳವಳಕಾರಿ ಸಂಗತಿಯಾಗಿರುವ ಜತೆಯಲ್ಲೇ ಪೊಲೀಸರು ಆತನನ್ನು ಅಮಾನವೀಯವಾಗಿ ಹಾಗೂ ಕಾನೂನಾತ್ಮಕವಾಗಿ ಪ್ರಶ್ನೆ ಮಾಡಬಹುದಾದ ರೀತಿಯಲ್ಲಿ ಬಂಧಿಸಿದ್ದು ಮತ್ತು ಕಾನೂನಿನ ಅನುಮತಿಯಿಲ್ಲದೆ ಯಾವುದೇ ಕಟ್ಟಡಗಳನ್ನು ಧ್ವಂಸ ಮಾಡಬಾರದೆಂಬ ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪನ್ನು ಉಲ್ಲಂಘಿಸಿ ಬಾಲಕನ ತಂದೆಯ ಗುಜರಿ ಅಂಗಡಿಯನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಿರುವುದು ತೀವ್ರ ಕಳವಳದ ಸಂಗತಿಯಾಗಿದೆ.

ಮಾಳ್ವನ್ ಘಟನೆಯ ಬೆನ್ನಲ್ಲೇ ಇನ್ನೊಂದು ಇನ್ನೂ ಭಯಾನಕ ಪ್ರಕರಣ ನಡೆದಿದೆ. ಮಾರ್ಚ್ 2ರಂದು ರಾಜಸ್ಥಾನ ಪೊಲೀಸರು ಆಳ್ವಾರ್ ಜಿಲ್ಲೆಯ ಇಮ್ರಾನ್ ಎಂಬುವವರ ಮನೆ ಮೇಲೆ ಅಪರ ರಾತ್ರಿ ದಾಳಿ ನಡೆಸಿದ್ದಾರೆ. ಅವರೊಂದಿಗೆ ಮಹಿಳಾ ಪೊಲೀಸ್ ಸಿಬ್ಬಂದಿಯೂ ಇರಲಿಲ್ಲ. ಇಮ್ರಾನ್ ಪತ್ನಿ ರಝಿದಾ, ತನ್ನ ಒಂದು ತಿಂಗಳ ಮಗು ಅಲಿಷದಾ ಜತೆ ನಿದ್ರಿಸುತ್ತಿದ್ದರು. ಪೊಲೀಸರು ರಝಿದಾರನ್ನು ಮನೆಯಿಂದ ಹೊರಗೆ ಎಳೆದು ಹಾಕಿದರು ಹಾಗೂ ಕೆಲವು ಪೊಲೀಸರು ಹಾಸಿಗೆ ಮೇಲೆ ಹಾರಿ ಮಗುವನ್ನು ತುಳಿದಿದ್ದರಿಂದ ಮಗು ಸ್ಥಳದಲ್ಲೇ ಮೃತಪಟ್ಟಿತು. ಪೊಲೀಸರು ವಾರಂಟ್ ಇಲ್ಲದೇ ಅಥವಾ ಪೂರ್ವ ನೋಟಿಸ್ ಕೂಡ ಇಲ್ಲದೇ ಕಾರ್ಯಾಚರಿಸಿದ್ದರು. ಇಮ್ರಾನ್ ಒಬ್ಬ ದಿನಗೂಲಿ ನೌಕರನಾಗಿದ್ದು ಯಾವುದೇ ಕ್ರಿಮಿನಲ್ ದಾಖಲೆ ಹೊಂದಿರಲಿಲ್ಲ.

ಇಮ್ರಾನ್ ಕುಟುಂಬದವರು ಠಾಣೆಗೆ ದೂರು ಸಲ್ಲಿಸಲು ಪ್ರಯತ್ನಿಸಿದರೂ ಪೊಲೀಸರು ಅದಕ್ಕೆ ಕ್ಯಾರೇ ಎನ್ನಲಿಲ್ಲ. ಮರುದಿನ, ಎರಡೂ ಸಮುದಾಯಗಳ ಹಲವು ಗ್ರಾಮಸ್ಥರು ಎಸ್‌ಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ನಂತರ ಎಫ್‌ಐಆರ್ ದಾಖಲಿಸಲಾಯಿತು. ಕೋಮು ದ್ವೇಷದಿಂದ ಪೊಲೀಸರು ಒಂದು ಮುಗ್ಧ ಹಸುಳೆಯ ವಿರುದ್ಧ ನಡೆಸಿದ ಈ ಹೇಯ ಅಪರಾಧವು ಭಾರಿ ಅಪಾಯದ ಮುನ್ಸೂಚನೆಯಾಗಿದೆ.

ಮಾರ್ಚ್ 4ರಂದು ಆಳ್ವಾರ್‌ನ ಕುಟುಂಬವನ್ನು ಭೇಟಿ ಮಾಡಿದ ಪಾಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಮತ್ತು ರಾಜಸ್ಥಾನ ರಾಜ್ಯ ಕಾರ್ಯದರ್ಶಿ ಕಿಶನ್ ಪಾರಿಖ್ ನೇತೃತ್ವದ ಸಿಪಿಐ(ಎಂ) ನಿಯೋಗವು ಈ ಘೋರ ಕೃತ್ಯವನ್ನು ಪೊಲೀಸರೇ ನಡೆಸಿದ್ದನ್ನು ದೃಢಪಡಿಸಿದೆ. ತಪ್ಪಿತಸ್ಥ ಪೊಲೀಸ್ ಸಿಬ್ಬಂದಿಯನ್ನು ತಕ್ಷಣವೇ ಬಂಧಿಸಬೇಕು ಹಾಗೂ ಕೊಲೆ ಮೊಕದ್ದಮೆ ಹೂಡಬೇಕು ಎಂದು ನಿಯೋಗದ ಸದಸ್ಯರು ಒತ್ತಾಯಿಸಿದ್ದಾರೆ.

ಅಧಿಕಾರಿಗಳು ಸುಪ್ರೀಂ ಕೋರ್ಟ್ ಆದೇಶಗಳನ್ನು ಉಲ್ಲಂಘಿಸಿದ್ದು ಹಾಗೂ ಮಕ್ಕಳು ಹಾಗೂ ಹಸುಗೂಸುಗಳ ವಿರುದ್ಧ ಪೊಲೀಸ್ ಸಿಬ್ಬಂದಿಯೇ ಅಪರಾಧ ನಡೆಸಿದ ರಾಜಸ್ಥಾನದಲ್ಲಿ ಪೊಲೀಸರ ಬರ್ಬರತೆಗೆ ಹಸುಗೂಸು ಸಾವಿಗೀಡಾದ ಪ್ರಕರಣಕ್ಕೆ ಸಾರ್ವಜನಿಕರ ಆಕ್ರೋಶ ದಾಖಲಿಸುವುದು ಹಾಗೂ ಸಂಘಪರಿವಾರದ ಧ್ರುವೀಕರಣ ರಾಜಕಾರಣಕ್ಕೆ ಪರಿಣಾಮಕಾರಿ ವಿರೋಧವನ್ನು ಕಟ್ಟುವುದು ಯಾವತ್ತಿಗಿಂತಲೂ ಹೆಚ್ಚು ಈ ಕಾಲದ ಅಗತ್ಯವಾಗಿದೆ. ಆಳ್ವಾರ್ ದೌರ್ಜನ್ಯದ ಪ್ರಕರಣದಲ್ಲಿ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗಟ್ಟಾಗಿ ಬಡ ಮುಸ್ಲಿಂ ಕುಟುಂಬಕ್ಕೆ ನ್ಯಾಯ ಸಿಗುವುದನ್ನು ಖಾತರಿಪಡಿಸಬೇಕಾಗಿದೆ.



ಸಿಪಿಐ(ಎಂ) ನಿಯೋಗ ಭೇಟಿ

ಅನು: ವಿಶ್ವ

'ಆಧ್ಯಾತ್ಮ ಮತ್ತು ನಂಬಿಕೆಯ ಸಂಗಮ'

ಇತ್ಯಾದಿ ವಿಶೇಷಣಗಳೊಂದಿಗೆ ಮತ್ತು ಪ್ರಧಾನಿ ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿಗಳ ಫೋಟೋಗಳೊಂದಿಗೆ ಭಾರೀ ಪ್ರಚಾರ ಪಡೆದ 45 ದಿನಗಳ 'ದಿವ್ಯ–ಭವ್ಯ–ಡಿಜಿಟಲ್ ಮಹಾಕುಂಭ 2025' ವ್ಯಾಪಾರೀ ದೃಷ್ಟಿಯಿಂದಲೂ ಅತ್ಯಂತ ಯಶಸ್ವಿಯಾಯಿತು ಎಂದು ಹೇಳಲಾಗಿದೆ. ಇದಕ್ಕೆ ಉದಾಹರಣೆಯಾಗಿ ಉತ್ತರಪ್ರದೇಶದ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಒಬ್ಬ ದೋಣಿಯವರು ವಿವಿಐಪಿಗಳು ಮತ್ತು ಸಾಮಾನ್ಯ ಯಾತ್ರಿಗಳನ್ನು ತಮ್ಮ ದೋಣಿಗಳಲ್ಲಿ ಪುಣ್ಯ ಸ್ನಾನ ಘಾಟ್‌ಗಳಿಗೆ ಒಯ್ದು, 45 ದಿನಗಳಲ್ಲಿ 30 ಕೋಟಿ ರೂ. ಸಂಪಾದಿಸಿದರು ಎಂದು ಅವರ ಮತ್ತು ತಮ್ಮ ಬೆನ್ನು ತಟ್ಟಿಕೊಂಡರು ಎಂದು ವರದಿಯಾಗಿತ್ತು.

ಆದರೆ ಮರುದಿನವೇ ಆತ ಒಬ್ಬ ದೊಡ್ಡ ಕ್ರಿಮಿನಲ್, ನೈನಿ ಪೋಲಿಸ್ ಠಾಣೆಯಲ್ಲಿ ಕೊಲೆ ಪ್ರಯತ್ನ, ಕೊಲೆಯೂ ಸೇರಿದಂತೆ ಆತನ ಮೇಲೆ ಒಂದು ಡಝನ್‌ಗಿಂತಲೂ ಹೆಚ್ಚು ಗಂಭೀರ ಕೇಸುಗಳು ದಾಖಲಾಗಿವೆ, ಇದರಲ್ಲಿ ಪವಿತ್ರ ಯಮನಾ ನದಿಯಲ್ಲಿ ಒಂದು ಹೀನ ಡಬಲ್ ಮರ್ಡರ್ ಕೂಡ ಇದೆ ಎಂದು ವರದಿಯಾಗಿದೆ.

130 ದೋಣಿಗಳ ಒಡೆಯನಾಗಿರುವ ಆತನ ಸೋದರರು ಮತ್ತು ತಂದೆ ಕೂಡ ಆತನಂತೆಯೇ ಹಿಸ್ಟರಿ–ಶೀಟರುಗಳು ಎಂದು ವರದಿಯಾಗಿದೆ. ಹೀಗಿರುವಾಗ 2019ರ ಕುಂಭಮೇಳದ ವೇಳೆಯಲ್ಲಿ ಅವರ ಬಳಿಯಿದ್ದ ದೋಣಿಗಳ ಸಂಖ್ಯೆ 70ರಿಂದ 2025ರಲ್ಲಿ 130 ಕ್ಕೇರಿದ ಅಚ್ಛೇ ದಿನ್‌ಗಳ ಬಗ್ಗೆ ಆಶ್ಚರ್ಯವೇನಿಲ್ಲ.

ಈ 'ಮಹಾಕುಂಭ'ದ ವೇಳೆಯಲ್ಲೂ ಫೆ.11 ರಂದು ಈತನೂ ಸೇರಿದಂತೆ 8 ಮಂದಿಯ ಮೇಲೆ ಇತರ ದೋಣಿಯವರನ್ನು ಅವರು ದೋಣಿ ನಡೆಸಬೇಕಾದರೆ 5000 ರೂ. ಕೊಡಬೇಕು ಎಂದು ಬೆದರಿಸಿದ ಪ್ರಕರಣ ದಾಖಲಾಗಿದೆ. ಅಂದರೆ ಮುಖ್ಯಮಂತ್ರಿಗಳು ಹೇಳಿದ 30 ಕೋಟಿಯಲ್ಲಿ ಇಂತಹ ಸಂಪಾದನೆಗಳೂ ಸೇರಿವೆ!

ಕುಂಭದಲ್ಲಿ ಗಳಿಕೆ ಮತ್ತು ಕ್ರೈಮ್



ವ್ಯಂಗ್ಯಚಿತ್ರ: ರಾಕೇಶ್ ರಂಜನ್, ಮೊಲಿಟಿಕ್ಸ್.ಇನ್





ಪಾರ್ಲಿಮೆಂಟ್ ಉದ್ಘಾಟನೆಯಲ್ಲಿ ರಾಷ್ಟ್ರಪತಿ ಮುರ್ಮು ಅವರನ್ನು ಗೈರು ಹಾಜರಾಗಿಸಿದ್ದು, ಕುಂಭಮೇಳದಲ್ಲಿ ಭಾಗವಹಿಸಿ ಗಂಗಾ ಸ್ನಾನ, ಇತ್ಯಾದಿ ಪ್ರಕರಣಗಳನ್ನು ಗಮನಿಸಬಹುದು. ಅವೈಜ್ಞಾನಿಕ ಮತ್ತು ಮೌಢ್ಯ ಕಂದಾಚಾರಗಳನ್ನು ಸರ್ಕಾರವೇ ಎತ್ತಿ ಹಿಡಿಯುವ ಮೂಲಕ ಅದು ತನ್ನ ವರ್ಗಗುಣವನ್ನು ದೃಢಗೊಳಿಸಿದಂತೆ, ಅರ್ಥಾತ್ ಸಮಾಜದಲ್ಲಿ ಮನುಸ್ಮೃತಿ ನಂಬಿಕೆಗಳನ್ನು ಗಟ್ಟಿಗೊಳಿಸಿದಂತೆ. ಈ ನಂಬಿಕೆಗಳು ಇನ್ನಷ್ಟು ಆಳಗೊಳ್ಳಬೇಕೆಂದರೆ, ಜನತೆಯ ಮೇಲೆ ಆರ್ಥಿಕ ಧಾಳಿಯನ್ನು ತೀವ್ರಗೊಳಿಸಬೇಕಾಗುತ್ತದೆ. ಆದ್ದರಿಂದಲೇ ಕೇಂದ್ರ ಸರ್ಕಾರವು ಕಾರ್ಪೋರೇಟ್ ಗಳೊಂದಿಗೆ ಸ್ನೇಹವನ್ನು ಬಲಗೊಳಿಸುತ್ತ, ದೇಶದ ಸಂಪತ್ತನ್ನು ಅವರಲ್ಲಿ ಕ್ರೋಢೀಕರಿಸುತ್ತಿದೆ. ಜನತೆಯ ಚಿತ್ತವು ಇತ್ತ ಬಾರದಂತೆ ಅವರ ನಡುವೆ ಕೋಮುವಾದಿ ಭಾವನೆ ಪ್ರಚೋದಾನತ್ಮಕ ಪ್ರಕರಣಗಳನ್ನು ಹೆಚ್ಚುಗೊಳಿಸಲಾಗುತ್ತಿದೆ.

ಮಹಿಳೆಯರ ಘನತೆಗೆ ಬಂದೊದಗಿರುವ ಅಪಾಯಗಳು

ಕೆ. ನೀಲಾ

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದಡೆ
ತನುವಿನ ಸೂತಕಕ್ಕೆ ತೆರಹುಂಟೆ
ಮುನ್ನಿಲ್ಲದ ಸೂತಕಕ್ಕೆ ಜಗ ಮರುಳಾಯಿತ್ತು
ಎನ್ನ ದೇವ ಚನ್ನಮಲ್ಲಿಕಾರ್ಜುನನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡಾ.

–ಅಕ್ಕಮಹಾದೇವಿ

ಈಚೆಗೆ ಇಶಾ ಫೌಂಡೇಷನ್ನಿನ ರಾಧೆ ಎಂಬ ಯುವತಿಯು ತನ್ನ ತಂದೆ ಜಗ್ಗಿ ವಾಸುದೇವನ ಪಾದವನ್ನು ಕೈಯಲ್ಲಿ ಹಿಡಿದು ಕೆಳಗೆ ಕುಳಿತ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಗಮನಿಸಿದ್ದೇನೆ. ಅವಳನ್ನು ಸೂತ್ರಧಾರನಂತೆ ಅವಳ ತಂದೆಯು ರ್‍ಯಾಂಪಿನ ಮೇಲೆ ತಿರುಗಿಸುವ ಸಂಗತಿಯೂ ನಡೆಯಿತು. ಅವಳು ಅತಿಭಾವುಕತೆಯಿಂದ ಗೊಂಬೆಯಂತೆ ತಿರುಗುತ ನಂತರ ತಂದೆಯ ಭುಜಕ್ಕೆ ಒರಗುತ್ತಾಳೆ. ಅನೇಕ ಭಕ್ತರು ಭಾವುಕತೆಯಿಂದ ಕಣ್ಣೀರು ಸುರಿಸುತ್ತಾರೆ. ಇಡೀ ಪ್ರಕರಣವು ಏನನ್ನು ಧ್ವನಿಸುತ್ತದೆ? ಮಹಿಳೆ ಪುರುಷನ ಅಡಿಯಾಳು. ಅವನು ಅವಳ ಸೂತ್ರಧಾರ. ಅವಳ ಸ್ಥಾನವು ಪುರುಷನ ಸೇವೆಯಲ್ಲಿ ಪದತಲದಲ್ಲಿ ಎಂಬುದನ್ನು ಆಧುನಿಕ ಯುಗಮಾನದಲ್ಲಿಯೂ ಜನಮಾನಸದಲ್ಲಿ ಮನುಸ್ಮೃತಿ ನಂಬಿಕೆಗಳನ್ನು ಬೇರೂರಿಸುವ ವಿದ್ಯಮಾನವಾಗಿದೆ.

ಮನೆಗೆಲಸ ಮಾಡುವ ಮಹಿಳೆಯ ಗಂಡನು ನಮ್ಮ ಸಾಂತ್ವನ ಕೇಂದ್ರಕ್ಕೆ ಬಂದು ಹೆಂಡತಿಯ ಮೇಲೆ ದೂರು ಕೊಟ್ಟನು. ಅವಳು ಪ್ರತಿದಿನ ರೊಟ್ಟಿ ಮಾಡುವುದಿಲ್ಲ. ಅವಳು ಎಂಟು ಮನೆಗಳ ಕೆಲಸ ಮಾಡಬೇಕು. ಇವನು ವಾರದಲ್ಲಿ ಒಂದು ಅಥವ ಎರಡು ದಿನ ಕೂಲಿ ಕೆಲಸಕ್ಕೆ ಹೋಗುವನು. ಉಳಿದ ದಿನ ಕುಡಿದು ಮನೆಯಲ್ಲಿ ಬೀದಿಯಲ್ಲಿ ದಿನಗಳೆಯುವನು. ಮಕ್ಕಳು ಮೂವರು. ಖರ್ಚಿಗೆ ಹಣ ಬೇಕಲ್ಲ. ಮನೆಯಲ್ಲಿ ರೊಟ್ಟಿ ಮಾಡಲು ಆಗದು. ಇವನಿಗೆ ರೊಟ್ಟಿ ಬೇಕು. ನಾನು ಅವಳ ಗಂಡನಿಗೆ ಹೇಳಿದೆ, 'ರೊಟ್ಟಿ ಮಾಡುವುದು ಕೈಗಳು. ನೀನು ಮಾಡು' ಅವನಿಗೆ ಸಿಟ್ಟು ಬಂತು. 'ಅಡಿಗೆ ಕೆಲಸ ಅದರಲ್ಲಿಯೂ ರೊಟ್ಟಿ ಮಾಡುವ ಕೆಲಸ ಹೆಂಗಸಿನದ್ದು. ನಾನು ಗಂಡಸು. ರೊಟ್ಟಿ ಮಾಡಿದರೆ ತನ್ನ ಮರ್ಯಾದೆ ಗತಿ ಏನು?' ಅವಳು ಹೇಳಿದಳು 'ನನಗೆ ಇವನ ಜೊತೆ ಏಗಲು ಆಗದು. ಮನೆ ಖರ್ಚಿಗೆ ಒಂದು ಪೈಸೆ ಕೊಡೊಲ್ಲ. ಕುಡಿದು ಬಂದು ಜಗಳ ಮಾಡುವುದಷ್ಟೆ ಗೊತ್ತು....' ಕಣ್ಣೀರು ಧಾರೆಗಟ್ಟಿತು. ಅವನ ಸಿಟ್ಟು ಅವಡುಗಟ್ಟಿತು. ನಾನೊಂದು ಪರಿಹಾರ ಹೇಳಿದೆ ಅವನಿಗೆ, 'ನೋಡಪ್ಪಾ, ಒಂದು ಮನೆಯ ಕೆಲಸ ಬಿಟ್ಟು ಮನೆಯಲ್ಲಿ ರೊಟ್ಟಿ ಮತ್ತು ಪೂರ್ಣ ಅಡುಗೆ ಮಾಡುತ್ತಾಳೆ. ಅದಕ್ಕಾಗಿ ನೀನು ಅವಳಿಗೆ ಪಗಾರ ಕೊಡಬೇಕು'. ಅವನು ನಿರಾಕರಿಸಿದ ಕಿಡಿಯಾದ. ಅವಳು ಮನೆಗೆಲಸಕ್ಕೆ ಹೋದಳು.

ಮೇಲಿನ ಎರಡೂ ಪ್ರಕರಣಗಳೂ ಸಮಾಜದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಮಹಿಳೆಯ ಸ್ಥಾನಮಾನಕ್ಕೆ ಕನ್ನಡಿ ಹಿಡಿಯುತ್ತದೆ. ಈ ಹೊತ್ತಿನ ದಿನಮಾನಗಳು ಇನ್ನೂ ಸಂಕೀರ್ಣವಾಗುತ್ತಿವೆ. ಜಗತ್ತೇ ಬಲಪಂಥೀಯತೆಯತ್ತ ವಾಲುತ್ತಿರುವುದರಿಂದ ಭಾರತದಂತಹ ದೇಶದ ಸಮಗ್ರ ವಿಭಾಗಗಳ ಮೇಲೆ ಅದರ ಪರಿಣಾಮಗಳು ಘಟಿಸುತ್ತಿವೆ. ಭಾರತದ ಕೇಂದ್ರ ಸರಕಾರವು ಆರ್‌ಎಸ್‌ಎಸ್ ಅಜೆಂಡಾ ಜಾರಿ ಮಾಡುತ್ತಿರುವುದರಿಂದ ಸ್ವಾತಂತ್ರ್ಯಾನಂತರ ಪಡೆದುಕೊಂಡ ಸಾಂವಿಧಾನಿಕ ಅಲ್ಪ ಸೌಲಭ್ಯಗಳನ್ನು ಸಹ ಕಿತ್ತುಕೊಳ್ಳುತ್ತಿದೆ. ಒಂದೆಡೆ ಆರ್ಥಿಕ ಧಾಳಿ, ಮತ್ತೊಂದೆಡೆ ಸಾಮಾಜಿಕ ತಾರತಮ್ಯವನ್ನು ಗಟ್ಟಿಗೊಳಿಸುವ ಸಾಂಸ್ಕೃತಿಕ ಅಜೆಂಡಾಗಳನ್ನು ಜಾರಿ ಮಾಡುತ್ತಿದೆ. ಅರ್ಥಾತ್ ಸಂವಿಧಾನವನ್ನು ಅಮೌಲ್ಯಗೊಳಿಸಿ ಮನುಸ್ಮೃತಿಯ ಧೋರಣೆಗಳನ್ನು ಚಾಲ್ತಿಗೆ ತರುವಲ್ಲಿ ಪ್ರದಾನ ಮಂತ್ರಿ ನರೇಂದ್ರ ಮೋದಿಯೇ ಸ್ವತಃ ಕಾರ್ಯತತ್ಪರರಾಗಿದ್ದಾರೆ. ಪಾರ್ಲಿಮೆಂಟ್ ಉದ್ಘಾಟನೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಗೈರು ಹಾಜರಾಗಿಸಿದ್ದು, ಕುಂಭಮೇಳದಲ್ಲಿ ಭಾಗವಹಿಸಿ ಗಂಗೆಸ್ನಾನ ಮಾಡಿದ್ದು ಇತ್ಯಾದಿ ಪ್ರಕರಣಗಳು ಗಮನಿಸಬಹುದು. ಅವೈಜ್ಞಾನಿಕ ಮತ್ತು ಮೌಢ್ಯ ಕಂದಾಚಾರಗಳನ್ನು ಸರಕಾರವೇ ಎತ್ತಿ ಹಿಡಿಯುವ ಮೂಲಕ ಅದು ತನ್ನ ವರ್ಗ ಗುಣವನ್ನು ದೃಢಗೊಳಿಸಿದಂತೆ. ಅರ್ಥಾತ್ ಸಮಾಜದಲ್ಲಿ ಮನುಸ್ಮೃತಿ ನಂಬಿಕೆಗಳನ್ನು ಗಟ್ಟಿಗೊಳಿಸಿದಂತೆ. ಈ ನಂಬಿಕೆಗಳು ಇನ್ನಷ್ಟು ಆಳಗೊಳ್ಳಬೇಕೆಂದರೆ ಜನತೆಯ ಮೇಲೆ ಆರ್ಥಿಕ ಧಾಳಿಯು ತೀವ್ರಗೊಳಿಸಬೇಕಾಗುತ್ತದೆ. ಆದ್ದರಿಂದಲೇ ಕೇಂದ್ರ ಸರಕಾರವು ಕಾರ್ಪೋರೆಟ್‌ಗಳೊಂದಿಗೆ ಸ್ನೇಹವನ್ನು ಬಲಗೊಳಿಸುತ್ತ ದೇಶದ ಸಂಪತ್ತನ್ನು ಅವರಲ್ಲಿ ಕ್ರೋಢೀಕರಿಸುತ್ತಿದೆ. ಜನತೆಯ ಚಿತ್ತವು ಇತ್ತ ಬಾರದಂತೆ ಅವರ ನಡುವೆ ಕೋಮುವಾದಿ ಭಾವನೆ ಪ್ರಚೋದನಾತ್ಮಕ ಪ್ರಕರಣಗಳನ್ನು ಹೆಚ್ಚುಗೊಳಿಸಲಾಗುತ್ತಿದೆ.

ಮಣಿಪುರದಲ್ಲಿ ಹೊತ್ತಿ ಉರಿಯುತ್ತಿರುವ ಬೆಂಕಿಯಲ್ಲಿ ಮಹಿಳೆಯನ್ನು ದಹಿಸಲಾಗುತ್ತಿದೆ. ಬಹಿರಂಗವಾಗಿಯೇ ಸಾಮೂಹಿಕ ಅತ್ಯಾಚಾರಗಳು ನಡೆದರೂ ಪ್ರದಾನಿ ಮೋದಿಯವರು ಪ್ರತಿಕ್ರಿಯಿಸಲಿಲ್ಲ. ಬಿಜೆಪಿ ಸರಕಾರ ಇದ್ದೆಡೆಯಲ್ಲಿ ಇಂತಹ ಅಮಾನವೀಯ ಕ್ರೌರ್ಯದ ಪ್ರಕರಣಗಳು ಪ್ರಭುತ್ವ ಪೋಷಣೆಯಲ್ಲಿ ಹೆಚ್ಚುತ್ತಿವೆ. ದಲಿತರ ಮೇಲಿನ ದೌರ್ಜನ್ಯವು ಅತಿ ಹೆಚ್ಚು ಘಟಿಸುತ್ತಿರುವುದು ಉತ್ತರ ಪ್ರದೇಶದಲ್ಲಿ. 13,146 ದೌರ್ಜನ್ಯದ ಪ್ರಕರಣಗಳಲ್ಲಿ ಶೇ. 25ರಷ್ಟು ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳೇ ಆಗಿವೆ. ದಲಿತ ಮಹಿಳೆಯರು ಇನ್ನೂ ಭಯಾನಕವಾಗಿ ಕೊಲೆ, ಅತ್ಯಾಚಾರ, ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾರೆ.

ಬಿಜೆಪಿ ಆಡಳಿತದಲ್ಲಿ ದೇಶದ ಮಹಿಳೆಯರ ಘನತೆಯ ಬದುಕಿಗೆ ಅಪಾಯ ಒದಗಿದೆ. ಬಹಿರಂಗವಾಗಿಯೇ ಸಂವಿಧಾನವನ್ನು ಕಿತ್ತುಹಾಕುವ ಮತ್ತು ಹಿಂದೂ ಸಂವಿಧಾನ ತರುವ ಮಾತುಗಳನ್ನು ಆರ್‌ಎಸ್‌ಎಸ್‌ನ ರಾಜಕೀಯ ವಿಭಾಗವಾದ ಬಿಜೆಪಿ ಮತ್ತು ವಿಶ್ವ ಹಿಂದೂ ಪರಿಷತ್, ಭಜರಂಗದಳ, ಶ್ರೀರಾಮಸೇನೆ ಮುಂತಾದ ಹಿಂದೂತ್ವವಾದಿ ಸಂಘಟನೆಗಳು ನಿರ್ಭಯವಾಗಿ ಆಡುತ್ತಿದ್ದಾರೆ. 2025ರಲ್ಲಿ ಭಾರತವನ್ನು ಹಿಂದೂ ರಾಷ್ಟ್ರವಾಗಿ ಘೋಷಿಸುವ ಇರಾದೆ ಅದಕ್ಕಿದೆ. ಅದಕ್ಕಾಗಿ ಅದು ಮಹಿಳೆಯರ ಮಾನಸಿಕ ಸ್ಥಿತಿಯನ್ನು ತನ್ನೆಡೆಗೆ ಸೆಳೆಯಲು ವಿವಿಧ ರೂಪದಲ್ಲಿ ವಿವಿಧ ಆಯಾಮದಿಂದ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಅದರ ಒಂದು ಝಲಕ್ ಇಶಾ ಫೌಂಡೇಷನ್ನಿನ ಜಗ್ಗಿ ಕಾರ್ಯಕ್ರಮ. ಮಹಿಳೆಯರೇ ಸ್ವತಃ ಮನುಸ್ಮೃತಿಯ ಆರಾಧಕರಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಮತ್ತು ಇದೇ ಸಂದರ್ಭದಲ್ಲಿ ಅವರನ್ನು ಆರ್ಥಿಕವಾಗಿಯೂ ಸದೆ ಬಡಿಯಲಾಗುತ್ತಿದೆ. ಇದಕ್ಕೆ ಅಲ್ಪಸಂಖ್ಯಾತ ಮಹಿಳೆಯರನ್ನು ಮೊದಲಿಗೆ ಸದೆಬಡಿಯುವ ಭಾಗವಾಗಿಯೇ ಮುಸ್ಲಿಂ ಸಮುದಾಯದ ಆರ್ಥಿಕತೆಯನ್ನು ಕಿತ್ತುಕೊಳ್ಳುವ ಕಾರ್ಯಕ್ರಮ ಜಾರಿಗೊಳಿಸಲಾಗಿತ್ತದೆ. ಮತ್ತು ಅವರ ಮೇಲೆ ಕೋಮುವಾದಿ ಧಾಳಿ ಎಸಗಲಾಗುತ್ತಿದೆ. ಇದರಿಂದ ಸಹಜವಾಗಿಯೇ ಆ ಸಮುದಾಯದ ಮಹಿಳೆಯರು ಎಲ್ಲ ದೃಷ್ಟಿಯಿಂದಲೂ ನಿಯಂತ್ರಣಕ್ಕೊಳಗಾಗುವರು.

ಹಾಗೆಯೇ ಆದಿವಾಸಿ, ಬುಡಕಟ್ಟು, ದಲಿತ, ಹಿಂದುಳಿದ ಮತ್ತು ಬಡತನದಲ್ಲಿರುವ ಸಮುದಾಯಗಳನ್ನು, ಅಲ್ಲಿನ ಮಹಿಳೆಯರನ್ನು ಗುರಿಯಾಗಿಸಲಾಗುತ್ತಿದೆ. ಈ ಗುರಿಯ ಭಾಗವಾಗಿಯೇ ಅರಣ್ಯ ಸಂರಕ್ಷಣೆ ಮತ್ತು ಪರಿಸರದ ಕಾಯ್ದೆಗೆ ತಂದ ತಿದ್ದುಪಡಿ, ರೈತರ ವಿರೋಧಿ ಕಾಯ್ದೆಗಳು, ಕಾರ್ಮಿಕರ ದುಡಿಮೆಯ ಅವಧಿಯ ಹೆಚ್ಚಳ ಇತ್ಯಾದಿ ಗಮನಿಸಬಹುದು. ಇದೆಲ್ಲವೂ ಮಹಿಳಾ ಉದ್ಯೋಗ, ಸಾಮಾಜಿಕ ಪರಿಸ್ಥಿತಿಯ ಮೇಲೆ ತೀವ್ರ ಪರಿಣಾಮ ಬೀರುವುದು.

ಏನಿದೆ ಮಹಿಳೆಯರ ಪರಿಸ್ಥಿತಿ

ಮಹಿಳೆಯರು ಒಟ್ಟು ಜನಸಂಖ್ಯೆಯ ಅರ್ಧಕ್ಕೆ ಹತ್ತಿರದಲ್ಲಿ ಇರುವರು. ಮಹಿಳೆಯನ್ನು ಮತ್ತೆ ಮತ್ತೆ ಪ್ರಪಾತಕ್ಕೆ ತಳ್ಳುವ, ಅವಳನ್ನು ಬಿಟ್ಟಿ ಚಾಕರಿಗೆ ಈಡಾಗಿಸುವ ವಿದ್ಯಮಾನಗಳು ಇನ್ನಷ್ಟು ಗಟ್ಟಿಗೊಳ್ಳುತ್ತಲೇ ಸಾಗಿದೆ. ಅವಳನ್ನು ದುರ್ಬಲಳಂತೆ ಬಿಂಬಿಸಲಾಗುತ್ತಿದೆ. ಉದ್ಯೋಗದಿಂದ, ದುಡಿಮೆಗೆ ತಕ್ಕ ವೇತನದಿಂದ, ಘನತೆಯ ಬದುಕಿನಿಂದ ನಿರಾಕರಿಸಲಾಗುತ್ತಿದೆ. ಆದರೆ ಚರಿತ್ರೆಯು ಬೇರೆಯದನ್ನೇ ಹೇಳುತ್ತದೆ. ಭೂಮಿಯ ಮೇಲಿನ ಮನುಷ್ಯರ ಉಗಮ ವಿಕಾಸದಲ್ಲಿ ಮಹಿಳೆಯ ಹೆಜ್ಜೆ ಗುರುತುಗಳು ದುರ್ಬಲವಾಗಿಲ್ಲ. ಬೇಟೆಯ ನಾಯಕತ್ವ ಅವಳದ್ದೇ ಆಗಿತ್ತು. ಒಡಲಲ್ಲಿ ಒಂಬತ್ತು ತಿಂಗಳು ಮಗು ಸಲುಹಿ ಬೇಟೆಯಾಡಿ, ಜೀವದ ಹಂಗು ತೊರೆದು ಮಗುವಿಗೆ ಜನ್ಮ ಕೊಡುವ ಹೆಣ್ಣನ್ನು ಮಾನ್ಯಳಾಗಿದ್ದ ಕಾಲವು ಚರಿತ್ರೆಯಲ್ಲಿ ಕಾಣುವಿರಿ. ಬಹಳ ದೂರ ಹೋಗುವುದು ಬೇಡ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಭಾಗಿದಾರಿಕೆಯು ಅಧಿಕವಾಗಿದೆ. ಜಗತ್ತು 2ನೇ ಮಹಾಯುದ್ಧದಲ್ಲಿ ಹೈರಾಣಾಗುವಾಗ, ಹಿಟ್ಲರ್‌ನ ಫ್ಯಾಸಿಸಂ ಲಕ್ಷಗಟ್ಟಲೆ ಜನತೆಯನ್ನು ಜನಾಂಗೀಯ ಹಿಂಸೆಗೆ ತಳ್ಳಿ ದಾರುಣ ಹತ್ಯಾಕಾಂಡ ನಡೆಸುವಾಗ ನಾಜಿ ಸೈನ್ಯವನ್ನು ಸೋಲಿಸಿದ್ದು ರಷಿಯಾ. ನಾಜಿವಾದಿ ಸೈನ್ಯವನ್ನು ಸೋಲಿಸುವಲ್ಲಿ ಬಹುದೊಡ್ಡ ಸಂಖ್ಯೆಯ ಮಹಿಳೆಯರ ತ್ಯಾಗವಿದೆ. ಫ್ಯಾಸಿಸಂಗೆ ಬಲಿಯಾದವರಲ್ಲಿ ಟಿಪ್ಪು ಸುಲ್ತಾನರ ಮರಿಮೊಮ್ಮಗಳು ನೂರ್ ಇನಾಯತ್ ಸಹ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಈಗಾಗಲೇ ದಾಖಲಾದ ಮಹಿಳೆಯರ ಹೆಸರುಗಳಾಚೆಗೂ ಆದಿವಾಸಿ, ಬುಡಕಟ್ಟು, ದಲಿತ ಸಮುದಾಯದ ಮಹಿಳೆಯರ ಸಂಖ್ಯೆಯ ಅಗಾಧವಾಗಿದೆ. ಫೂಲೊ ಝಾನೊ, ಮಾನಕಿ, ರುಕ್ಮಿಣಿ ಮುಂತಾದವರು 1856ರಲ್ಲಿ ಬ್ರಿಟಿಷ್ ಸೈನ್ಯದ ವಿರುದ್ಧ ಝಾರಖಂಡ್‌ನ ಸಂತಾಲ ಸಮುದಾಯದ ಈ ಮಹಿಳೆಯರು ಸಮರಧೀರ ಲಡಾಯಿ ಮಾಡಿದ್ದಾರೆ. 1857ರಲ್ಲಿ ಝಾನ್ಸಿಯ ಲಕ್ಷ್ಮಿಬಾಯಿ, ಅವಧನ ಬೇಗಂ ಹೆಸರು ಕೇಳಿದ್ದೇವೆ. ಅದರೆ ಸಾಮಾನ್ಯ ಮಹಿಳೆ ಝಲಕರಿಬಾಯಿ ಮತ್ತು ಅನೇಕ ಮಹಿಳೆಯರು ಹೋರಾಡಿದ್ದಾರೆ. ಅಸಹಕಾರ ಚಳುವಳಿಯಲ್ಲಿ ಬಸಂತಿದೇವಿ, ಉರ್ಮಿಳಾದೇವಿ ಮುಂತಾದ ಸಾಮಾನ್ಯ ಮಹಿಳೆಯರು ಹೋರಾಡಿದ್ದಾರೆ.

ಅಚ್ಚರಿ ಎಂದರೆ 1920ರ ಅಸಹಕಾರ ಚಳುವಳಿಯಲ್ಲಿ ಪೂರ್ವ ಗೋದಾವರಿ ಜಿಲ್ಲೆಯಿಂದ ದುರ್ಗಾಬಾಯಿ ದೇಶಮುಖ ಎಂಬ ಯುವತಿಯು ಮಹಾತ್ಮಾ ಗಾಂಧಿಯವರನ್ನು ಭೇಟಿ ಮಾಡಲು 1000 ಜನ ದೇವದಾಸಿ ಮಹಿಳೆಯರನ್ನು ಒಟ್ಟುಗೂಡಿಸಿದ್ದಳು. ಅಂತೆಯೇ 2ನೇ ಮಹಾಯುದ್ಧ ಸಂದರ್ಭದಲ್ಲಿ ಸಿಂಗಾಪುರನಲ್ಲಿ ಸುಭಾಷ ಚಂದ್ರ ಬೋಸ ಅವರ ಇಂಡಿಯನ್ ಇಂಡಿಪೆಂಡೆಂಟ್ ಲೀಗ್‌ನ ಝಾನ್ಸಿ ರಾಣಿ ಲಕ್ಷ್ಮಿಬಾಯಿ ರೆಜಿಮೆಂಟ್ ನಲ್ಲಿ 1000ದಷ್ಟು ಮಹಿಳೆಯರು ನರ್ಸ್, ಸೈನಿಕ ರೂಪದಲ್ಲಿ ಭಾಗವಹಿಸಿರುವರು. ರೆಜಿಮೆಂಟ್‌ಗೆ ಕ್ಯಾಪ್ಟನ್ ಆಗಿ ಡಾ.ಲಕ್ಷ್ಮಿ ಸೆಹೆಗಲ್ ಇದ್ದರು. ಜಾನಕಿ ಥೆವರ್‌ನಂತಹ ಅನೇಕ ಮಹಿಳೆಯರು ತ್ಯಾಗ ಬಲಿದಾನ ಮಾಡಿರುವರು.

ದಾಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ತಾವು ಭಾಗವಹಿಸುವುದಾಗಿ ಆಗ್ರಹಿಸಿ ಮಹಿಳೆಯರು (ಕಮಲಾದೇವಿ ಚಟೋಪಾಧ್ಯಾಯ) ತೊಡಗಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಎಲ್ಲ ಸ್ಥರದ ಹೋರಾಟದಲ್ಲಿ ಮಹಿಳೆಯರು ಸಾಂಪ್ರದಾಯಿಕ ಕಟ್ಟು ಪಾಡುಗಳನ್ನು ಕಿತ್ತೊಗೆದು ಭಾಗವಹಿಸಿದ್ದಾರೆ. ಬಂಧನ, ಹಿಂಸೆ, ಕೊಲೆಗೆ ಒಳಗಾಗಿದ್ದಾರೆ.

ಈ ವೀರಾಂಗನೆಯರ ಕತೆಗಳು ಚರಿತ್ರೆಯಲ್ಲಿ ಮಸಳಿಸುವ ಪ್ರಯತ್ನಗಳೂ ನಡೆದಿವೆ. ಮಹಿಳೆಯರು ತಮ್ಮ ಮೇಲೆ ಹೇರಲ್ಪಟ್ಟ ಸ್ತ್ರೀತ್ವದ ಭ್ರಮಾತ್ಮಕ ಮಿಥ್‌ಗಳನ್ನು ಅತ್ಯಂತ ದೃಢವಾಗಿ ಸಾಮೂಹಿಕವಾಗಿ ಒಡೆದು, ಆರ್ಥಿಕ ಸಾಮಾಜಿಕ ರಾಜಕೀಯ ಹಕ್ಕುಗಳತ್ತ ಅಸಂಖ್ಯದೋಪಾದಿಯಲ್ಲಿ ಮುನ್ನುಗ್ಗಿದ್ದು 1920ರ ನಂತರದಲ್ಲಿ. ಜಗತ್ತು ಸಮಾಜವಾದದತ್ತ ಹೊರಳುವಂತೆ ಮಾಡಿದ, ಮನುಷ್ಯರಿಂದ ಮನುಷ್ಯರ ಮೇಲೆ ನಡೆಸಲಾಗುತ್ತಿರುವ ಶೋಷಣೆಯನ್ನು ತಪ್ಪಿಸಿ

ಪುಟ 14ಕ್ಕೆ



ಎ.ಆರ್. ಸಿಂಧು
ರಾಷ್ಟ್ರೀಯ ಕಾರ್ಯದರ್ಶಿ, ಸಿಐಟಿಯು

"ಮಹಿಳೆಯರ ವಿಮೋಚನೆ ಸಾಧ್ಯವಾಗಬೇಕೆಂದರೆ ಮಹಿಳೆಯು ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಉತ್ಪಾದನೆಯಲ್ಲಿ ಭಾಗವಹಿಸಿದಾಗ ಮಾತ್ರ. ಆದರೆ, ಮನೆ ಕೆಲಸವೆಂಬುದು ಸಾಮಾಜಿಕ ಉತ್ಪಾದನೆಯ ಭಾಗವಾಗದೆ, ಅತ್ಯಲ್ಪ ಕೆಲಸವೆಂದು ಪರಿಗಣಿಸಲ್ಪಟ್ಟು, ಬೇರೆ ಏನನ್ನೂ ಹೇಳಿಕೊಳ್ಳುವುದಿಲ್ಲ."

ಫ್ರೆಡ್ರಿಕ್ ಎಂಗೆಲ್ಸ್, (ಕುಟುಂಬದ ಮೂಲ, ಖಾಸಗಿ ಆಸ್ತಿ ಮತ್ತು ಪ್ರಭುತ್ವ ಎಂಬ ಕೃತಿಯಲ್ಲಿ)

ಅಂತರರಾಷ್ಟ್ರೀಯ ಮಹಿಳಾ ದಿನ 2025

ಶೋಷಣಾ ಆಡಳಿತವನ್ನು ಬದಲಾಯಿಸಲು ಸಂಘಟಿತರಾಗಿ ಮತ್ತು ಸಮಾಜವಾದಿ ಪರಂಪರೆಯನ್ನು ಎತ್ತಿ ಹಿಡಿಯಿರಿ

ಆಗಸ್ಟ್ 1910ರಲ್ಲಿ, ಡೆನ್ಮಾರ್ಕ್ ದೇಶದ ಕೋಪನ್ ಹ್ಯಾಗನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮ್ಮೇಳನದಲ್ಲಿ, ಜರ್ಮನ್ ಕ್ರಾಂತಿಕಾರಿ ಮತ್ತು ಸಮಾಜವಾದಿ ನಾಯಕಿ ಕ್ಲಾರ ಜೆಟ್ಕಿನ್‌ರವರು ಮಂಡಿಸಿ, ಅಂಗೀಕರಿಸಿದ ಮಹಿಳಾ ದಿನಾಚರಣೆಯ ಕುರಿತಾದ ನಿರ್ಣಯವು ಹೀಗೆ ಹೇಳುತ್ತದೆ. ತಮ್ಮ ದೇಶಗಳ ಶ್ರಮಜೀವಿಗಳ ವರ್ಗಪ್ರಜ್ಞೆಯು, ಆಯಾ ದೇಶಗಳ ರಾಜಕೀಯ ಮತ್ತು ಟ್ರೇಡ್ ಯೂನಿಯನ್ ಸಂಘಟನೆಗಳೊಂದಿಗೆ ಒಳಗೊಂಡ ಒಪ್ಪಂದದಂತೆ, ಎಲ್ಲಾ ದೇಶಗಳ ಮಹಿಳೆಯರು ಕೂಡ ಪ್ರತಿ ವರ್ಷ ಮಹಿಳಾ ದಿನವನ್ನು ಸಮಾಜವಾದಿ ಪ್ರಜ್ಞೆಯೊಂದಿಗೆ ಆಚರಿಸುತ್ತಾರೆ. ಇದರ ಪ್ರಮುಖ ಉದ್ದೇಶವು ಮಹಿಳಾ ಮತದಾನದ ಹಕ್ಕನ್ನು ಸಾಧಿಸಲು ಸಹಾಯ ಮಾಡುವುದು. ಈ ಬೇಡಿಕೆಯನ್ನು ಸಮಾಜವಾದಿ ನಿಯಮಗಳ ಪ್ರಕಾರ ಸಂಪೂರ್ಣ ಮಹಿಳಾ ಪ್ರಶ್ನೆಯೊಂದಿಗೆ ಸಂಯೋಜಿಸಬೇಕು. ಮಹಿಳಾ ದಿನವು ಅಂತರರಾಷ್ಟ್ರೀಯ ಸ್ವರೂಪವನ್ನು ಹೊಂದಿರಬೇಕು. ಆ ನಿಟ್ಟಿನಲ್ಲಿ ಎಚ್ಚರಿಕೆಯಿಂದ ಸಜ್ಜುಗೊಳಿಸಿ ಆಚರಿಸಬೇಕು ಎಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕುರಿತಂತೆ ನಿರ್ಣಯವು ಹೇಳುತ್ತದೆ.

ಸಮಾಜವಾದಿ ಮಹಿಳೆಯರ ಉಪಕ್ರಮ ಮತ್ತು ಸಮಾಜವಾದಿ ದೃಷ್ಟಿಕೋನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ ಹೀಗೆ ಹುಟ್ಟಿಕೊಂಡಿತು. ಎಂಟು ಗಂಟೆಗಳ ಕೆಲಸದ ದಿನಕ್ಕಾಗಿ, ಅಮಾನವೀಯ ಕೆಲಸದ ಪರಿಸ್ಥಿತಿಗಳ ವಿರುದ್ಧ ಮತ್ತು ಮಹಿಳೆಯರ ಮತದಾನದ ಹಕ್ಕುಗಳಿಗಾಗಿ ಹೋರಾಡಿದ ಮಹಿಳಾ ಕಾರ್ಖಾನೆ ಕಾರ್ಮಿಕರ ಹೋರಾಟಗಳು ಮತ್ತು ಬೇಡಿಕೆಗಳನ್ನು ಸ್ಮರಿಸಿಕೊಳ್ಳುತ್ತಾ, ಮತ್ತಷ್ಟು ಮುಂದಕ್ಕೆ ಹೋರಾಟವನ್ನು ಕೊಂಡೊಯ್ಯಲು, ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಪ್ರಾರಂಭಿಸಲಾಯಿತು. ಆದರೆ, ವಿಶ್ವಸಂಸ್ಥೆಯು 1975ರಿಂದ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯನ್ನು ಆಚರಿಸಲು ಪ್ರಾರಂಭಿಸಿತು.

ಪ್ರಸ್ತುತ, ವಿಶೇಷವಾಗಿ ನಮ್ಮ ದೇಶದಲ್ಲಿ, ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಮತ್ತು ಅದರ ಸಮಾಜವಾದಿ ಮತ್ತು ವರ್ಗ ಮೂಲಗಳ ಪರಂಪರೆಯನ್ನು ಮರೆಮಾಚಿಸುವ ಸಂಘಟಿತ ಪ್ರಯತ್ನ ತೀವ್ರವಾಗಿ ನಡೆಯುತ್ತಿದೆ. ನವ ಉದಾರವಾದದ ಹಿನ್ನೆಲೆಯಲ್ಲಿ, ಮುಕ್ತ ಮಾರುಕಟ್ಟೆಯ ಭಾಗವಾಗಿ, ಮಹಿಳಾ ದಿನಾಚರಣೆಯನ್ನು ವಾಣಿಜ್ಯೀಕರಣಗೊಳಿಸಲಾಗುತ್ತಿದೆ. ಗೃಹೋಪಯೋಗಿ ಉಪಕರಣಗಳನ್ನು ಖರೀದಿಸಲು, ರಿಯಾಯಿತಿಗಳನ್ನು ಪಡೆಯಲು ಮತ್ತು ಮಹಿಳೆಯರಿಗೆ 'ಉಡುಗೊರೆಗಳನ್ನು' ನೀಡಲು ಈ ದಿನವನ್ನು ಬಳಸಿಕೊಳ್ಳಲಾಗುತ್ತಿದೆ. ಈ ದಿಸೆಯಲ್ಲಿ ಮಹಿಳೆಯರ ಸಾಧನೆಗಳನ್ನು ಯೋಜಿಸಿ ಪಟ್ಟಿ ಮಾಡಲಾಗಿದೆ. ಅದೇ ಸಮಯದಲ್ಲಿ, ಮಹಿಳೆಯರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಮತ್ತು ತಾರತಮ್ಯಗಳನ್ನು ಮಾಧ್ಯಮಗಳಲ್ಲಿ ಸ್ವಲ್ಪ ಮಟ್ಟಿಗೆ ಚರ್ಚಿಸಲಾಗುತ್ತಿದೆ. ಆದರೆ ಅವು ಮುಖ್ಯವಾಗಿ ಸಾಮಾಜಿಕ ಅಸಮಾನತೆಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳ ವಿಷಯಗಳ ಮೇಲೆ ಕೇಂದ್ರೀಕೃತವಾಗಿವೆ.

ಮಹಿಳಾ ಸಮಾನತೆ ಮತ್ತು ವಿಮೋಚನೆಯತ್ತ ಹೆಜ್ಜೆ ಹಾಕಲು ಅಗತ್ಯವಾದ ಮೂಲಭೂತ ವರ್ಗ ಪ್ರಶ್ನೆಗಳು ಮತ್ತು ಮೂಲಭೂತ ಬದಲಾವಣೆಗಳು ವಿರಳವಾಗಿ ಚರ್ಚೆಯಾಗುತ್ತವೆ. ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯು ವ್ಯವಸ್ಥಿತ ಬಿಕ್ಕಟ್ಟಿನಲ್ಲಿರುವಾಗ ನಾವು ಈ ವರ್ಷ ಅಂತರರಾಷ್ಟ್ರೀಯ ದಿನ' ವನ್ನು ಆಚರಿಸುತ್ತಿರುವಾಗ, ದುಡಿಯುವ ಮಹಿಳಾ ಚಳುವಳಿಯು ಈ ಶೋಷಣೆ ಮತ್ತು ತಾರತಮ್ಯದ ವ್ಯವಸ್ಥೆಯನ್ನು ಮೀರುವ ನಿಟ್ಟಿನಲ್ಲಿ ನಮ್ಮ ಚಳುವಳಿ ಮತ್ತು ಹೋರಾಟವನ್ನು ಒಂದು ಹೆಜ್ಜೆ ಮುಂದೆ ಕೊಂಡೊಯ್ಯುವುದು ಬಹಳ ಮುಖ್ಯವಾಗಿದೆ.

ಫ್ರೆಡ್ರಿಕ್ ಎಂಗೆಲ್ಸ್‌ರು, 'ಕುಟುಂಬದ ಮೂಲ, ಖಾಸಗಿ ಆಸ್ತಿ ಮತ್ತು ರಾಜ್ಯ ಪ್ರಭುತ್ವ ಎಂಬ ಅವರ ಪ್ರಮುಖ ಕೃತಿಯಲ್ಲಿ' ಜೈವಿಕದ 'ಮಾನಸಿಕ' ಕಾರಣಗಳಿಗಾಗಿ ಮಹಿಳೆಯರ ಅಧೀನ ಸ್ಥಾನಮಾನವನ್ನು ಸಮರ್ಥಿಸುವ ಸಿದ್ಧಾಂತಗಳನ್ನು ಬಹಿರಂಗಪಡಿಸಿದ್ದಾರೆ. ಖಾಸಗಿ ಆಸ್ತಿ ಮತ್ತು ಏಕಪತ್ನಿ ಕುಟುಂಬದ ಅಭಿವೃದ್ಧಿಯೊಂದಿಗೆ ಮಹಿಳೆಯರ ದಬ್ಬಾಳಿಕೆಗೆ ಅದರ ವರ್ಗ ಮೂಲವನ್ನು ವಿವರಿಸಿದ್ದಾರೆ. ಆ ಮೂಲಕ ವೈಜ್ಞಾನಿಕ ವಿವರಣೆಯನ್ನು ನೀಡಿದವರು ಫ್ರೆಡ್ರಿಕ್ ಎಂಗೆಲ್ಸ್ ಅವರು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ "ಮಹಿಳೆಯ ವಿಮೋಚನೆ ಸಾಧ್ಯವಾಗಬೇಕೆಂದರೆ, ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಉತ್ಪಾದನೆಯಲ್ಲಿ ಭಾಗವಹಿಸಿದಾಗ ಮಾತ್ರ. ಆದರೆ, ಮನೆಕೆಲಸ ಎಂಬುದು ಅತ್ಯಲ್ಪ ಕೆಲಸವೆಂದು ಪರಿಗಣಿಸಲ್ಪಟ್ಟು ಸಾಮಾಜಿಕ ಉತ್ಪಾದನೆಯಿಂದ ಹೊರತು ಪಡಿಸಲಾಗಿದೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಕಾರ್ಮಿಕ ಶಕ್ತಿಯ ಪುನರುತ್ಪಾದನೆಯ ವೆಚ್ಚವನ್ನು ಮುಖ್ಯವಾಗಿ ಕುಟುಂಬದೊಳಗಿನ ಮಹಿಳೆಯರ ಶ್ರಮದಿಂದ ನೋಡಿಕೊಳ್ಳಲಾಗುತ್ತದೆ. ಇದು ಸಂಪೂರ್ಣವಾಗಿ ಉತ್ಪಾದನೆ ಭಾಗವಾಗಿ ಪರಿಗಣಿಸಲ್ಪಡದೆ, ಯಾವುದೇ ಸಂಭಾವನೆಗೆ ಅರ್ಹತೆ ಹೊಂದಿಲ್ಲ. ಪಾವತಿ ಇಲ್ಲದ, ಇದು ಬಂಡವಾಳಶಾಹಿ ವ್ಯವಸ್ಥೆಗೆ ಸಬ್ಸಿಡಿ ನೀಡುತ್ತದೆ. ಕುಟುಂಬದೊಳಗಿನ ಮಹಿಳೆಯರ ಪಾತ್ರದ ಕುರಿತಾದ ಪಿತೃಪ್ರಧಾನ ಮಾನದಂಡಗಳು, ವಿಶೇಷವಾಗಿ ನಮ್ಮಂತಹ ದೇಶಗಳಲ್ಲಿ, ನವ ಉದಾರವಾದಿ ಬಂಡವಾಳಶಾಹಿಗೆ ಸಂಪೂರ್ಣವಾಗಿ ಇದು ಹೊಂದಿಕೊಳ್ಳುತ್ತದೆ.

ಮತ್ತೊಂದೆಡೆ, ಇದು ಮಹಿಳೆಯರು ಉತ್ಪಾದನಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ತಡೆಯುತ್ತದೆ. ಇದರೊಂದಿಗೆ ಬಂಡವಾಳಶಾಹಿ ವ್ಯವಸ್ಥೆಯು ಅಗ್ಗದ ಕಾರ್ಮಿಕರ ನಿರಂತರ ಪೂರೈಕೆಯನ್ನು ಬಯಸುತ್ತದೆ. ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ "ಕೈಯಿಂದ ಮಾಡುವ ದುಡಿಮೆಯಲ್ಲಿ ಕಡಿಮೆ ಕೌಶಲ್ಯ ಮತ್ತು ಶ್ರಮವನ್ನು ಸೂಚಿಸುವ, ಅಂದರೆ, ಹೆಚ್ಚು ಆಧುನಿಕ ಉದ್ಯಮವು ಅಭಿವೃದ್ಧಿ ಹೊಂದಿದಷ್ಟೂ, ಪುರುಷರ ಶ್ರಮವು ಮಹಿಳೆಯರ ಶ್ರಮದಿಂದ ಆಕ್ರಮಿಸಲ್ಪಡುತ್ತದೆ. ವಯಸ್ಸು ಮತ್ತು ಲಿಂಗದ ವ್ಯತ್ಯಾಸಗಳು ಇನ್ನು ಮುಂದೆ ಕಾರ್ಮಿಕ ವರ್ಗಕ್ಕೆ ಯಾವುದೇ ವಿಶಿಷ್ಟ ಸಾಮಾಜಿಕ ಸಿಂಧುತ್ವವನ್ನು ಹೊಂದುವುದಿಲ್ಲ. ಎಲ್ಲವೂ ಶ್ರಮದ ಸಾಧನಗಳಾಗಿವೆ. ಅವರ ವಯಸ್ಸು ಮತ್ತು ಲಿಂಗಕ್ಕೆ ಅನುಗುಣವಾಗಿ ಬಳಸಲು ಹೆಚ್ಚು ಅಥವಾ ಕಡಿಮೆ ದುಬಾರಿಯಾಗಿದೆ. ಆದ್ದರಿಂದ, ಲಾಭವನ್ನು ಹೆಚ್ಚಿಸುವುದಕ್ಕಾಗಿ ಅಗ್ಗದ ಕಾರ್ಮಿಕರ ಪೂರೈಕೆಯಾಗಿ ಮಹಿಳೆಯರು ಕಾರ್ಮಿಕ ಮಾರುಕಟ್ಟೆಯಲ್ಲಿ ಇರಬೇಕು" ಎಂದು ಕ್ಲಾರಾ ಜೆಟ್ಕಿನ್ ಹೇಳುತ್ತಾರೆ. "ಮಹಿಳೆಯರ ಶ್ರಮವನ್ನು ಬಂಡವಾಳಶಾಹಿಗಳಿಗೆ ವಿಶೇಷವಾಗಿ ಆಕರ್ಷಕವಾಗಿಸಿದ್ದು ಅದರ ಕಡಿಮೆ ಬೆಲೆ ಮಾತ್ರವಲ್ಲದೆ ಮಹಿಳೆಯರ ಹೆಚ್ಚಿನ ವಿಧೇಯತೆಯ ಕೆಲಸದ ರೀತಿ.

ಭಾರತದಲ್ಲಿ ಮಹಿಳೆಯರ ನಿರುದ್ಯೋಗ ಮತ್ತು ವೇತನ ರಹಿತ ಕೆಲಸ

ನಮ್ಮ ದೇಶದಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಮಹಿಳೆಯರು ವೇತನ ರಹಿತ ಮನೆಕೆಲಸ ಮತ್ತು ಆರೈಕೆ ಕೆಲಸ ಮಾಡುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಸರಾಸರಿ ಭಾರತೀಯ ಮಹಿಳೆಯರು ದಿನಕ್ಕೆ ಸುಮಾರು ಆರು ಗಂಟೆಗಳ ಕಾಲ ವೇತನ ರಹಿತ ಕೆಲಸ ಮಾಡುತ್ತಾರೆ. ಎಸ್‌ಬಿಐ ಅಧ್ಯಯನದ ಪ್ರಕಾರ, ಭಾರತದಲ್ಲಿ ಮಹಿಳೆಯರ ವೇತನ ರಹಿತ ಮನೆಕೆಲಸ ಮತ್ತು ಆರೈಕೆ ಕೆಲಸವು ವರ್ಷಕ್ಕೆ ರೂ. 22 ಲಕ್ಷ ಕೋಟಿಗಳಷ್ಟಿದೆ. ಅಂಗನವಾಡಿ, ಆಶಾ, ಎಂಡಿಎಂ ಕಾರ್ಯಕರ್ತರು ಮುಂತಾದ ಸಾರ್ವಜನಿಕ ಸೇವಾ ಯೋಜನಾ ಕಾರ್ಯಕರ್ತರು ಮಾಡುವ ಕೆಲಸವನ್ನು ಸೇರಿಸಿದರೆ, ಅದು ಇನ್ನೂ ಹೆಚ್ಚಿನದಾಗಿರುತ್ತದೆ. ಮಹಿಳೆಯರ ಕೆಲಸದ ಈ ಬೃಹತ್ ಲೂಟಿಯನ್ನು ಸಮರ್ಥಿಸುವ ಕುಟುಂಬ ಮೊಕದ್ದಮೆಗಳಿಗೆ ಆರ್‌ಎಸ್‌ಎಸ್ ಮತ್ತು ಇತರ ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಪ್ರಚಾರ ಮಾಡುವ ಸಿದ್ಧಾಂತವನ್ನು ಹೊಂದಿವೆ. ಇದು ಮಹಿಳೆಯರ ದುಡಿಮೆಯನ್ನು ಸೀಮಿತ ಮತ್ತು ಕಡೆಗಣಿಸುವ ಸಿದ್ಧಾಂತವಾಗಿದೆ.

ಭಾರತದಲ್ಲಿ, ಮಹಿಳಾ ನೌಕರರು ಅಥವಾ ಕಾರ್ಮಿಕ ಶಕ್ತಿಯ ಭಾಗವಹಿಸುವಿಕೆಯ ಪ್ರಮಾಣವು ತೀರಾ ಕಡಿಮೆಯಾಗಿದೆ. ಇದು ಕೋವಿಡ್ ಸಾಂಕ್ರಾಮಿಕ ಮತ್ತು ಲಾಕ್‌ಡೌನ್ ಸಮಯದಲ್ಲಿ ಅದು ಶೇ. 16ಕ್ಕೆ ಇಳಿದಿದೆ. ಆದರೆ, ಮಹಿಳೆಯರ ಕೆಲಸದ ಭಾಗವಹಿಸುವಿಕೆಯಲ್ಲಿ ಹೆಚ್ಚಳವನ್ನು ಸರ್ಕಾರಿ ದತ್ತಾಂಶವು ತೋರಿಸುತ್ತದೆ. ಆವರ್ತಕ ಕಾರ್ಮಿಕ ಸಮೀಕ್ಷೆಯ ದತ್ತಾಂಶವು 2017–18ರಿಂದ 2021–22ರವರೆಗೆ ಶೇ. 12ರಷ್ಟು ಹೆಚ್ಚಳವನ್ನು ತೋರಿಸುತ್ತದೆ. (ಭಾರತದಲ್ಲಿ ಮಹಿಳಾ ಕಾರ್ಮಿಕ ಬಳಕೆ – ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ವರದಿಯ ಪ್ರಕಾರ). ಗ್ರಾಮೀಣ ಭಾರತದಲ್ಲಿ 'ವೇತನ ರಹಿತ ಕುಟುಂಬ ಸಹಾಯಕಿ'ಯಾಗಿ ಕುಟುಂಬ ಕೆಲಸ ಮಾಡುವ ಮೂಲಕ ಬದುಕುಳಿಯುವ ಮಹಿಳೆಯರನ್ನು ಸ್ವಯಂ ಉದ್ಯೋಗಿಗಳಾಗಿ ಸೇರಿಸುವುದರಿಂದ ಈ ಹೆಚ್ಚಳ ಸ್ಪಷ್ಟವಾಗಿ ಕಂಡುಬರುತ್ತದೆ. ಇದರ ನಂತರವೂ, ನಮ್ಮ ದೇಶದಲ್ಲಿ ಸುಮಾರು 70 ಪ್ರತಿಶತ ಮಹಿಳೆಯರು ಔಪಚಾರಿಕ ಕೆಲಸದಿಂದ ಹೊರಗಿದ್ದಾರೆ. ಇದರರ್ಥ ಮಹಿಳೆಯರು ಹೆಚ್ಚಾಗಿ ಬದುಕುಳಿಯಲು ಮಾತ್ರ ವೇತನ ಪಡೆಯದ ಅನಿಶ್ಚಿತ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಭಾರತದ ಅತಿ ಹೆಚ್ಚಿನ ಲಿಂಗ ಅಂತರ ಸೂಚ್ಯಂಕಕ್ಕೆ ಇದು ಒಂದು ಕಾರಣವಾದ್ದರಿಂದ, ಇದು ನೀತಿ ನಿರೂಪಕರಿಗೆ ಕಳವಳಕಾರಿ ವಿಷಯವಾಗಿದೆ. ಮಾಧ್ಯಮಿಕ ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಹೊಂದಿರುವ ಶೇ. 74.5ರಷ್ಟು ಮಹಿಳೆಯರು ಕಾರ್ಮಿಕ ಉತ್ಪಾದನಾ ಚೌಕಟ್ಟಿನಿಂದ ಹೊರಗಿದ್ದಾರೆ ಎಂಬುದು ಕಳವಳಕಾರಿ ವಿಷಯವಾಗಿದೆ. ನಿರುದ್ಯೋಗಿಗಳಲ್ಲಿ ಶೇ. 44.5ರಷ್ಟು ಮಹಿಳೆಯರು ಶಿಶುಪಾಲನೆ ಮತ್ತು ದೇಶೀಯ ಜವಾಬ್ದಾರಿಗಳನ್ನು ಕಾರ್ಮಿಕ ಶ್ರಮಶಕ್ತಿಯಿಂದ ಹೊರಗಿಡಲು ಕಾರಣವೆಂದು ಹೇಳುತ್ತಾರೆ.

ಈಗ, ನವ ಉದಾರವಾದವು ಭಾರತೀಯ ಮಹಿಳೆಯರು ಕಡಿಮೆ ಚೌಕಾಶಿ ಶಕ್ತಿಯೊಂದಿಗೆ ಅಗ್ಗದ ಕಾರ್ಮಿಕರ ಪೂರೈಕೆಯಾಗಿ ಕಾರ್ಮಿಕ ಶ್ರಮಶಕ್ತಿಗೆ ಪ್ರವೇಶಿಸಬೇಕೆಂದು ಬಯಸುತ್ತದೆ. ಅದೇ ಸಮಯದಲ್ಲಿ, ಈ ಮಹಿಳೆಯರು ಯಾವುದೇ ದೂರುಗಳಿಲ್ಲದೆ ಮನೆಕೆಲಸವನ್ನು ಸಮರ್ಪಿತವಾಗಿ ಮಾಡುವ ಮೂಲಕ ಕಾರ್ಮಿಕ ಶಕ್ತಿಯ ಮರುಉತ್ಪಾದನೆಗೆ ಸಹಾಯಧನ ನೀಡುವುದನ್ನು ಮುಂದುವರಿಸಬೇಕೆಂದು ಅದು ಬಯಸುತ್ತದೆ. ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಮಹಿಳಾ ಕಾರ್ಯಪಡೆಯ ಭಾಗವಹಿಸುವಿಕೆ, ವೇತನ ರಹಿತ ಆರೈಕೆ ಕೆಲಸ, 'ಆರೈಕೆ ಉದ್ಯೋಗಗಳು' ಮತ್ತು 'ಆರೈಕೆ ಆರ್ಥಿಕತೆ' ಇತ್ಯಾದಿಗಳ ಬಗ್ಗೆ ಕೂಗು ಕೇಳಿ ಬರುತ್ತಿದೆ. ಈ ವೈಯಕ್ತಿಕಗೊಳಿಸಿದ ಆರೈಕೆ ಸೇವೆಗಳು (ಅರ್ಬನ್ ಕಂಪನಿಯಂತಹ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮೂಲಕವೂ ಸೇರಿದಂತೆ) ಅಗ್ಗದ ಕಾರ್ಮಿಕರೊಂದಿಗೆ ಭಾರಿ ಲಾಭಗಳಿಸುವ ಸರಕುಗಳಾಗಿವೆ.

ಅದಕ್ಕಾಗಿಯೇ 'ಆರೈಕೆ ಆರ್ಥಿಕತೆ' ಮತ್ತು 'ಆರೈಕೆ ಉದ್ಯೋಗಗಳು' ಕುರಿತ ಚರ್ಚೆಗಳಲ್ಲಿ ಮಾತೃತ್ವ, ಹೆರಿಗೆ, ಶಿಶುಪಾಲನೆ ಮತ್ತು ವೃದ್ಧರ ಆರೈಕೆ ಸೌಲಭ್ಯಗಳಿಗೆ ಸಾಮಾಜಿಕ ಜವಾಬ್ದಾರಿ ಮತ್ತು

ಪುಟ 10 ಕ್ಕೆ

ಅಂತರರಾಷ್ಟ್ರೀಯ ಮಹಿಳಾ ದಿನ 2025.......

ಪುಟ 9 ರಿಂದ

ಗುಣಮಟ್ಟದ ಸೇವೆಗಳಿಗೆ ಸಾರ್ವಜನಿಕ ಪೂರೈಕೆಯ ಅಗತ್ಯತೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಐಎಲ್‌ಒ ಸೇರಿದಂತೆ ಈ ಚರ್ಚೆಗಳಲ್ಲಿ ಸ್ಕೀಮ್ ಕೆಲಸಗಾರರ ಕ್ರಮಬದ್ಧಗೊಳಿಸುವಿಕೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಐಸಿಡಿಎಸ್ ನಂತಹ ಸಾರ್ವಜನಿಕ ಸೇವೆಗಳನ್ನು ಹಿಂತೆಗೆದುಕೊಳ್ಳುವಾಗ ಈ ಭಾಗಗಳಿಂದ ಯಾವುದೇ ಕೂಗು ಕೇಳಿಬರುವುದಿಲ್ಲ.

ದುಡಿಯುವ ಮಹಿಳಾ ಚಳವಳಿಯು ಆರೈಕೆ ಕೆಲಸ ಮತ್ತು ಮನೆಕೆಲಸವನ್ನು ಗುರುತಿಸುವಂತೆ ಒತ್ತಾಯಿಸಲಾಗುತ್ತಿದೆ

ಸಿಐಟಿಯು ನೇತೃತ್ವದಲ್ಲಿ ದುಡಿಯುವ ಮಹಿಳಾ ಚಳವಳಿಯು ಕಳೆದ ವರ್ಷಗಳಲ್ಲಿ, ವಿಶೇಷವಾಗಿ ಸ್ಕೀಮ್ ವರ್ಕರ್‌ಗಳ ನಡುವೆ ನಿರಂತರ ನಡೆಸಿದ ಯಶಸ್ವಿಯಾದ ಹೋರಾಟಗಳ ಮೂಲಕ, ಮೂಲಭೂತ ಸೇವೆಗಳ ಹಕ್ಕಿನ ಪ್ರಶ್ನೆ ಮತ್ತು ಮುಖ್ಯವಾಹಿನಿಯ ಚರ್ಚೆಗಳಲ್ಲಿ ಆರೈಕೆ ಕೆಲಸದ ಮಾನ್ಯತೆಯನ್ನು ತರುವಲ್ಲಿ ಮತ್ತು ಗುರುತಿಸಲಾಗದ ಆರೈಕೆ ಕಾರ್ಮಿಕರ, ಅಂದರೆ, ಸ್ಕೀಮ್ ವರ್ಕರ್‌ಗಳ ವೇತನ ಮತ್ತು ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸಲು ಸರ್ಕಾರಗಳನ್ನು ಸಿಐಟಿಯು ಮೂಲಕ ಕಾರ್ಮಿಕ ವರ್ಗ ಒತ್ತಾಯಿಸಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಅದೇ ಸಮಯದಲ್ಲಿ ಈ ಚಳುವಳಿಯ ಪರಿಣಾಮದಿಂದಾಗಿ, ಐಸಿಡಿಎಸ್, ಎಂಡಿಎಂಎಸ್, ಎನ್‌ಎಚ್‌ಎಂ ಮುಂತಾದ ಸಾರ್ವಜನಿಕ ಸೇವಾ ಯೋಜನೆಗಳ ಖಾಸಗೀಕರಣ ಅಥವಾ ಮುಚ್ಚುವಿಕೆಯನ್ನು ಸಹ ಇಲ್ಲಿಯವರೆಗೆ ತಡೆಹಿಡಿಯಲು ಸಾಧ್ಯವಾಗಿದೆ. ಮನೆಕೆಲಸಗಾರರ ಸೇವಾ ಪರಿಸ್ಥಿತಿಗಳ ಬಗ್ಗೆಯೂ ಈಗ ಮುಖ್ಯವಾಹಿನಿಯಲ್ಲಿ ಚರ್ಚಿಸಲಾಗುತ್ತಿದೆ ಎಂಬುದನ್ನು ಗುರುತಿಸಬೇಕಾಗಿದೆ.

ಮಹಿಳೆಯರಿಗೆ ಅತ್ಯಂತ ಅಪಾಯಕಾರಿ ಸ್ಥಳ

2024 ರಲ್ಲಿ ಸ್ತ್ರೀ ಹತ್ಯೆಗಳ ಕುರಿತಾದ ವಿಶ್ವಸಂಸ್ಥೆಯ ವರದಿಯು ಪ್ರಪಂಚದಾದ್ಯಂತ ಮಹಿಳೆಯರಿಗೆ ಅತ್ಯಂತ ಅಪಾಯಕಾರಿ ಸ್ಥಳವೆಂದರೆ ಅವರ ಮನೆ ಎಂದಿದೆ. ಪ್ರಪಂಚದಾದ್ಯಂತ ಪ್ರತಿದಿನ 140 ಮಹಿಳೆಯರು ತಮ್ಮ ಸಂಗಾತಿ ಅಥವಾ ಹತ್ತಿರದ ಸಂಬಂಧಿಯಿಂದ ಕೊಲ್ಲಲ್ಪಡುತ್ತಾರೆ. ಭಾರತದಲ್ಲಿ, ಅತ್ಯಾಚಾರಗಳಿಂದ ಬಲಿಪಶುಗಳಾದ ಎಲ್ಲಾ ಪ್ರಕರಣಗಳಲ್ಲಿ ಶೇ. 89ರಷ್ಟು, ಸ್ವಂತ ತಿಳಿದಿರುವ ವ್ಯಕ್ತಿಗಳಿಂದ, ಅವರಲ್ಲಿ ಅನೇಕರು ಕುಟುಂಬದವರಿಂದ ಅತ್ಯಾಚಾರಕ್ಕೆ ಒಳಪಟ್ಟವರಾಗಿದ್ದಾರೆ. ಮೂರನೇ ಒಂದು ಭಾಗದಷ್ಟು ಮಹಿಳೆಯರು ಕೌಟುಂಬಿಕ ಹಿಂಸಾಚಾರವನ್ನು ಅನುಭವಿಸುತ್ತಾರೆ. ನಮ್ಮ ದೇಶದಲ್ಲಿ ಪ್ರತಿ ಆರು ಗಂಟೆಗಳಿಗೊಮ್ಮೆ, ಯುವತಿಯೊಬ್ಬಳು ಥಳಿಸಿಕೊಂಡು ಸಾಯುತ್ತಾಳೆ ಅಥವಾ ಸುಟ್ಟು ಹಾಕಲ್ಪಡುತ್ತಾಳೆ ಅಥವಾ ಆತ್ಮಹತ್ಯೆಗೆ ದೂಡಲ್ಪಡುತ್ತಾಳೆ. 2021 ರಲ್ಲಿ, ಗಂಡ ಅಥವಾ ಅವನ ಸಂಬಂಧಿಕರಿಂದ ಕ್ರೌರ್ಯದ ಪ್ರಕರಣಗಳ ಮೇಲೆ ದಿನಕ್ಕೆ ಸುಮಾರು 372 ಪ್ರಕರಣಗಳು ದಾಖಲಾಗಿವೆ. ನಮ್ಮ ದೇಶದಲ್ಲಿ, ಹೆಣ್ಣು ಭ್ರೂಣಹತ್ಯೆ ತುಂಬಾ ವ್ಯಾಪಕವಾಗಿದೆ ಮತ್ತು ಪ್ರತಿ ವರ್ಷ ಸುಮಾರು 5,00,000 ಹೆಣ್ಣು ಮಕ್ಕಳು ಹುಟ್ಟುವ ಮೊದಲೇ ಕೊಲ್ಲಲ್ಪಡುತ್ತಿದ್ದಾರೆ.

ಕುಟುಂಬ ಎಂಬುದು ಮಹಿಳೆಯರ ಶೋಷಣೆಯ ಸ್ಥಳ ಮಾತ್ರವಲ್ಲ, ಮಹಿಳೆಯರು ತೀವ್ರ ಹಿಂಸೆ ಮತ್ತು ನಿಂದನೆಯನ್ನು ಎದುರಿಸುವ ಕೆಲಸದ ಸ್ಥಳವೂ ಆಗಿದೆ. ನವ ಉದಾರವಾದಿ ಗ್ರಾಹಕ ಸಂಸ್ಕೃತಿಯೊಂದಿಗೆ ಸೇರಿಕೊಂಡ ಪಿತೃಪ್ರಧಾನ ಮೌಲ್ಯಗಳು ಕುಟುಂಬ ಮತ್ತು ಸಮಾಜದೊಳಗೆ ಮಹಿಳೆಯರು ಮತ್ತು ಹುಡುಗಿಯರಿಗೆ ತೀವ್ರ ಪ್ರತಿಕೂಲ ಪರಿಸ್ಥಿತಿಯನ್ನು ಸೃಷ್ಟಿಸುತ್ತವೆ.

ಆರ್‌ಎಸ್‌ಎಸ್ ಮತ್ತು ಇತರ ಮೂಲಭೂತವಾದಿ ಶಕ್ತಿಗಳು 'ಲಕ್ಷ್ಮಣ ರೇಖೆ'ಗಳಲ್ಲಿ ಮಹಿಳೆಯರ ವ್ಯಾಖ್ಯಾನಿತ ಗೊಡ್ಡು ಸಂಪ್ರದಾಯ ಪಾತ್ರವನ್ನು ಮತ್ತೆ ಆಚರಿಸುವಂತೆ ಒತ್ತಿಹೇಳುತ್ತವೆ ಮತ್ತು ಪಿತೃಪ್ರಭುತ್ವದಲ್ಲಿನ ಶಕ್ತಿಯನ್ನೇ ಆಧರಿಸಿ ತಮ್ಮ ಸೈದ್ಧಾಂತಿಕ ಮತ್ತು ರಾಜಕೀಯ ಕಾರ್ಯಸೂಚಿಯ ವಿಸ್ತರಣೆಗಾಗಿ ಮಹಿಳೆಯರನ್ನು ಗುರಿಯಾಗಿಸಿಕೊಂಡಿವೆ. ಬಿಜೆಪಿ-ಆರ್‌ಎಸ್‌ಎಸ್ ಮತ್ತು ಇತರ ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಮಹಿಳೆಯನ್ನು ಕೊಲೆ ಮಾಡಿದ ನಂತರವೂ ವೈವಾಹಿಕ ಅತ್ಯಾಚಾರವನ್ನು ಅಪರಾಧವೆಂದು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲ.

ಕಾರ್ಮಿಕ ವರ್ಗದ ಕುಟುಂಬಗಳಲ್ಲಿ ಮತ್ತು ಸಾಮಾಜಿಕ ಕಾರ್ಯಕರ್ತರು ಅಥವಾ ಕಾರ್ಮಿಕ ಸಂಘಟಕರ ಹೆಚ್ಚಿನ ಕುಟುಂಬಗಳಲ್ಲಿಯೂ ಸಹಾ, ಇಂತಹ ವಿಷಯಗಳು ಹೆಚ್ಚು ಭಿನ್ನವಾಗೇನು ಇಲ್ಲ. ಪುರುಷನು ವ್ಯವಸ್ಥೆಯ ಸವಲತ್ತುಗಳನ್ನು ಅನುಭವಿಸುತ್ತಾನೆ ಮತ್ತು ಕಾರ್ಮಿಕ ಶಕ್ತಿಯ ಪುನರುತ್ಪಾದನೆಗೆ ಅಗತ್ಯವಾದ ಕೆಲಸದ ಹೊರೆಯನ್ನು ಹಂಚಿಕೊಳ್ಳುವುದಿಲ್ಲ. "ಆಧುನಿಕ ವೈಯಕ್ತಿಕ ಕುಟುಂಬವು ಹೆಂಡತಿಯ ಮುಕ್ತ ಅಥವಾ ಗುಪ್ತ ದೇಶೀಯ ಗುಲಾಮಗಿರಿಯ ಮೇಲೆ ಸ್ಥಾಪಿತವಾಗಿದೆ ಮತ್ತು ಆಧುನಿಕ ಸಮಾಜವು ಈ ವೈಯಕ್ತಿಕ ಕುಟುಂಬಗಳನ್ನು ಅದರ ಅಣುಗಳಾಗಿ ಒಳಗೊಂಡಿರುವ ಸಮೂಹವಾಗಿದೆ" ಎಂದು ಎಂಗೆಲ್ಸ್ ಹೇಳಿದ್ದನ್ನು ಹೆಚ್ಚಾಗಿ ಮರೆತುಬಿಡಲಾಗುತ್ತದೆ. ಅವರು ಬರೆದಿರುವಂತೆ, ಒಂದು ಕುಟುಂಬದಲ್ಲಿ "ಗಂಡಸು ಬೂರ್ಜ್ವಾ ನೀತಿಯನ್ನು ಮತ್ತು ಹೆಂಡತಿ ಶ್ರಮಜೀವಿಗಳ ಪರಿಶ್ರಮವನ್ನು ಪ್ರತಿನಿಧಿಸುತ್ತಾರೆ" ಎಂದಿದ್ದಾರೆ ಎಂಗೆಲ್ಸರು.

ವರ್ಗ ಆಧಾರಿತ ಕಾರ್ಮಿಕ ಸಂಘ ಮತ್ತು ದುಡಿಯುವ ಮಹಿಳಾ ಚಳುವಳಿಯು ಕುಟುಂಬದೊಳಗಿನ ಹಿಂಸಾಚಾರದ ವಿರುದ್ಧ ಹೋರಾಡುವುದು ಮಾತ್ರವಲ್ಲದೆ, ಕುಟುಂಬದೊಳಗಿನ ಶೋಷಣೆ ಮತ್ತು ಪ್ರಜಾಪ್ರಭುತ್ವ ವಿರೋಧಿ ಪದ್ಧತಿಗಳು ಮತ್ತು ಪುರುಷ ಸವಲತ್ತುಗಳನ್ನು ಬಹಿರಂಗಪಡಿಸುವುದು ಮುಖ್ಯವಾಗಿದೆ. ಹಾಗೆಯೆ, ಸಮಾಜದಲ್ಲಿ ಪರ್ಯಾಯ ಕಾರ್ಮಿಕ ವರ್ಗದ ಸಂಸ್ಕೃತಿಯನ್ನು ತರುವುದು ಕೂಡಾ ಬಹಳ ಮುಖ್ಯವಾಗಿದೆ ಆರ್‌ಎಸ್‌ಎಸ್ ನೇತೃತ್ವದ ಕೋಮು ಶಕ್ತಿಗಳ ವಿರುದ್ಧದ ಹೋರಾಟದಲ್ಲಿಯೂ ಇದು ಪ್ರಮುಖ ಅಂಶವಾಗಿದೆ.

"ಎಲ್ಲಾ ಉತ್ಪಾದನಾ ವಿಧಾನಗಳನ್ನು ಸಾಮಾಜೀಕರಿಸುವ ಮೂಲಕ ಮಾತ್ರ ಕಾರ್ಮಿಕ ವರ್ಗದ ಶೋಷಣೆಯನ್ನು ಕೊನೆಗೊಳಿಸಬಹುದು ಎಂದು ಸಿಐಟಿಯು ನಂಬುತ್ತದೆ: ವಿತರಣೆ ಮತ್ತು ವಿನಿಮಯ ಮತ್ತು ಸಮಾಜವಾದಿ ರಾಜ್ಯ-ಪ್ರಭುತ್ವವನ್ನು ಸ್ಥಾಪಿಸುವುದು" ಎಂದು ಸಿಐಟಿಯುವಿನ ಸಂವಿಧಾನ ಹೇಳುತ್ತದೆ ಮತ್ತು ಇದು ಅಸ್ತಿತ್ವದಲ್ಲಿರುವ ಪಿತೃಪ್ರಧಾನ ಏಕಪತ್ನಿ ಕುಟುಂಬದ ಭೌತಿಕ ಆಧಾರವನ್ನು ಕೊನೆಗೊಳಿಸುತ್ತದೆ ಮತ್ತು "ಏಕ ಕುಟುಂಬವು ಸಮಾಜದ ಆರ್ಥಿಕ ಘಟಕವಾಗುವುದನ್ನು ನಿಲ್ಲಿಸುತ್ತದೆ" ಎಂದು ಎಂಗೆಲ್ಸ್ ಹೇಳುತ್ತಾರೆ. ಖಾಸಗಿ ಮನೆಗೆಲಸವು ಸಾಮಾಜಿಕ ಉದ್ಯಮವಾಗಿ ರೂಪಾಂತರಗೊಳ್ಳುತ್ತದೆ, ಮಕ್ಕಳ ಆರೈಕೆ ಮತ್ತು ಶಿಕ್ಷಣವು ಸಾರ್ವಜನಿಕ ವ್ಯವಹಾರವಾಗುತ್ತದೆ..." ಕ್ರಾಂತಿಯ ನಂತರ ಮಹಿಳೆಯರನ್ನು ವಿಮೋಚನೆಗೊಳಿಸಲು ಕಾಮ್ರೇಡ್ ಲೆನಿನ್ ನೇತೃತ್ವದ ಸಮಾಜವಾದಿ USSR ಇದನ್ನೇ ಮಾಡಿದೆ.

ಉದ್ಯೋಗಸ್ಥ ಮಹಿಳಾ ಚಳುವಳಿಯು ಗುಣಮಟ್ಟದ ಉದ್ಯೋಗ, ಆರೈಕೆ ಮತ್ತು ಮನೆಕೆಲಸಕ್ಕಾಗಿ ಸಾರ್ವಜನಿಕ ಪೂರೈಕೆ ಮತ್ತು ಸಾರ್ವಜನಿಕ ಸೇವೆಗಳನ್ನು ಒದಗಿಸುವ ಮಹಿಳಾ ಕಾರ್ಮಿಕರ ಗುರುತಿಸುವಿಕೆಗಾಗಿ ಹೋರಾಟಗಳನ್ನು ತೀವ್ರಗೊಳಿಸುವುದು ಬಹಳ ಮುಖ್ಯ. ಮಹಿಳೆಯರು ಉತ್ಪಾದನಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇದು ಅವಶ್ಯಕವಾಗಿದೆ. ಇದು ಮಹಿಳಾ ವಿಮೋಚನೆಗೆ ಪೂರ್ವಭಾವಿ ಷರತ್ತಾಗಿದೆ.

ಕೆಲಸದ ಸ್ಥಳದಲ್ಲಿ ತಾರತಮ್ಯ

ಭಾರತದಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ತಾರತಮ್ಯವು, ವಿಶ್ವದಲ್ಲಿಯೇ ಹೆಚ್ಚಾಗಿದೆ. ಅದು ವೇತನ ಅಸಮಾನತೆಗಳಲ್ಲಿ ಅತ್ಯದಿಕವಾಗಿ ಪ್ರತಿಬಿಂಬಿಸುತ್ತದೆ. ಭಾರತೀಯ ಮಹಿಳೆಯರು ಸಮಾನ ಕೆಲಸಕ್ಕಾಗಿ ಪುರುಷರಿಗಿಂತ ಕೇವಲ ಶೇ. 40ರಷ್ಟು ವೇತನವನ್ನು ಮಾತ್ರ ಪಡೆಯುತ್ತಾರೆ. ಮಹಿಳೆಯರಿಗೆ ಲಿಂಗ ಪ್ರತ್ಯೇಕ ಉದ್ಯೋಗಗಳು, ಬಡ್ತಿಯಲ್ಲಿ ತಾರತಮ್ಯ ಇತ್ಯಾದಿಗಳು ವಿವಿಧ ವಲಯಗಳಲ್ಲಿ ಪ್ರಚಲಿತವಾಗಿವೆ. ಸರ್ಕಾರಿ ದತ್ತಾಂಶದ ಪ್ರಕಾರ, ಸಂಬಳ ಪಡೆಯುವ ಮಹಿಳೆಯರಲ್ಲಿ ಕೇವಲ ಶೇ. 31ರಷ್ಟು ಮಾತ್ರ ಮಾತೃತ್ವ (ಮೆಟರ್ನಿಟಿ) ಭತ್ಯೆಗೆ ಅರ್ಹರಾಗಿದ್ದಾರೆ. ಅಸಂಘಟಿತ ಮತ್ತು ಕೃಷಿ ವಲಯಗಳಲ್ಲಿ ಇದು ಇಲ್ಲವೇ ಇಲ್ಲ. ಶಿಶುವಿಹಾರ ಸೌಲಭ್ಯಗಳಂತು, ಎಲ್ಲಾ ವಲಯಗಳಲ್ಲಿಯೂ ಕಡೆಗಣಿಸಿದ ವಿಷಯವಾಗಿದೆ. ಮಹಿಳಾ ಉದ್ಯೋಗಿಗಳು/ಕೆಲಸಗಾರರಿಗೆ ನರ್ಸಿಂಗ್ ವಿರಾಮಗಳನ್ನು ಸಹ ನೀಡಲಾಗುವುದಿಲ್ಲ. ಮಹಿಳಾ ಕಾರ್ಮಿಕರು ಅಥವಾ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆಗೆ ಯಾವುದೇ ಅವಕಾಶವಿಲ್ಲ. ಕೆಲವು ಸಾರ್ವಜನಿಕ ಉದ್ಯಮಗಳ ಸಂಸ್ಥೆಗಳಲ್ಲಿಯೂ ಸಹ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳು ಲಭ್ಯವಿಲ್ಲ.

ದೀರ್ಘ ಕೆಲಸದ ಸಮಯ ಮತ್ತು ಸಾಧಿಸಲು ಅಸಾಧ್ಯವಾದ ಕೆಲಸದ ಗುರಿಗಳನ್ನು ಮಹಿಳಾ ನೌಕರರ ಮೇಲೆ ಹೇರಲಾಗುತ್ತದೆ ಇದು ವಿಶೇಷವಾಗಿ IT/ITeS ವಲಯದಲ್ಲಿ ಉದ್ಯೋಗಿಗಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ. ಪುಣೆಯಲ್ಲಿ ಇಂತಹ ಕೆಲಸದ ಒತ್ತಡದಿಂದ ಒಬ್ಬ ಯುವ ಮಹಿಳಾ ವೃತ್ತಿಪರ ಕೊಲ್ಲಲ್ಪಟ್ಟರು. ಕೆಲಸದ ಜೀವನ ಸಮತೋಲನವಿಲ್ಲದೆ ನೌಕರರನ್ನು 24x7 ಕೆಲಸ ಮಾಡಲು 'ಮನೆಯಿಂದ ಕೆಲಸ' ಮಾಡಿಸಲಾಗುತ್ತದೆ. ಡಬಲ್ ಶಿಫ್ಟ್ ಹೊರೆಯನ್ನು ಹೊತ್ತ ಮಹಿಳಾ ಉದ್ಯೋಗಿಗಳಂತು, ಅತ್ಯಂತ ಕೆಟ್ಟ ಸ್ಥಿತಿಗಳಿಂದ ಬಳಲುತ್ತಿದ್ದಾರೆ.

ಮಹಿಳೆಯರಿಗೆ ರಾತ್ರಿ ಕೆಲಸ ಮಾಡುವುದರ ಮೇಲಿನ ನಿರ್ಬಂಧ ಮತ್ತು ಸುರಕ್ಷತೆ ಮತ್ತು ಸುರಕ್ಷಿತ ಪ್ರಯಾಣವನ್ನು ಖಚಿತಪಡಿಸಿಕೊಳ್ಳುವ ಷರತ್ತು ಮುಂತಾದ ರಕ್ಷಣಾತ್ಮಕ ಕಾನೂನುಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಸಮಾನ ಸಂಭಾವನೆ, ಹೆರಿಗೆ ಸೌಲಭ್ಯಗಳು, ಇತ್ಯಾದಿಗಳ ನಿಬಂಧನೆಗಳು ಕಾರ್ಮಿಕ ಕಾನೂನುಗಳಲ್ಲಿವೆ, ಆದರೆ ಅವುಗಳನ್ನು ಹೆಚ್ಚಾಗಿ ಉಲ್ಲಂಘಿಸಲಾಗುತ್ತಿದೆ. ಹೊಸ ಕಾರ್ಮಿಕ ಸಂಹಿತೆಗಳ ಅನುಷ್ಠಾನವು ವಿಶೇಷ ಸಾಮಾಜಿಕ ರಕ್ಷಣೆಯ ಹಕ್ಕುಗಳನ್ನು ಹಾಗೂ ತಾರತಮ್ಯವನ್ನು ಕೊನೆಗೊಳಿಸುವ ನಿಬಂಧನೆಗಳನ್ನು ಕಸಿದುಕೊಳ್ಳುತ್ತದೆ.

ಹಿಂಸೆ ಮತ್ತು ಲೈಂಗಿಕ ಕಿರುಕುಳ

ಭಾರತದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯವು ಆತಂಕಕಾರಿ ಮಟ್ಟದಲ್ಲಿದೆ. ಭಾರತದಲ್ಲಿ ಸರಾಸರಿ ಪ್ರತಿ 15 ನಿಮಿಷಕ್ಕೆ ಅತ್ಯಾಚಾರ ವರದಿಯಾಗುತ್ತಿದೆ, ಅದರಲ್ಲಿ ಶೇ. 15ರಷ್ಟು ಅಪ್ರಾಪ್ತ ವಯಸ್ಕರಾಗಿರುತ್ತಾರೆ. 2022ರಲ್ಲಿ ನಮ್ಮ ದೇಶದಲ್ಲಿ ಮಹಿಳೆಯರ ಮೇಲಿನ ಅಪರಾಧಗಳ ಕುರಿತು ಗಂಟೆಗೆ 51 ಎಫ್‌ಐಆರ್ ಗಳು ವರದಿಯಾಗುತ್ತಿವೆ, ಇದು ಈಗ ಹೆಚ್ಚುತ್ತಿದೆ.

ಕೆಲಸದ ಸ್ಥಳದಲ್ಲಿ 'ಲೈಂಗಿಕ ಕಿರುಕುಳ ತಡೆ ಕಾಯ್ದೆ'ಯನ್ನು 2013ರಲ್ಲಿ ತರಲಾಗಿದ್ದರೂ, ಈ ಕಾನೂನಿನ ಅನುಷ್ಠಾನ ಮಾತ್ರ ಅತ್ಯಂತ ಹುಸಿಯಾಗಿದೆ. ಹೆಚ್ಚಿನ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ವಲಯ(ಪಿಎಸ್‌ಇ)ಗಳಲ್ಲಿ ಸಹಾ, ಆಂತರಿಕ ಸಮಿತಿಗಳು ರಚನೆಯಾಗಿಲ್ಲ ಅಥವಾ ನೆಪಮಾತ್ರಕ್ಕೆ ರಚಿಸಿದ್ದರೂ ಕಾರ್ಯನಿರ್ವಹಿಸುತ್ತಿಲ್ಲ. 2022ಕ್ಕೆ ಹೋಲಿಸಿದರೆ 2023ರಲ್ಲಿ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದಲ್ಲಿ ಶೇ. 31ರಷ್ಟು ಗಣನೀಯ ಏರಿಕೆ ಕಂಡುಬಂದಿದೆ. ಎಲ್ಲಾ ವಲಯಗಳ ಮಹಿಳೆಯರು, ಅಸಂಘಟಿತ, ಸಂಘಟಿತ, ಸಾರ್ವಜನಿಕ ಮತ್ತು ಖಾಸಗಿ ಮತ್ತು ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುವ ಸ್ಕೀಮ್ ಕಾರ್ಮಿಕರು ಲೈಂಗಿಕ ಕಿರುಕುಳವನ್ನು ಹೆಚ್ಚಾಗಿ ಎದುರಿಸುತ್ತಿದ್ದಾರೆ. ಆದರೆ ಹೆಚ್ಚಿನ ಪ್ರಕರಣಗಳು ಬೆಳಕಿಗೆ ಬರುತ್ತಿಲ್ಲ ಅಥವಾ ವರದಿಯಾಗುವುದಿಲ್ಲ. ಐಟಿ, ನಿರ್ಮಾಣ, ಮನರಂಜನೆ, ಮನೆಕೆಲಸಗಾರರು ಮತ್ತು ವೇದಿಕೆ ಆಧಾರಿತ ಕೆಲಸಗಾರರಂತಹ ಕೆಲವು ಕೈಗಾರಿಕೆಗಳಲ್ಲಿ ಲೈಂಗಿಕ ಕಿರುಕುಳ ವ್ಯಾಪಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ, ಕೃಷಿ ಕ್ಷೇತ್ರಗಳಲ್ಲಿ ಕೆಲಸಮಾಡುವ ಮಹಿಳೆಯರು ಸಹಾ ಲೈಂಗಿಕ ಕಿರುಕುಳ ಮತ್ತು ಹಿಂಸೆಯನ್ನು ಎದುರಿಸುತ್ತಿದ್ದಾರೆ. ವರ್ಮಾ ಸಮಿತಿಯ ವರದಿಯಲ್ಲಿ ಗಮನಸೆಳೆದಂತೆ, ಸರಿಯಾದ ಶೌಚಾಲಯ ಸೌಲಭ್ಯಗಳ ಕೊರತೆಯಿಂದಾಗಿ ಕತ್ತಲೆಯಲ್ಲಿ ಹೊರಗೆ ಹೋಗಲು ಒತ್ತಾಯಿಸಲ್ಪಡುವ ಮಹಿಳೆಯರು ಲೈಂಗಿಕ ದೌರ್ಜನ್ಯವನ್ನು ಎದುರಿಸುತ್ತಿದ್ದಾರೆ.

ಇತರೆ ಸಮಸ್ಯೆಗಳು

ರೈತ ಮಹಿಳೆಯರ ಹಕ್ಕುಗಳನ್ನು ಗುರುತಿಸಲಾಗುತ್ತಿಲ್ಲ ಮತ್ತು ಸರ್ಕಾರವು ರೈತ ವಿರೋಧಿ ಕೃಷಿ ಕಾನೂನುಗಳನ್ನು ಹಿಂಬಾಗಿಲಿನ ಮೂಲಕ ಮತ್ತೆ ತರುತ್ತಿದೆ. ಅರಣ್ಯ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಕೃಷಿ ಕಾರ್ಮಿಕರಿಗೆ ಸಮಗ್ರ ಕಾನೂನು ಇನ್ನೂ ಜಾರಿಗೆ ಬರಬೇಕಿದೆ.

ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸುವುದಾಗಿ ಬಿಜೆಪಿ ಸರ್ಕಾರ ಹೇಳಿಕೊಂಡಿದೆ. ಆದರೆ ಮುಂದಿನ ಎರಡು ದಶಕಗಳಲ್ಲಿ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೆ ಬರದಂತೆ ನೋಡಿಕೊಳ್ಳುವ ಮೂಲಕ ಭಾರತದಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ತೀರಾ ಕಡಿಮೆ ಮಾಡಲಾಗಿದೆ.

ಆಡಳಿತ ನಡೆಸುತ್ತಿರುವ ಕೋಮುವಾದಿ ವ್ಯವಸ್ಥೆಯು ಪಿತೃಪ್ರಧಾನ ಮೌಲ್ಯಗಳನ್ನು ಮತ್ತು ಗೊಡ್ಡು ಮತ್ತು ಹಿಮ್ಮುಖವಾದ ಮಹಿಳಾ ವಿರೋಧಿ ಸಾಮಾಜಿಕ ಪದ್ಧತಿಗಳನ್ನು ಪ್ರಚಾರ ಮಾಡುತ್ತಿದೆ. 'ಏಕರೂಪ ನಾಗರಿಕ ಸಂಹಿತೆ'(ಯುಸಿಸಿ)ಗಳ ಹೆಸರಿನಲ್ಲಿ ಬಿಜೆಪಿ ಆಡಳಿತದ ರಾಜ್ಯಗಳು ಗೊಡ್ಡು ಸಾಮಾಜಿಕ ಪದ್ಧತಿಗಳನ್ನು ಕಾನೂನು ಬದ್ಧಗೊಳಿಸುತ್ತಿವೆ. ಎಲ್ಲಾ ಧಾರ್ಮಿಕ ಮತ್ತು ಮೂಲಭೂತವಾದಿ ಶಕ್ತಿಗಳು ಮಹಿಳಾ ವಿರೋಧಿ ಪದ್ಧತಿಗಳನ್ನು ಪ್ರಚಾರ ಮಾಡುತ್ತಿವೆ.

ವಿಶ್ವದಾದ್ಯಂತ ಮತ್ತು ನಮ್ಮ ದೇಶದಲ್ಲಿ

ಅಂತರರಾಷ್ಟ್ರೀಯ ಮಹಿಳಾ ದಿನ 2025

ಮಹಿಳೆಯರಿಗೆ ಸಮಾನತೆಯ ಹಕ್ಕು: ದೂರದ ನಕ್ಷತ್ರವೇ?

ಡಾ.ಕೆ.ಷರೀಫಾ

ಈ ಸಮಾಜದಲ್ಲಿ ಅಭಿವೃದ್ಧಿಯು ಕೇವಲ ಏಕಲಿಂಗೀಯ ಪ್ರಕ್ರಿಯೆಯಾಗಿ ಚಿತ್ರಿಸಲ್ಪಡುತ್ತಿದೆ. ಮಹಿಳೆ ಮೂಲತ: ಸ್ವತ: ಉತ್ಪಾದಕಳು. ಅವಳ ದುಡಿಮೆಯ ಗಾತ್ರ ವಿಸ್ತಾರವಾದುದು. ದೇಶದ ಪ್ರಗತಿಗೆ ಬಹುದೊಡ್ಡ ಕೊಡುಗೆ ಮಹಿಳೆಯಿಂದ ಲಭಿಸುತ್ತಿದೆ ಎಂಬ ಸತ್ಯವನ್ನು ಇದುವರೆಗೆ ಮುಚ್ಚಿಡಲಾಗಿದೆ" – ಪ್ರೊ. ಅಮರ್ತ್ಯಸೇನ್

ಇಂದಿನ ಮಹಿಳೆಯರಿಗೆ ಸಮಾನತೆಯ ಹಕ್ಕು ನಿಲುಕದ ದೂರದ ನಕ್ಷತ್ರವಾಗಿದೆ. ಪುರಾಣಗಳ ಕಾಲದಿಂದಲೂ ಅವರು ಅಸಮಾನ ಸ್ಥಾನಮಾನಗಳಲ್ಲಿ ನರಳುತ್ತಿದ್ದಾರೆ. 'ಸಂಪೂರ್ಣ ಲಿಂಗಸಮಾನತೆಯನ್ನು ತರಲು 2158ರವರೆಗೆ ಕಾಯಬೇಕಾಗುತ್ತದೆ' ಎಂದು ವರ್ಲ್ಡ್ ಎಕನಾಮಿಕ್ ಫೋರಮ್ ಹೇಳುತ್ತದೆ. ಮಹಿಳೆಯರಿಗೆ ಮೊದಲ ಬಾರಿಗೆ ಮತದಾನದ ಹಕ್ಕು ನೀಡಿದ ದೇಶವೆಂದರೆ ಅದು ನ್ಯೂಜಿಲ್ಯಾಂಡ್. ಸಮಾನ ಹಕ್ಕುಗಳು, ಸಮಾನ ಅವಕಾಶಗಳು, ಸಮಾನ ಅಧಿಕಾರಗಳು ಅವಳ ಬೇಡಿಕೆಗಳಾಗಿವೆ. 2025ರ ವರ್ಷದ ಮಹಿಳಾ ದಿನಾಚರಣೆಯ ಘೋಷವಾಕ್ಯವೆಂದರೆ "ಲಿಂಗ ಸಮಾನತೆಗಾಗಿ ಕ್ರಮವನ್ನು ವೇಗಗೊಳಿಸುವುದು". ಸಂಪೂರ್ಣ ಲಿಂಗ ಸಮಾನತೆಯನ್ನು ತರಲು ನಾವು 2158 ಅಂದರೆ ಇನ್ನೂ ಐದು ತಲೆಮಾರುಗಳ ಕಾಲ ಕಾಯಬೇಕಾಗುತ್ತದೆ. ವಿಶ್ವದ ಎಲ್ಲಾ ಮಹಿಳೆಯರಿಗಾಗಿ ಮತ್ತು ಹುಡುಗಿಯರಿಗಾಗಿ ಕಾರ್ಯನಿರ್ವಹಿಸುವ ವರ್ಷ ಇದಾಗಿದೆ. 1848ರಿಂದ 2025ರವರೆಗಿನ ಮಹಿಳಾ ಹಕ್ಕುಗಳೇನಿದ್ದವು, ಅವರು ಏನನ್ನು ಪಡೆದುಕೊಂಡಿದ್ದಾರೆ ಮತ್ತು ಅವರು ಅದೇ ಸಂದರ್ಭದಲ್ಲಿ ಏನನ್ನು ಕಳೆದುಕೊಂಡಿದ್ದಾರೆ ಎಂಬ ಕುರಿತು ನಾವು ಅರಿಯಬೇಕಿದೆ.

ಹೆಣ್ಣು ಜೀವದ ಸುತ್ತ ಹೆಣೆದಿರುವ ಈ ಕಾಲಘಟ್ಟದಲ್ಲಿ ಹೆಣ್ಣಿಗಾಗಿ ಹೊಸ ಹೊಸ ಹೊರದಾರಿಗಳು ಹುಟ್ಟಿಕೊಂಡಿವೆ ಎಂದು ಅನಿಸಿದರೂ ಸಹ ಅವಳನ್ನು ಮತ್ತೆ ಮತ್ತೆ ಉಪಭೋಗದ ವಸ್ತುವಾಗಿಸುವ ಹುನ್ನಾರಗಳು ಹುತ್ತದಂತೆ ಹೊಸ ಹೊಸ ಮಾದರಿಯಲ್ಲಿ ಎದುರುಗೊಳ್ಳುತ್ತಿವೆ. ಹೆಣ್ಣನ್ನು ಅವಳ ದೇಹ ಕೇಂದ್ರದಾಚೆಗೆ ನೋಡುವಂತಹ ಸಮಾಜ ನಿರ್ಮಾಣವಾಗುವುದು ಯಾವಾಗ? ಅವಳನ್ನು ದೇಹ ಪರಿಭಾಷೆಯಿಂದಲೇ ನೋಡುವ ದೃಷ್ಟಿಕೋನಗಳು ಈಗಲೂ ಪ್ರಚಲಿತವಾಗಿವೆ. ನಾಗರೀಕತೆ ಬೆಳೆದಂತೆ ಅವಳ ಮೇಲಿನ ದೌರ್ಜನ್ಯಗಳು ಹೊಸ ಹೊಸ ರೂಪ ಪಡೆದು ಮುಂದೆ ಬರುತ್ತಿವೆ. ಅವಳ ಕುರಿತ ಆರೋಗ್ಯಪೂರ್ಣ ದೃಷ್ಟಿಕೋನಗಳು, ಸಾಮಾಜಿಕ ವಲಯದಲ್ಲಿ, ಔದ್ಯೋಗಿಕ ವಲಯದಲ್ಲಿ ಮತ್ತು ರಾಜಕೀಯ ವಲಯದಲ್ಲಿ ರೂಪುಗೊಳ್ಳಲೇ ಇಲ್ಲ. ಪವಿತ್ರ ಅಪವಿತ್ರ, ಶುದ್ಧ ಅಶುದ್ಧ, ಬಸಿರು ಬಾಣಂತನ, ಮುಟ್ಟು ಮೈಲಿಗೆ ಹೀಗೆಯೇ ಕೆಲವು ಪರಿಭಾಷೆಗಳ ಮೂಲಕ ಹೆಣ್ಣನ್ನು, ಅವಳ ವ್ಯಕ್ತಿತ್ವವನ್ನು ನಿರ್ವಚಿಸಿಕೊಳ್ಳಬೇಕಾದ ಬಗೆಯಿಂದಾಗಿ ಅವಳ ಜೀವ ಸಂಕಟಪಡುತ್ತದೆ. ಹುಟ್ಟುವಲ್ಲಿ ಅಸಮಾನತೆ, ಹುಟ್ಟಿದ ನಂತರ ಅಸಮಾನತೆ, ಶಿಕ್ಷಣ, ಆರೋಗ್ಯ, ಆಹಾರ, ಉದ್ಯೋಗ, ಆಯ್ಕೆಯ ವಿಷಯಗಳಲ್ಲಿಯೂ ತಾರತಮ್ಯವಿದೆ. ಅವಳಿಗಾಗಿ ತೆರೆದುಕೊಳ್ಳುವ ಸಮಾನ ಅವಕಾಶಗಳ ಕಾರಣದಿಂದಾಗಿ ಆರೋಗ್ಯಪೂರ್ಣ ಸಮಾಜಕ್ಕೆ ನಾಂದಿ ಹಾಕುತ್ತದೆ.

ಲಿಂಗ ಸಮಾನತೆಯಲ್ಲಿ ಭಾರತ ವಿಶ್ವದಲ್ಲಿಯೇ ಅತ್ಯಂತ ಕೆಳಸ್ಥರದಲ್ಲಿದೆ. ಲೈಂಗಿಕ ದೌರ್ಜನ್ಯ ಎಸಗುವುದರಲ್ಲಿಯೂ ವಿಶ್ವದಲ್ಲಿಯೇ ಮುಂದಿದೆ. ಆರು ತಿಂಗಳ ಮಗುವಿನಿಂದ



ಹಿಡಿದು, 80 ವರ್ಷದ ಅಜ್ಜಿಯ ಮೇಲೆಯೂ ಅತ್ಯಾಚಾರ ಎಸಗಲಾಗುತ್ತಿದೆ. ಇದರ ತಡೆಗೆ ಹಲವಾರು ಕಾನೂನುಗಳಿವೆಯಾದರೂ ಅದನ್ನು ಜಾರಿಗೊಳಿಸುವಲ್ಲಿ ಹಲವಾರು ತೊಡಕುಗಳಿವೆ. ರಾಜಕಾರಣಕ್ಕೆ ಇಚ್ಛಾಶಕ್ತಿಯೂ ಕಡಿಮೆಯಾಗಿದೆ. ಲಿಂಗತಾರತಮ್ಯದ ಕಾರಣಕ್ಕಾಗಿಯೇ ಮಹಿಳಾ ಹಿತಾಸಕ್ತಿಗಳು ಮೂಲೆಗುಂಪಾಗುತ್ತಿವೆ. ಅವಳ ಶಕ್ತಿ ಮೂಲಗಳು ದಮನಕ್ಕೊಳಗಾಗುತ್ತಿವೆ. ಅವಳ ದುಡಿಮೆ, ಪ್ರತಿಭೆ ಮತ್ತು ಸೃಜನಶೀಲತೆಗಳು ಅಪಮೌಲ್ಯಕ್ಕೊಳಗಾಗುತ್ತಿವೆ. ಪುರುಷ ಪ್ರಾಧಾನ್ಯತೆ ಮತ್ತು ಅಧಿಕಾರಶಾಹಿಗಳ ಕಾರಣದಿಂದಾಗಿಯೇ ಮಹಿಳಾ ಹೋರಾಟಕ್ಕೆ ಹಿನ್ನಡೆಯಾಗುತ್ತಿದೆ. ಲಾಭಕೋರ ನವ ಉದಾರವಾದಿ ಆರ್ಥಿಕತೆ, ಧರ್ಮ, ಜಾತಿ, ಪಿತೃಪ್ರಾಧಾನ್ಯತೆ, ಸ್ತ್ರೀಭ್ರೂಣಹತ್ಯೆ, ಅತ್ಯಾಚಾರ, ಮತಾಂಧತೆ, ಅಧಿಕಾರ, ರಾಜಕಾರಣ ಮತ್ತು ಲಿಂಗತಾರತಮ್ಯದ ನಡೆಗಳು ಅವಳ ಸಮಾನತೆಯೆಡೆಗಿನ ನಡೆಗೆ ತೊಡಕಾಗಿವೆ. ಇವುಗಳು ಸಮಾಜದಲ್ಲಿ ವಿಕೃತ ಹಿಂಸೆಯನ್ನು ಹುಟ್ಟುಹಾಕುತ್ತಿವೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ.

ನಮ್ಮ ಪುರಾಣ ಪುಣ್ಯ ಕಥೆಗಳಲ್ಲಿ ಹೆಣ್ಣನ್ನು ಕೇವಲ ತುಟಿ, ಕಟಿ, ಕುಚ, ನಡು, ನಿತಂಬಗಳ ಹೊಗಳಿಕೆಯೇ ಇದೆ. ಇದು ಸೀತೆ, ಅಹಲ್ಯೆ, ದ್ರೌಪದಿಯರನ್ನೂ ಬಿಟ್ಟಿಲ್ಲ. ಮೋಸದ ಜಾಲಕ್ಕೆ ಸಿಕ್ಕುವ ಅಹಲ್ಯೆ, ತನ್ನದಲ್ಲದ ತಪ್ಪಿಗೆ ಒಳಗಾಗುವ ಸೀತೆ, ಪುರುಷ ರಾಜಕಾರಣದ ತೆವಲಿಗೆ ಬಲಿಯಾಗುವ ದ್ರೌಪದಿ ಒಂದು ಕಡೆ ನಮ್ಮ ಕಣ್ಣೆದುರಿಗಿದ್ದಾರೆ. ಇನ್ನೊಂದು ಕಡೆ 12ನೇ ಶತಮಾನದ ಅಕ್ಕಮಹಾದೇವಿ ಹಲವಾರು ವಚನಗಳು ಈ ಪರಿಭಾಷೆಯಿಂದ ಹೊರಗೆ ಬರಲು ಪ್ರಯತ್ನಿಸುವ ಬಹಳ ಪ್ರಮಾಣಿಕವಾದ ಪ್ರಯತ್ನ ಮಾಡಿವೆ. ಹಾಗಾಗಿ ಅವಳು ತನ್ನ ಅನುಭವಕ್ಕೆ ಪ್ರಮಾಣವಾಗಿ ದೇಹವಿರದ ಚೆನ್ನಮಲ್ಲಿಕಾರ್ಜುನನ್ನೇ ಪ್ರಮಾಣವಾಗಿಟ್ಟುಕೊಳ್ಳುತ್ತಾಳೆ. ಇದು ಪುರಾಣ ಕಾಲದಿಂದಲೂ ನಡೆದು ಬಂದ ಪರಂಪರೆಗೆ ಒಡ್ಡಿದ ಬಹುದೊಡ್ಡ ವಿರೋಧವಾಗಿತ್ತು. ನಮ್ಮ ಸುತ್ತಲ ಸಾಮಾಜಿಕ ಸಂದರ್ಭವು ಹೆಚ್ಚು ಹೆಚ್ಚು ಸಂಕೀರ್ಣವಾಗಿ ಕಾಣುವುದು ಈ ದೇಹ ರಾಜಕಾರಣದ ಕಾರಣಕ್ಕಾಗಿಯೇ. ಶೀಲ, ಪಾವಿತ್ರ್ಯ, ಮರ್ಯಾದೆ, ಮನೆತನ, ಮತ್ತು ಮಾನಸಿಕ ಪರ್ಯಾವರಣದಲ್ಲಿಯೇ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಮಹಿಳೆಗೆ ಸೃಷ್ಟಿಸಲಾಗಿದೆ. ಹೆಣ್ಣನ್ನು ಗೃಹದೇವತೆಯೆನ್ನುತ್ತಲೇ ಅವಳನ್ನು ದೇವರ ಕೋಣೆಗೆ ಸೇರಿಸದಂತಹ ನಿರ್ಭಂಧಗಳಿವೆ. ದರ್ಶನಕ್ಕೆ ಬಿಡಲಾರದ ಅಯ್ಯಪ್ಪ ಸ್ವಾಮಿಗಳಿದ್ದಾರೆ. ಬಹಿಷ್ಟೇ, ಬಾಣಂತನದ ಕಾರಣಕ್ಕೆ ಮನೆಯಿಂದ ದೂರ, ಊರ ಹೊರಗೆ ವಾಸಿಸಬೇಕಾದ ಗೊಲ್ಲತಿಯರಿದ್ದಾರೆ.

ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಅಮರ್ತ್ಯಸೇನ್ ರವರು ಹೇಳುತ್ತಾರೆ.–"ಬದುಕಿನ ಎಲ್ಲಾ ಮುಖಗಳಲ್ಲೂ ಮಹಿಳೆಯರು ಒಂದೋ ಕಾಣೆಯಾಗಿದ್ದಾರೆ. ಇಲ್ಲವೇ ದೈನೇಸಿ ಬದುಕು ಸಾಗಿಸುತ್ತಿದ್ದಾರೆ. ಹೆಣ್ಣು ಭ್ರೂಣ ಆಗಿ ತಾಯಿಯ ಗರ್ಭ ಸೇರಿದಾಗಿನಿಂದ ಅಂತಿಮವಾಗಿ ಭೂಮಿಯ ಗರ್ಭ ಸೇರುವವರೆಗೆ ತಾರತಮ್ಯ, ಪಕ್ಷಪಾತ, ದೌರ್ಜನ್ಯ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾಳೆ. ಪುರುಷಶಾಹಿಯು ವಿಜೃಂಭಿಸುವ ಈ ಸಮಾಜದಲ್ಲಿ ಅಭಿವೃದ್ಧಿಯು ಕೇವಲ ಏಕಲಿಂಗೀಯ ಪ್ರಕ್ರಿಯೆಯಾಗಿ ಚಿತ್ರಿಸಲ್ಪಡುತ್ತಿದೆ. ಮಹಿಳೆ ಮೂಲತ: ಸ್ವತ: ಉತ್ಪಾದಕಳು. ಅವಳ ದುಡಿಮೆಯ ಗಾತ್ರ ವಿಸ್ತಾರವಾದುದು. ದೇಶದ ಪ್ರಗತಿಗೆ ಬಹುದೊಡ್ಡ ಕೊಡುಗೆ ಮಹಿಳೆಯಿಂದ ಲಭಿಸುತ್ತಿದೆ ಎಂಬ ಸತ್ಯವನ್ನು ಇದುವರೆಗೆ ಮುಚ್ಚಿಡಲಾಗಿದೆ" ಎಂದು ಮಹಿಳೆಯನ್ನು ದೂರವಿಟ್ಟು ದೇಶದ ಉನ್ನತಿ, ಪ್ರಗತಿಗಳೂ ಎಂದಿಗೂ ಸಾದ್ಯವಾಗುವುದಿಲ್ಲ. 1917ರ ಮಾರ್ಚ್ 8 ರಂದು ರಷ್ಯದ ಕ್ರಾಂತಿಯ ಹರಿಕಾರರಾದ ಲೆನಿನ್ನರವರು ಹೇಳುತ್ತಾರೆ "ಮಹಿಳೆಯರನ್ನು ದೂರವಿಟ್ಟು ವಿಶಾಲ ಜನ ಸಮೂಹವನ್ನು ರಾಜಕೀಯಕ್ಕೆ ತರುವುದು ಅಸಾಧ್ಯವೆಂದು. ಮಾನವ ಕುಲಕೋಟಿಯಲ್ಲಿ ಅರ್ಧದಷ್ಟಿರುವ ಸ್ತ್ರೀ ಸಮೂಹವು ಮೂರುಪಟ್ಟು ಕೆಲಸದ ಹೊರೆಯಿಂದ ತತ್ತರಿಸುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೂ ಗಣರಾಜ್ಯ ವ್ಯವಸ್ಥೆಯಲ್ಲಿಯೂ ಅವಳನ್ನು ಕೀಳಾಗಿ ಕಾಣಲಾಗುತ್ತಿದೆ. ಅಡುಗೆಯ ಮನೆಯ ಬಿಟ್ಟಿ ಚಾಕರಿಯಲ್ಲಿ ಅವರನ್ನು ಕುಬ್ಜರನ್ನಾಗಿಸಲಾಗುತ್ತಿದೆ. ಅತ್ಯಂತ ಕಡಿಮೆ ಕೂಲಿಯ ದುಡಿಮೆಗೆ ಒಡ್ಡಿಕೊಳ್ಳಲಾಗುತ್ತಿದೆ. ಇದನ್ನು ಸಮಾಜವಾದಿ ಸಮಾಜವು ದಬ್ಬಾಳಿಕೆಯ ಮೂಲಬೇರುಗಳನ್ನು ಕತ್ತರಿಸಲು ಶ್ರಮಿಸಿದೆ".

ಸಮಸಮಾಜದ ಧ್ಯೇಯ ನಮ್ಮದಾಗಬೇಕಾಗಿದೆ. ಸಮಸಮಾಜದೆಡೆಗೆ ಸಮಾಜಗಳು ನಡೆಯಬೇಕಿದೆ. ಭಾರತವು ಸೆಕ್ಯುಲರ್ ಅಷ್ಟೇ ಅಲ್ಲ, ಎಲ್ಲಾ ರೀತಿಯ ಅಸಮಾನತೆಯನ್ನು ತೊಡೆದು ನಿಲ್ಲಬೇಕಿದೆ. ಮಹಿಳೆಯರ ಮೇಲಿನ ಎಲ್ಲಾ ಬಗೆಯ ದೌರ್ಜನ್ಯಗಳು ಕೊನೆಯಾಗಬೇಕು. ಸರ್ಕಾರ ರಚನೆ ಮತ್ತು ರಾಜಕೀಯದಲ್ಲಿ ಶೇ.50ರಷ್ಟು ಮೀಸಲಾತಿಯನ್ನು ಕಡ್ಡಾಯಗೊಳಿಸಬೇಕು. ಜೆಂಡರ್ ಬಜೆಟ್ ಕಡ್ಡಾಯವಾಗಬೇಕು. ದೇವದಾಸಿ ಪದ್ಧತಿ ನಿಷೆಧ ಮತ್ತು ಅವರಿಗೆ ಪುನರ್ ವಸತಿ ಕಲ್ಪಿಸಬೇಕು. ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಮೂಲಭೂತ ಹಕ್ಕಾಗಬೇಕು. ಸರ್ವಧರ್ಮ ಸಮಾನತೆ, ಸರ್ವ ಲಿಂಗ ಸಮಾನತೆಯ ತತ್ವಗಳು ನಮ್ಮದಾಗಬೇಕಿದೆ. ಅಗಸ್ಟ್ ಬೆಬೆಲ್ ಹೇಳುವಂತೆ "ಮಹಿಳೆ ಜಗತ್ತಿನ ಪ್ರಥಮ ಶೋಷಿತೆ." ಅವಳನ್ನು ಶೋಷಣೆಯಿಂದ ಮುಕ್ತಗೊಳಿಸುತ್ತಾ, ಮನುಕುಲದ ದೀರ್ಘ ಇತಿಹಾಸದಲ್ಲಿ ಅವಳ ಮೇಲೆ ನಡೆದಿರುವ ದೀರ್ಘ ಕಾಲದ ಅಪಚಾರವೊಂದು ಕೊನೆಯಾಗಲಿ. ತನ್ನಷ್ಟೇ ಶಕ್ತಿವಂತ ತಮ್ಮ ಸಹಜೀವಿಗಳ ಮೇಲೆ ನಡೆಯುತ್ತಿರುವ ಅನ್ಯಾಯದ ಕುರಿತು ಪುರುಷರಲ್ಲೂ ಆತಂಕ ಮೂಡಬೇಕಿದೆ. ವಿವೇಕಾನಂದರು ಹೇಳುವಂತೆ "ಮಹಿಳೆಯರ ಏಳಿಗೆಯೇ ಭಾರತದ ಪುನರುತ್ಥಾನಕ್ಕೆ ಸೋಪಾನ ವಾಗಬೇಕು" ಎಂದು ಸುಮಾರು ಒಂದುಕಾಲು ಶತಮಾನಗಳ ಹಿಂದೆಯೇ ಹೇಳಿರುವ ಮಾತುಗಳು ಈಗಲಾದರೂ ಜಾರಿಯಾಗಬೇಕಿದೆ. ಅದಕ್ಕಾಗಿ ಪ್ರಭುತ್ವಕ್ಕೆ ಇಚ್ಛಾಶಕ್ತಿಯೂ ಬೇಕಿದೆ.

ಅಸಮಾನತೆ ಊಹಿಸಲಾಗದಷ್ಟು ಹೆಚ್ಚುತ್ತಿದೆ. ಲಿಂಗ ಅಸಮಾನತೆಯೂ ಹೆಚ್ಚುತ್ತಿದೆ. ಸಮಾಜವಾದಿ ದೇಶಗಳು ಮಾತ್ರ ಸಾರ್ವಜನಿಕ ಸರಬರಾಜು ಮತ್ತು ಮನೆಕೆಲಸದ ಸಾಮಾಜಿಕೀಕರಣವನ್ನು ಖಚಿತಪಡಿಸಿಕೊಂಡಿವೆ. ಹಾಗಾಗಿ, ಸಮಾಜವಾದಿ ದೇಶಗಳು ಮಾತ್ರ ಇದಕ್ಕೆ ಏಕೈಕ ಅಪವಾದವಾಗಿವೆ. ಈ ಪರ್ಯಾಯವನ್ನು ಮಹಿಳಾ ಕಾರ್ಮಿಕರಲ್ಲಿ ಬಿತ್ತಿ ಮೂಡಿಸಬೇಕಾಗಿದೆ.

ಮಹಿಳೆಯರು ಮತ್ತು ಮಕ್ಕಳು ಅತ್ಯಂತ ಕೆಟ್ಟ ಬಲಿಪಶುಗಳಾಗಿರುವ ಯುದ್ಧಗಳನ್ನು ಮತ್ತು ಸಂಘರ್ಷಗಳನ್ನು ಸಾಮ್ರಾಜ್ಯಶಾಹಿಯು ಹೇರುತ್ತಿದೆ. ಅಮೆರಿಕದ ಬೆಂಬಲದೊಂದಿಗೆ ಇಸ್ರೇಲ್ ನಡೆಸಿದ ಗಾಜಾ ಹತ್ಯಾಕಾಂಡವು ಸಾವಿರಾರು ಮಹಿಳೆಯರು ಮತ್ತು ಮಕ್ಕಳ ಜೀವವನ್ನು ಬಲಿ ತೆಗೆದುಕೊಂಡಿದೆ ಮತ್ತು ಸಾವಿರಾರು ಜನರು ಆಘಾತ ಮತ್ತು ಅಭಾವಕ್ಕೆ ಒಳಗಾಗಿದ್ದಾರೆ.

ಭಾರತದಲ್ಲಿ ದುಡಿಯುವ ಮಹಿಳೆಯರು ಸಾಮ್ರಾಜ್ಯಶಾಹಿ–ವಿರೋಧಿ, ಊಳಿಗಮಾನ್ಯ ವಿರೋಧಿ, ಹೋರಾಟಗಳ ದೊಡ್ಡ ಪರಂಪರೆಯನ್ನು ಹೊಂದಿದ್ದಾರೆ. ಇತ್ತೀಚಿನ ಅವಧಿಯಲ್ಲಿಯೂ ಸಹ ವಿವಿಧ ವಲಯಗಳಲ್ಲಿ ದುಡಿಯುವ ಮಹಿಳೆಯರ ನೇತೃತ್ವದ ಸ್ಫೂರ್ತಿದಾಯಕ ಉಗ್ರವಾದ ಹೋರಾಟಗಳನ್ನು ನಾವು ನೋಡಿದ್ದೇವೆ. ಬಂಡವಾಳಶಾಹಿ ಬಿಕ್ಕಟ್ಟಿನ ಗಾಂಭೀರ್ಯತೆಯನ್ನು ಗಮನಿಸಿದರೆ, ಮುಂಬರುವ ದಿನಗಳಲ್ಲಿ ದುಡಿಯುವ ಜನರ ಮೇಲೆ–ಅವರ ಹಕ್ಕುಗಳು ಮತ್ತು ಜೀವನೋಪಾಯದ ಮೇಲೆ ದಾಳಿ ತೀವ್ರಗೊಳ್ಳುವ ಸಂಭವ ಹೆಚ್ಚಾಗಿದೆ. ಅದೇ ಸಮಯದಲ್ಲಿ, ಅದಕ್ಕೆ ಪ್ರತಿಯಾಗಿ ದುಡಿಯುವ ಜನರಿಂದ, ವಿಶೇಷವಾಗಿ ಕಾರ್ಮಿಕ ವರ್ಗ ಮತ್ತು ರೈತರಿಂದ ಪ್ರತಿದಾಳಿಯನ್ನು ಬಲಪಡಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ 'ಹೋರಾಟಗಳ ಪರಂಪರೆ ಮತ್ತು ಅಂತರ ರಾಷ್ಟ್ರೀಯತೆ'ಯನ್ನು ಗಮನದಲ್ಲಿ ಇಟ್ಟುಕೊಂಡು, ಈ ವರ್ಷ ನಾವೆಲ್ಲರೂ 'ಅಂತರರಾಷ್ಟ್ರೀಯ ಮಹಿಳಾ ದಿನ' ವನ್ನು ಮಹಿಳೆಯರ ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟವನ್ನು ಸಜ್ಜುಗೊಳಿಸುವ ಮೂಲಕ ಆಚರಿಸೋಣ.

ಅನು: ನಾಗರಾಜ ನಂಜುಂಡಯ್ಯ



ಮಹಿಳಾ ಸಬಲೀಕರಣ ಸಮಸ್ಯೆಗಳು ಹಲವು

ವಿಮಲಾ ಕೆ.ಎಸ್.

ಅಂದು ನ್ಯೂಯಾರ್ಕ ನಗರದಲ್ಲಿ ತಮಗೂ ಘನತೆಯ ಬದುಕಿನ ಹಕ್ಕಿದೆ, ಸಮಾನ ಅವಕಾಶಗಳು, ಸವಲತ್ತುಗಳು, ವೇತನ, ಹೆರಿಗೆ ರಜೆ, ಆಯ್ಕೆಯ ಸರಕಾರವನ್ನು ರಚಿಸುವಲ್ಲಿ ಮತ ಚಲಾಯಿಸುವ ಹಕ್ಕು ಬೇಕೇ ಬೇಕೆಂದು ಘೋಷಣೆಗಳು ಮುಗಿಲು ಮುಟ್ಟಿದ್ದವು. ಅದನ್ನು ಚಿರಸ್ಥಾಯಿಗೊಳಿಸಿದ ಕ್ಲಾರಾ ಜೆಟ್ಕಿನ್ ರವರನ್ನು ಮತ್ತೆ ಮತ್ತೆ ನೆನೆಯುತ್ತಲೇ ಅದಕ್ಕೆ ಕಾರಣರಾದ ಆ ಧೀರ ಮಹಿಳೆಯರಿಗೆ ವರ್ಷಕ್ಕೊಮ್ಮೆ ಪೊಡಮಡುತ್ತೇವೆ.

2025ರ ಮಹಿಳಾ ದಿನದ ಸಂದರ್ಭದಲ್ಲಿ ನಮ್ಮೆದುರಿಗಿನ ಸವಾಲುಗಳತ್ತ ಒಮ್ಮೆ ಕಣ್ಣು ಹೊರಳಿಸಿದರೆ.... ಅಸಮಾನ ವೇತನ, ಲಿಂಗಾಧಾರಿತ ದೌರ್ಜನ್ಯ, ಮಹಿಳಾ ದುಡಿಮೆಗಾರರ ಸಂಖ್ಯೆಯಲ್ಲಿ ಗಣನೀಯ ಕುಸಿತ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಅಲಭ್ಯತೆ, ಉದ್ಯೋಗದ ಸ್ಥಳದಲ್ಲಿ ಕಾಣುವ ವ್ಯವಸ್ಥಿತ ತಾರತಮ್ಯ, ವಿಕೃತ ಸ್ವರೂಪಗಳಲ್ಲಿ ಪ್ರಕಟಗೊಳ್ಳುತ್ತಿರುವ ಲೈಂಗಿಕ ದೌರ್ಜನ್ಯ, ನಾಯಕತ್ವದ ಸ್ಥಾನದಲ್ಲಿ ಕಾಣದ ಏರಿಕೆ.. ಪಟ್ಟಿ ಬೆಳೆಯುತ್ತದೆ.

ಒಂದೊಂದೇ ಸವಾಲುಗಳನ್ನು ಗಮನಿಸಿದರೆ..

ಸಮಾನ ಕೆಲಸಕ್ಕೆ ಸಮಾನ ವೇತನವೆಂಬ ಮಾತು ಅಕ್ಷರಶಃ ಮೂಲೆಗೆ ತಳ್ಳಲ್ಪಟ್ಟಿದೆ. ಸರಕಾರಗಳ ಬಾಹ್ಯೋಪಚಾರದ ಬಡಬಡಿಕೆಗಳು ಬದುಕು ಹಸನು ಮಾಡಲಾರವು. ಒಂದು ಅಂದಾಜಿನಂತೆ ಸ್ತ್ರೀ-ಪುರುಷರ ವೇತನದ ಪ್ರಮಾಣದಲ್ಲಿ ಅಗಾಧವಾದ ವ್ಯತ್ಯಾಸ ಇನ್ನೂ ಮುಂದುವರೆದಿದೆ. ಪುರುಷರ ವೇತನಕ್ಕಿಂತ ಸರಿ ಸುಮಾರು 20-30% ಮಹಿಳೆಯರು ಕಡಿಮೆ ವೇತನ ಪಡೆಯುತ್ತಾರೆ. ಸಂಘಟಿತ, ಸರಕಾರಿ, ಸಾರ್ವಜನಿಕ ವಲಯಗಳಲ್ಲಿ ಉದ್ಯೋಗದ ಲಭ್ಯತೆಯೇ ಕ್ಷೀಣವಾಗಿದೆ. ಒಂದು ವರದಿಯ ಪ್ರಕಾರ ಕರ್ನಾಟಕ ಸರಕಾರದಲ್ಲಿ ಭರ್ತಿಯಾಗಬೇಕಾದ ಹುದ್ದೆಗಳು 2.76 ಲಕ್ಷವಂತೆ. ಅರ್ಹ ಮಹಿಳೆಯರೂ ಸೇರಿದಂತೆ ಈ ಹುದ್ದೆಗಳಿಗೆ ಭರ್ತಿ ಮಾಡುವ ಇಚ್ಚಾಶಕ್ತಿ ಸರಕಾರಕ್ಕೆ ಇದ್ದರೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವ ಕ್ಷೇತ್ರವಿದಾಗುತ್ತದೆ. ಆದರೆ 90ರ ದಶಕದಲ್ಲಿ ಜಾರಿಗೆ ಬಂದ ಉದಾರೀಕರಣ, ಖಾಸಗೀಕರಣಗಳ ನೀತಿಗಳು ಅದಕ್ಕೆ ಅವಕಾಶ ನೀಡುವುದಿಲ್ಲ. ಸುರಕ್ಷಿತವಲ್ಲದ, ಉದ್ಯೋಗ ಭದ್ರತೆಯೂ ಇಲ್ಲದ, ಕರಾರು ಕಾರ್ಮಿಕ, ಹೊರಗುತ್ತಿಗೆ ಕಾರ್ಮಿಕರಾಗಿ ಕೆಲಸ ಮಾಡುವುದ ಅನಿವಾರ್ಯ. ಇದರ ಪರಿಣಾಮ ಲಿಂಗಾಧಾರಿತ ವೇತನ ತಾರತಮ್ಯದ ಮುಂದುವರಿಕೆಯೂ ಕೂಡಾ.

ಲಿಂಗಾಧಾರಿತ ದೌರ್ಜನ್ಯಗಳು ನಾಗರಿಕತೆ, ತಂತ್ರಜ್ಞಾನ ಬೆಳೆದಂತೆಲ್ಲ ಕಡಿಮೆಯಾಗುವ ಬದಲು ಇನ್ನಷ್ಟು ಕೆಟ್ಟ ರೀತಿಯಲ್ಲಿ ಬೆಳೆಯುತ್ತಿದೆ. ಸರಕಾರದ ಅಂಕಿ ಅಂಶಗಳ ಪ್ರಕಾರವೇ ಹೋದರೂ ಪ್ರತಿ ಮೂರು ನಿಮಿಷಕ್ಕೆ ಒಬ್ಬ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯದ ಪ್ರಕರಣ ದಾಖಲಾದರೆ, ಪ್ರತಿ ಘಂಟೆಗೆ ಕನಿಷ್ಟ ಇಬ್ಬರು ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗುತ್ತಾರೆ. ಪ್ರತಿ 6 ಘಂಟೆಗಳಿಗೆ ಕನಿಷ್ಟ ಒಬ್ಬ ನವ ವಿವಾಹಿತ ಯುವತಿ ಹೊಡೆತ ಬಡಿತಗಳಿಂದ ಸಾಯುತ್ತಾಳೆ!! ಇಲ್ಲವೇ ಆತ್ಮಹತ್ಯೆಗೆ ತಳ್ಳಲ್ಪಡುತ್ತಾಳೆ. ಇನ್ನೂ ದಾರುಣ 28.4% ಗರ್ಭಿಣಿ ಸ್ತ್ರೀಯರು ಕೌಟುಂಬಿಕ ಹಿಂಸೆಯ ಬಲಿಪಶುಗಳು. ಇವು ಎನ್.ಸಿ.ಆರ್.ಬಿ. ವರದಿಗಳು. ಎಂದರೆ ಅಧಿಕೃತವಾಗಿ ದಾಖಲಾದ ಪ್ರಕರಣಗಳು. ಇಂತಹ ಹಿಂಸೆ, ದೌರ್ಜನ್ಯಗಳ ಬದುಕು ಬಹುತೇಕ ಮಹಿಳೆಯರನ್ನು ಒಂದು ರೀತಿಯ ಅನಾಥ ಸ್ಥಿತಿಗೆ ತಳ್ಳುತ್ತದೆ. ಉದ್ಯೋಗವಿಲ್ಲದೇ, ಆದಾಯವಿಲ್ಲದೇ, ಸ್ವಯಂ ಆರೈಕೆಯೂ ಇಲ್ಲದೇ, ಮಕ್ಕಳ ಲಾಲನೆ ಪಾಲನೆಯೂ ಸಾಧ್ಯವಿಲ್ಲದ ದಯನೀಯ ಸ್ಥಿತಿಗೆ ನೂಕಲ್ಪಡುತ್ತಾರೆ.

ಇನ್ನು ವಿಶ್ವಾರೋಗ್ಯ ಸಂಸ್ಥೆ ವಿವಿಧ ದೇಶಗಳಲ್ಲಿ ನಡೆಸಿದ ಒಂದು ಅಧ್ಯಯನದ ಪ್ರಕಾರ 40-60% ಮಹಿಳೆಯರು ತಮ್ಮ ಅತಿ ಹತ್ತಿರದ ಜನರಿಂದ ಬಹುತೇಕ ಬಾಳಸಂಗಾತಿಯದ ಪುರುಷನಿಂದ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಆಗಾಗ ವಿವಿಧ ಪತ್ರಿಕೆಗಳು, ಸುದ್ದಿ ಮಾಧ್ಯಮಗಳು ಪ್ರಕಟಿಸಿರುವ ಅಂಕಿ ಅಂಶಗಳ ಪ್ರಕಾರ 2024 ರ ಮೊದಲರ್ಧದಲ್ಲಿ ದಾಖಲಾದ ಪ್ರಕರಣಗಳು ಕರ್ನಾಟಕದಲ್ಲಿ 6551. ರಾಜ್ಯದ ರಾಜಧಾನಿಯಲ್ಲಿ 2024ರಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳಲ್ಲಿ 9% ಏರಿಕೆಯಾಗಿದೆ. ಪೋಲೀಸ್ ರೆಕಾರ್ಡಗಳ ಪ್ರಕಾರವೇ 2023ರಲ್ಲಿ 1139 ಪ್ರಕರಣಗಳು ದಾಖಲಾಗಿದ್ದರೆ, 2024ರಲ್ಲಿ 1247 ಪ್ರಕರಣಗಳು ದಾಖಲಾಗಿವೆಯಂತೆ! ಅತ್ಯಾಚಾರದ ಪ್ರಕರಣಗಳಲ್ಲಿ 3% ಏರಿಕೆಯಾಗಿ 178 ಪ್ರಕರಣಗಳು ದಾಖಲೆಯಾಗಿವೆ. ಕೌಟುಂಬಿಕ ಹಿಂಸೆ ಎನ್ನುವ ನರಕಯಾತನೆಯಿಂದ ಬಿಡುಗಡೆಯೇ ಇಲ್ಲವೇನೋ ಎಂಬಂತೆ ಮಹಿಳೆಯರು ಒಂದಲ್ಲ ಒಂದು ರೀತಿಯ ಹಿಂಸೆಯನ್ನು ಎದುರಿಸುತ್ತಲೇ ಜೀವನ ನಡೆಸುವ ಮತ್ತು ಬಿಡುಗಡೆಯ ದಾರಿಯೂ ಸುಲಭವಲ್ಲದ ಸ್ಥಿತಿಯೇ ಉಳಿದಿದೆ.. 2024ರಲ್ಲಿ ಅಪ್ರಾಪ್ತರ ಮೇಲಿನ ಲೈಂಗಿಕ ದೌರ್ಜನ್ಯದಲ್ಲಿ ಇಳಿಕೆಯಾಗಿದೆ!!. ಅಧಿಕೃತ ದಾಖಲೆಗಳ ಪ್ರಕಾರ ಹಿಂದಿನ ವರ್ಷದ 596ಕ್ಕಿಂತ ಕಡಿಮೆ 577!! ಇನ್ನು ವಿವಿಧ ರಾಜ್ಯಗಳಿಂದ ಅಪ್ರಾಪ್ತ ಬಾಲಕಿಯರನ್ನು ಕರೆತಂದು ದೇಹವ್ಯಾಪಾರಕ್ಕೆ ಇಳಿಸಿದ್ದನ್ನು ಸಿ.ಸಿ.ಬಿ.ಪೊಲೀಸರು ಪತೆಹಚ್ಚಿದ್ದಾರೆ. ಅವರಲ್ಲಿ ಬಾಂಗ್ಲಾದೇಶದಿಂದ ಕದ್ದು ಗಡಿ ದಾಟಿಸಿ ಕರೆತಂದ ಮೂವರು ಬಾಲಕಿಯರೂ ಇದ್ದರು. ಇದನ್ನೆಲ್ಲ ನಡೆಸುವ ವ್ಯವಸ್ಥಿತ ಜಾಲ ನಿರಂತರವಾಗಿ ಇಂತಹ ಕಾರ್ಯವನ್ನು ನಡೆಸುತ್ತಲೇ ಇರುತ್ತದೆ. ಬಡತನ, ಬದುಕು ನಿರ್ವಹಣೆಯ ಅನಿವಾರ್ಯತೆಗಳು, ಕೆಲಸ ಕೊಡಿಸುವ ಆಮಿಷಗಳು ಹೀಗೆ ಒಟ್ಟಿನಲ್ಲಿ ಮಹಿಳೆಯರು ಬಲಿಪಶುಗಳು.

2024 ರಲ್ಲಿ ಬೆಂಗಳೂರು ನಗರದಲ್ಲಿಯೇ 25 ಮಹಿಳೆಯರು ವರದಕ್ಷಿಣೆ ದಾಹಕ್ಕೆ ಜೀವಬಲಿಕೊಟ್ಟಿದ್ದಾರೆ. ಸಾವಿನ ಕಾರಣಗಳು ಬಹಳ ಸಂದರ್ಭಗಳಲ್ಲಿ ದಾಖಲೆಯೇ ಆಗುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹೀಗಿದ್ದೂ, ವರದಕ್ಷಿಣೆ ಕೊಡುವುದು ತೆಗೆದುಕೊಳ್ಳುವುದು ಅಪರಾಧ ಎಂಬುದು ತಿಳಿಯದ ಸಂಗತಿಯಲ್ಲ. ಆದರೆ ಕಾನೂನು ಕಡತಕ್ಕೆ, ಎಂಬಂತೆ ಇದೆ ಅಷ್ಟೆ.

ಒಂದು ರಾಜ್ಯದ ರಾಜಧಾನಿಯೊಂದರಲ್ಲೇ ವರ್ಷವೊಂದಕ್ಕೆ 25 ಮಹಿಳೆಯರು ವರದಕ್ಷಿಣೆಯ ಕಾರಣಕ್ಕೆ ಜೀವಬಲಿತೆತತ್ತಿದ್ದಾರಾದರೂ ನಮ್ಮ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯ ವರದಕ್ಷಿಣೆ ಕಾನೂನು ಮಹಿಳೆಯರಿಂದ ದುರ್ಬಳಕೆಯಾಗುತ್ತಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಒಂದು ದೇಶದ ಪ್ರಗತಿಯನ್ನು ಅಲ್ಲಿಯ ಮಹಿಳೆಯರ ಸ್ಥಿತಿಗತಿಯನ್ನಾಧರಿಸಿ ನಿರ್ಧರಿಸಬೇಕೆಂದು ಅಂಬೇಡ್ಕರ್ ಹೇಳಿದರೆಂದು ಉಲ್ಲೇಖಿಸುವ ದೇಶದಲ್ಲಿ ಇರುವ ಸ್ಥಿತಿ ಇದು.

ಹೀಗೆ ಅಂಕಿ ಸಂಕಿಗಳ ಸರ್ಕಸ್ ಮಾಡುವ ಮೂಲಕ ನಾವು ಕಳೆದು ಹೋಗುತ್ತಿರುವುದು ಎಲ್ಲಿ ಎಂಬ ಪ್ರಶ್ನೆಗಳು ನಮಗೆದುರಾಗಿವೆ.

ಹೆಣ್ಣೆಂದರೆ ಹೆರುವ ಯಂತ್ರವೇ?

ಮಹಿಳಾ ಸಮಾನತೆಯ ಕೂಗು ಇಂದೀಗ ಮಹಿಳಾ ಸುರಕ್ಷತೆಗಾಗಿನ ಕೂಗಾಗಿ ಮಾರ್ಪಾಟಾದ ಹೊತ್ತಿದು. 1911 ರ ವರ್ಷ ಶುರುವಾದ ಆ ಕೂಗು ಹಾಗೇ ಮುಂದುವರೆದು ಒಂದೆರಡು ವರ್ಷಗಳಲ್ಲಿ ಅವರ ಬೇಡಿಕೆಯಲ್ಲಿ ಅಡುಗೆ ಮನೆಯಿಂದ ಸ್ವಾತಂತ್ರ್ಯವನ್ನೂ ಕೇಳಿತ್ತು ಎನ್ನುತ್ತವೆ ಚರಿತ್ರೆಯ ಪುಟಗಳು. ಅಡುಗೆ ಮನೆ ಎನ್ನುವಾಗ ಅದೊಂದು ರೂಪಕದಂತೆ. ಎಂದರೆ ಹೆಣ್ಣಿಗೆ ಮೀಸಲಾದ ಕೆಲವು ಕೆಲಸಗಳಿಂದ ಬಿಡುಗಡೆಯೂ ಆಗಬಹುದು, ಅಂತೆಯೇ ಆಯ್ಕೆ ಸ್ವಾತಂತ್ರ್ಯದ ಒಂದು ಪ್ರತಿಮೆಯೂ ಆಗಬಹುದು. ಆದರಿಂದು ಆ ಆಯ್ಕೆ ಸ್ವಾತಂತ್ರ್ಯದ ಮೇಲೆ ನೇರ ದಾಳಿಗಳು ನಡೆಯುತ್ತಿವೆ. ಹೆಣ್ಣೆಂದರೆ ಹೆರಿಗೆ ಯಂತ್ರವೆಂಬಂತೆ ಭಾವಿಸುವ, ಮತ್ತು ಅದನ್ನು ಧರ್ಮೋದ್ದಾರದ ಭಾಗವಾಗಿ ಬಯಸುವ ಸ್ಥಿತಿ ಎದುರಾಗಿದೆ. ಪುರುಷನ ಆಸೆ ಆಕಾಂಕ್ಷೆಗಳನ್ನು ಪೂರೈಸುವುದೇ ಹೆಣ್ಣಿನ ಕರ್ತವ್ಯ ಎಂಬುದನ್ನು ಸ್ಥಿರೀಕರಿಸುವ ಹಲವು ವ್ಯತಿರಿಕ್ತ ಬೆಳವಣಿಗೆಗಳು ಇತ್ತೀಚೆಗೆ ನಡೆದಿವೆ. ಕೋಮುದುರ್ಭಾವನೆ ಬೆಳೆಸುವ, ಜಾತಿಯ, ಧರ್ಮದ ಉಳಿವಿಗಾಗಿ ಹೆಣ್ಣು ಹೆಚ್ಚು ಮಕ್ಕಳನ್ನು ಹೆರಬೇಕೆನ್ನುವ ಆದೇಶಗಳು ಜಾತಿ ಸಂಘಟನೆಗಳ ಸಮ್ಮೇಳನಗಳಲ್ಲಿ, ಮಠಾಧೀಶರುಗಳ ಬಾಯಿಗಳಿಂದ ಹೊರಬರುತ್ತಿದೆ. ಇದೇ ವೇಳೆಗೆ ಅಪುತ್ರಸ್ಯ ಗತಿರ್ನಾಸ್ತಿ ಎಂಬುದನ್ನು ಗಟ್ಟಿಗೊಳಿಸಲು, ಪುತ್ರ ಸಂತಾನದ ಮೋಹಕ್ಕೆ ಬಿದ್ದು ಹೆಣ್ಣು ಭ್ರೂಣಗಳ ಹತ್ಯೆಯೂ ಅವ್ಯಾಹತವಾಗಿ ನಡೆಯುತ್ತಿದೆ.

ಆರೋಗ್ಯವೆಂಬ ಮರೀಚಿಕೆ:

ಇತ್ತೀಚೆಗೆ ದೊಡ್ಡ ಸದ್ದು ಮಾಡಿ ಅಲ್ಲೇ ತಣ್ಣಗಾದ ಮತ್ತೊಂದು ಹೃದಯ ವಿದ್ರಾವಕ ಘಟನೆ ಅಥವಾ ಘಟನೆಗಳು ಬಾಣಂತಿಯರ ಸರಣಿ ಸಾವು. ಬಳ್ಳಾರಿ ಮತ್ತು ರಾಯಚೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಸಂಭವಿಸಿದ ಸಾವುಗಳಿಗೆ ಕಳಪೆ ಐ.ವಿ.ದ್ರಾವಣ ಕಾರಣವೆಂದು ಹೇಳಲಾಯಿತು. ಆಸ್ಪತ್ರೆಗಳಲ್ಲಿ ಕನಿಷ್ಟ ಸೌಲಭ್ಯಗಳಿಲ್ಲ, ಬಡವರ ಗೋಳು ಕೇಳುವವರಿಲ್ಲ, ಭಿಕ್ಷೆಯಂತೆ ಕೊಟ್ಟ ನಾಲ್ಕು ಕಾಸು ಗ್ಯಾರಂಟಿಗಳನ್ನೇ ಮಹಾಕೊಡುಗೆ ಎಂಬಂತೆ ವರ್ಣಿಸುವ ಆದರೆ ಸಮಾಜದ ನಿಜ ಪ್ರಗತಿಗೆ ಅಗತ್ಯವಾದ ಆರೋಗ್ಯ ವ್ಯವಸ್ಥೆಯನ್ನು ಖಾಸಗಿಯವರ ಉಡಿಗೆ ಹಾಕಿ ಸರಕಾರ ಕೈತೊಳೆದುಕೊಂಡಿದೆ. 2024 ರ ನವೆಂಬರ್ ತಿಂಗಳ ಹೊತ್ತಿಗೆ 342 ಹೆರಿಗೆ ಮರಣಗಳು ಸಂಭವಿಸಿವೆ. ಆಗಸ್ಟ್ ನಿಂದ ನವೆಂಬರ್ ಈ ನಾಲ್ಕು ತಿಂಗಳಲ್ಲಿ 217 ಹೆರಿಗೆ ಮರಣಗಳು ಸಂಭವಿಸಿವೆ. ತಾಯ್ತನವನ್ನು ವೈಭವೀಕರಿಸುವ ವ್ಯವಸ್ಥೆ ಹೆಣ್ಣಿನ ಹೆರಿಗೆ ಮತ್ತು ಬಾಣಂತಿಗೆ ಕೊಡಬೇಕಾದ ಪ್ರಾಮುಖ್ಯತೆ ಯಾಕೆ ಕೊಡುತ್ತಿಲ್ಲ. ಘನತೆಯ ಬದಕಿನ ಹಕ್ಕಿನ ಭಾಗವಿದು. ಸಮಾಜವಾದೀ ವ್ಯವಸ್ಥೆಯನ್ನು ಹೊರತು ಪಡಿಸಿದರೆ ಬೇರೆಲ್ಲೂ ಇದನ್ನು ಕಲ್ಪಿಸಿಕೊಳ್ಳಲಾಗದ ಸಂಗತಿ. ಒಂದು ಅಧ್ಯಯನದ ಪ್ರಕಾರ ಪುರುಷರಿಗೆ ಹೋಲಿಸಿದರೆ ಕೇವಲ 37% ಮಹಿಳೆಯರು ಆರೋಗ್ಯ ಸೇವೆಗಳ ಫಲಾನುಭವಿಗಳು. ಇಷ್ಟು ಕಡಿಮೆ ಪ್ರಮಾಣಕ್ಕೆ ಕಾರಣ-ಬಡತನ, ಹೆಣ್ಣಿನ ಅಗತ್ಯಗಳು ನಗಣ್ಯ, ಅಜ್ಞಾನ ಮತ್ತು ಗ್ರಾಮೀಣ ಭಾರತದ ಸಂದರ್ಭದಲ್ಲಿ ಪುರುಷ ವೈದ್ಯರುಗಳ ಜೊತೆ ಆರೋಗ್ಯ ಸಂಬಂಧೀ ವಿಷಯಗಳನ್ನು ಹಂಚಿಕೊಳ್ಳಲು ಹಿಂಜರಿಕೆ, ಆಸ್ಪತ್ರೆ, ವೈದ್ಯರುಗಳು, ಆರೋಗ್ಯ ಸಿಬ್ಬಂದಿಗಳ ಅಲಭ್ಯತೆಗಳ ಕಾರಣಗಳಿರುತ್ತವೆ.

ಮತ ಹಾಕುವ ಸ್ವಾತಂತ್ರದ ಜೊತೆ ನಾಯಕತ್ವದ ಸಮಾನ ಅವಕಾಶವಿಲ್ಲವೇಕೆ?

ಮೇಲ್ತೋರಿಕೆಯ ಸ್ವಾತಂತ್ರ ನಮಗಿದೆ. ನಾವು ಚುನಾವಣೆಯಲ್ಲಿ ಮತ ಹಾಕುತ್ತೇವೆ. ಅಂದು ಆ ಸೋದರಿಯರು ನಮಗಾಗಿ ಈ ಹಕ್ಕುಗಳ ಬೇಡಿಕೆ ಇಟ್ಟು ಹೋರಾಡಿದ್ದರಲ್ಲ. ಆದರೀಗ ನಮ್ಮ ಮತ ಪಡೆದು ಆಯ್ಕೆಯಾದವರು ನಮ್ಮ ಪ್ರತಿನಿಧಿಗಳೆಂದು ಎದೆ ತಟ್ಟಿ ಹೇಳಬಲ್ಲೆವೇನು? ಸಮಾನ ಅವಕಾಶ ಸರ್ವರಿಗೂ ಎಂಬ ಸಂವಿಧಾನಕ್ಕೀಗ 75ವರ್ಷ. ಆದರೆ ಈ ಹೊತ್ತಿನಲ್ಲಿ ಸಂಸತ್ತಿನಲ್ಲಿ ಮಹಿಳಾ ಪ್ರಾತಿನಿಧ್ಯ ಕೇವಲ 14%. ಇದಕ್ಕಿಂತ ವಿಪರ್ಯಾಸ ಇನ್ನೊಂದು ಬೇಕೇ?? ಚುನಾವಣೆಯ ಹೊಸ್ತಿಲಲ್ಲಿ ಅಂಗೀಕರಿಸಿದ ಮಹಿಳಾ ಮೀಸಲಾತಿ ಮಸೂದೆ ಮೂಗಿಗೆ ಸವರಿದ ತುಪ್ಪ. ಜೊತೆ ಜೊತೆಗೇ ಬಹಳ ಚಾಣಾಕ್ಷತನದಿಂದ ಹೆಣೆದ ಸಾಲುಗಳು, ಬಳಸಿದ ಪದಪುಂಜಗಳು, ಇರಿಸಿದ ಕ್ಷೇತ್ರ ಪುನರ್ವಿಂಗಡನೆಯ ಅಡ್ಡಗಾಲುಗಳು ಕೆಲವು ರಾಜ್ಯಗಳಿಗೆ ಮಹಿಳಾ ಮೀಸಲಾತಿ ಅನ್ವಯವೇ ಆಗದ ಸ್ಥಿತಿಯನ್ನು ತಂದಿರಿಸಿದರೆ ಯಾವ ಅಚ್ಚರಿಯೂ ಇಲ್ಲ ಎನ್ನುತ್ತಾರೆ ಬಲ್ಲವರು.

ಎಲ್ಲ ಪ್ರಮುಖ ದಿನಗಳಂತೆ ಅಂತರ ರಾಷ್ಟ್ರೀಯ ಮಹಿಳಾ ದಿನಕ್ಕೂ ವಿಶ್ವಸಂಸ್ಥೆ ಘೋಷಣೆ ಕೊಟ್ಟಿದೆ. ಅದೆಂದರೆ ಕೆಲಸದ ವೇಗ ಹೆಚ್ಚಿಸಿ-ಎಂದರೆ ಮಹಿಳೆಯರ ಘನತೆಯ ಬದುಕಿನ ಹಕ್ಕನ್ನು ಖಾತ್ರಿ ಮಾಡಲು ಸರಕಾರಗಳು ತಮ್ಮ ಬದ್ಧತೆಯನ್ನು ಪ್ರದರ್ಶನ ಮಾಡಬೇಕು. ಘೋಷಣೆಗಳು ಕಾರ್ಯರೂಪಕ್ಕೆ ಬರಬೇಕು ಎನ್ನುವುದೇ ಆಗಿದೆ.

ಸಾಧನೆಗಳೆಲ್ಲ ಒಂದೊಂದಾಗಿ ತೊಟ್ಟು ಕಳಚಿ ಬೀಳುವಂತಾದಾಗ ಸರಕಾರ, ಸಮಾಜಗಳ ಸಮಭಾಗಿತ್ವ ಮತ್ತು ಸಹಭಾಗಿತ್ವದ ಮೂಲಕವಷ್ಟೇ ಸಮಸ್ಥಿತಿಗೆ ತರಲು ಸಾಧ್ಯ. ಅದೇ ವೇಳೆಗೆ ಸಿಡಿದೆದ್ದು ಸವಾಲನ್ನು ಸ್ವೀಕರಿಸಿ ಸಮಾಜಕ್ಕೆದುರಾಗಿ, ಸಮಾನ ಮನಸ್ಕ ಪುರುಷರೊಂದಿಗೆ ಸೇರಿ ನಿಲ್ಲುವ ಛಾತಿಯನ್ನು ಮಹಿಳೆಯರೂ ಉಳಿಸಿಕೊಂಡು, ಅಂದು ಹೋರಾಡಿದ ಮಹಿಳೆಯರ ಪರಂಪರೆಯನ್ನು ಮುಂದುವರೆಸಬೇಕು. ನಿಲ್ಲಬೇಕು. ಛಲದಿಂದ ಗೆಲ್ಲಬೇಕು. ●







ಸಾಮ್ರಾಜ್ಯಶಾಹಿಯ ಮರು ಪ್ರಾಬಲ್ಯಕ್ಕೆ 'ಆಮಿಷ-ದಂಡಪ್ರಯೋಗ'ದ ಟ್ರಂಪ್ ರಣತಂತ್ರ

ಬೇರೆ ದೇಶಗಳ ಮೇಲೆ ಬಲಾತ್ಕಾರದ ವಿಧಾನಗಳಿಗೇ ಹೆಸರಾಗಿರುವ ಟ್ರಂಪ್ ಅಧ್ಯಕ್ಷತೆಯ ಯುಎಸ್ ಉಕ್ರೇನ್ ಯುದ್ಧವನ್ನು ಕೊನೆಗೊಳಿಸಲು ಪ್ರಯತ್ನ ನಡೆಸಿರುವುದು ಮೇಲ್ನೋಟಕ್ಕೆ ಆಶ್ಚರ್ಯವುಂಟು ಮಾಡಬಹುದು. ಆದರೆ ಇದು ಅವರ 'ಮನವೊಲಿಕೆ ಮತ್ತು ಬಲಾತ್ಕಾರ' (ಆಮಿಷ ಮತ್ತು ದಂಡಪ್ರಯೋಗದ) ಸಂಯೋಜಿತ ರಣತಂತ್ರದಲ್ಲಿನ ಮನವೊಲಿಕೆಯ ಭಾಗ ಮಾತ್ರವಾಗಿದೆ. ಇದು ಯುಎಸ್ ನೇತೃತ್ವದ ಸಾಮ್ರಾಜ್ಯಶಾಹಿಯ ಪ್ರಾಬಲ್ಯವನ್ನು ಉಳಿಸಿಕೊಳ್ಳುವ, ಯುಎಸ್ ವಿರುದ್ಧವಾಗಿ ಮತ್ತು ಒಟ್ಟಾರೆಯಾಗಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ಒಂದು ಪರ್ಯಾಯ ಶಕ್ತಿ ಬಣ ರೂಪುಗೊಳ್ಳದಂತೆ ತಡೆಯುವ ರಣತಂತ್ರವಾಗಿದೆ. ಆದರೆ ಯುಎಸ್ ಉಂಡೂ ಹೋಗಬೇಕು, ಕೊಂಡೂ ಹೋಗಬೇಕು ಎನ್ನುವ ರೀತಿಯ ಈ ರಣತಂತ್ರ ನವ-ಉದಾರವಾದಿ ವ್ಯವಸ್ಥೆಯಲ್ಲಿ ಮೂಲಭೂತವಾಗಿ ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ಮರುಸ್ಥಾಪಿಸುವ ಯೋಜನೆಗೆ ಪ್ರತಿಕೂಲವಾಗಿದೆ. ಹಿಂದಿನ ಅಧ್ಯಕ್ಷ ಬೈಡೆನ್ ಇಂತಹ ಪ್ರಯತ್ನದಲ್ಲಿ ಸಾಮ್ರಾಜ್ಯಶಾಹಿಯನ್ನು ಒಂದು ಮೂಲೆಗೆ ತಳ್ಳಿದ್ದರೆ, ಆ ಮೂಲೆಯಿಂದ ಅದನ್ನು ಹೊರತೆಗೆಯುವ ಟ್ರಂಪ್ ಪ್ರಯತ್ನ ಸಾಮ್ರಾಜ್ಯಶಾಹಿಯನ್ನು ಇನ್ನೊಂದು ಮೂಲೆಗೆ ತಳ್ಳುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಡೊನಾಲ್ಡ್ ಟ್ರಂಪ್ ಅವರ ವಿದೇಶಾಂಗ ನೀತಿಯು ವ್ಯಾಖ್ಯಾನಕಾರರನ್ನು ನಿಜಕ್ಕೂ ಕಸಿವಿಸಿಗೊಳ್ಳುವಂತೆ ಮಾಡಿದೆ. ಉಕ್ರೇನ್ ಮತ್ತು ಗಾಜಾಗೆ ಸಂಬಂಧಿಸಿದಂತೆ ಅವರ ನಿಲುವುಗಳು ಗಮನಾರ್ಹವಾಗಿ ವಿಭಿನ್ನವಾಗಿವೆ. ಉಕ್ರೇನ್ ವಿಷಯದಲ್ಲಿ ಅವರು ಶಾಂತಿಯ ಪರವಾಗಿರುವಂತೆ ಕಾಣುವ ನಿಲುವನ್ನು ತಳೆಯುತ್ತಾರೆ ಮತ್ತು ಗಾಜಾದ ವಿಷಯದಲ್ಲಿ ಜನಾಂಗೀಯ ಆಧಾರದ ಮೇಲೆ ಇಡೀ ಜನಸಮುದಾಯವನ್ನು ಶುದ್ಧೀಕರಣಗೊಳಿಸುವ ನಿಲುವನ್ನು ತಳೆಯುತ್ತಾರೆ. ಹಾಗಾಗಿ, ವಿಶ್ವ ವ್ಯವಹಾರಗಳ ಮೇಲೆ ಟ್ರಂಪ್ ಅವರ ಪ್ರಭಾವವು "ಸಕಾರಾತ್ಮಕ"ವಾಗಿದೆಯೇ ಅಥವಾ ಇಲ್ಲವೇ ಎಂಬುದಾಗಿ ವ್ಯಾಖ್ಯಾನಕಾರರು ತಲೆ ಕೆರೆದುಕೊಳ್ಳುವಂತೆ ಮಾಡಿದೆ. ಹಾಗೆ ನೋಡಿದರೆ, ಟ್ರಂಪ್ ಅವರ ಹೇಳಿಕೆಗಳ ಬಗ್ಗೆ ಕಸಿವಿಸಿಗೊಳ್ಳುವ ಅವಶ್ಯಕತೆಯೇ ಇಲ್ಲ. ಸಾಮ್ರಾಜ್ಯಶಾಹಿಯ ವಿದ್ಯಮಾನವನ್ನು ಅರಿತುಕೊಳ್ಳದಿದ್ದಾಗ ಮಾತ್ರ ಟ್ರಂಪ್ ಅವರ ಹೇಳಿಕೆಗಳು ತಬ್ಬಿಬ್ಬುಗೊಳಿಸಬಹುದಷ್ಟೇ. ಉಕ್ರೇನ್ ಯುದ್ಧವು ಒಂದು ವಿನಾಶಕಾರಿ ಪರಮಾಣು ಮುಖಾಮುಖಿಯ ಹಂತಕ್ಕೆ ಉಲ್ಬಣಗೊಳ್ಳಲಿರುವ ಪರಿಸ್ಥಿತಿ ಅಥವಾ ಸಾಮ್ರಾಜ್ಯಶಾಹಿಯ ಪ್ರಾಬಲ್ಯವು ಕ್ರಮೇಣ ಇಳಿಕೆಯಾಗುವ ಪರಿಸ್ಥಿತಿ ಇವುಗಳ ನಡುವೆ ಆಯ್ಕೆ ಮಾಡಿಕೊಳ್ಳುವ ಹಂತಕ್ಕೆ ಯುಎಸ್ ನೇತೃತ್ವದ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ತನ್ನನ್ನು ತಾನೇ ತಳ್ಳಿಕೊಂಡಿದೆ ಎಂಬುದರಲ್ಲಿ ಸಂದೇಹವಿಲ್ಲ. ಸಾಮ್ರಾಜ್ಯಶಾಹಿಯನ್ನು ಅಂತಹ ಒಂದು ಕಠಿಣ ಪರಿಸ್ಥಿತಿಯಿಂದ ಹೊರತರಲು ಡೊನಾಲ್ಡ್ ಟ್ರಂಪ್ ಪ್ರಯತ್ನಿಸುತ್ತಿದ್ದಾರೆ. ಅವರು "ಶಾಂತಿಪರರೊ" ಅಥವಾ "ಯುದ್ಧಕೋರರೊ" ಅಥವಾ ಅವರು ಯುರೋಪಿಯನ್ ಹಿತಾಸಕ್ತಿಗಳ ಬಗ್ಗೆ ಗಮನ ಹರಿಸುತ್ತಾರೆಯೇ ಅಥವಾ ಇಲ್ಲವೇ ಎಂಬುದು ವಿಷಯವಲ್ಲ. ಮುಖ್ಯವಾದ ವಿಷಯವೆಂದರೆ, ಅವರು ಸಾಮ್ರಾಜ್ಯಶಾಹಿಯು ತಲುಪಿದ ಮುಂದುವರೆಯಲಾರದ ಈ ಪರಿಸ್ಥಿತಿಯಿಂದ ಅದನ್ನು ರಕ್ಷಿಸುವ ಪರ್ಯಾಯ ಸಾಮ್ರಾಜ್ಯಶಾಹಿ ಕಾರ್ಯತಂತ್ರವನ್ನು ಅನುಸರಿಸುತ್ತಿದ್ದಾರೆ ಎಂಬುದು. ಅವರು ಇದನ್ನು ಮಾಡಲಿದ್ದಾರೆ ಏಕೆಂದರೆ, ಮೊದಲಿಗೆ ಈ ಅವ್ಯವಸ್ಥೆಯನ್ನು ಉಂಟುಮಾಡಿದ ನೀತಿಯನ್ನು ರೂಪಿಸಿದ ಕಳಂಕ ಅವರಿಗೆ ಅಂಟಿಲ್ಲ.

ಕ್ರಮೇಣ ಶಿಥಿಲಗೊಳ್ಳುತ್ತಿರುವ ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ಪುನರ್ ಪ್ರತಿಷ್ಟಾಪಿಸಲು ಟ್ರಂಪ್ ಬಳಸುವ ವಿಧಾನವು ಮನವೊಲಿಕೆ ಮತ್ತು ಬಲಾತ್ಕಾರ ಇವುಗಳ ಸಂಯೋಜನೆಯಾಗಿದೆ. ತಾವು ಹಾಕುವ ತಾಳಕ್ಕೆ ರಷ್ಯಾವನ್ನು ಕುಣಿಸಬಹುದು ಎಂಬ ಒಂದು ಅಂದಾಜಿನ ಮೇಲೆ ಉಕ್ರೇನ್ ಯುದ್ಧವನ್ನು ಮೂಲದಲ್ಲಿ ಪಾಶ್ಚಾತ್ಯ ದೇಶಗಳು ಪ್ರಚೋದಿಸಿದ್ದವು. ಇದೊಂದು ತಪ್ಪಂದಾಜು ಎಂಬುದು ಈಗ ಸಾಬೀತಾಗಿದೆ. ಯುದ್ಧದಲ್ಲಿ ಉಕ್ರೇನಿಗೆ ಸತತವಾಗಿ ಹಿನ್ನಡೆಯಾಗಿದೆ ಮಾತ್ರವಲ್ಲ, ರಷ್ಯಾದ ಕರೆನ್ಸಿ "ರೂಬಲ್ ಅನ್ನು ಚೂರು ಚೂರು ಮಾಡುವ" ಉದ್ದೇಶದಿಂದ ರಷ್ಯಾದ ಮೇಲೆ ಹೇರಿದ ಆರ್ಥಿಕ ನಿರ್ಬಂಧಗಳೇ ಒಂದು ತಿರುಗುಬಾಣವಾಗಿ ಪರಿಣಮಿಸಿವೆ. ಕೆಲವು ದಿನಗಳ ತಾತ್ಕಾಲಿಕ ಕುಸಿತದ ನಂತರ, ಡಾಲರ್‌ಗೆ ಹೋಲಿಸಿದರೆ, ರೂಬಲ್ ಚೇತರಿಸಿಕೊಂಡಿತು ಮಾತ್ರವಲ್ಲ, ನಿರ್ಬಂಧ-ಪೂರ್ವದಲ್ಲಿ ಅದು ಹೊಂದಿದ್ದ ಮೌಲ್ಯಕ್ಕಿಂತಲೂ ಹೆಚ್ಚು ಮೌಲ್ಯವನ್ನು ರೂಬಲ್ ಪಡೆಯಿತು. ಅದಕ್ಕಿಂತಲೂ ಮಿಗಿಲಾಗಿ, ಡಾಲರ್ ಮೇಲೆ ಹೇರಿದ ಈ ನಿರ್ಬಂಧಗಳೇ ಡಾಲರ್‌ನ ಪ್ರಾಬಲ್ಯಕ್ಕೇ ಸವಾಲು ಒಡ್ಡುವ ಪ್ರತಿಕ್ರಿಯೆಯನ್ನು ಉಂಟುಮಾಡಿದವು.

ಬ್ರಿಕ್ಸ್ ದೇಶಗಳ ಕಝಾನ್ ಶೃಂಗಸಭೆಯು "ಅಪ-ಡಾಲರೀಕರಣ"ದ ವಿಷಯವನ್ನು ಒಂದು ಗಂಭೀರ ಸಾಧ್ಯತೆಯಾಗಿ ಮಂಡಿಸಿತು. ಏಕಪಕ್ಷೀಯ ಸಾಮ್ರಾಜ್ಯಶಾಹಿ ನಿರ್ಬಂಧಗಳನ್ನು ಕೆಲವು ಸಣ್ಣ ಸಣ್ಣ ದೇಶಗಳ ಮೇಲೆ ಗುರಿ ಮಾಡಿ ಹೇರಿದಾಗ ಮಾತ್ರ ಪರಿಣಾಮಕಾರಿಯಾಗಬಲ್ಲವು. ಆದರೆ, ಅನೇಕ ದೇಶಗಳನ್ನು, ಅದರಲ್ಲೂ ರಷ್ಯಾದಂತಹ ದೊಡ್ಡ, ಅಭಿವೃದ್ಧಿ ಹೊಂದಿದ ಮತ್ತು ಸಂಪನ್ಮೂಲ-ಸಮೃದ್ಧ ದೇಶಗಳನ್ನು ಗುರಿಯಾಗಿಸಿಕೊಂಡಾಗ, ಅವು ನಿರ್ಬಂಧಗಳಾಗಿ ತಮ್ಮ ಪರಿಣಾಮಕಾರಿಯಾಗಿ ಉಳಿಯುವುದಿಲ್ಲ ಮಾತ್ರಲ್ಲ, ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಎಂದು ಹೇಳಲಾಗುವ ಪ್ರಬಲ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧವೇ ಸಜ್ಜಾಗಿ ನಿಲ್ಲುವ ದೇಶಗಳ ಒಂದು ಸಮೂಹವನ್ನು ರಚಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತವೆ ಮತ್ತು ಈ ಪರ್ಯಾಯವು ನಿರ್ಬಂಧಗಳಿಗೆ ಒಳಗಾಗದ ದೇಶಗಳನ್ನೂ ಸಹ ತನ್ನ ಮಡಿಲಿಗೆ ಸೆಳೆದುಕೊಳ್ಳುತ್ತದೆ.

ದಯೆ ದಾಕ್ಷಿಣ್ಯವಿಲ್ಲದ ಸಾಮ್ರಾಜ್ಯಶಾಹಿಯಾಗಿ..

ಟ್ರಂಪ್ ಅಧಿಕಾರಕ್ಕೆ ಬರುವಾಗ ಜರುಗುತ್ತಿದ್ದುದು ಇದುವೇ ಮತ್ತು ಅಧಿಕಾರಕ್ಕೆ ಬಂದನಂತರ ಅವರು ಎದುರಿಸುತ್ತಿರುವುದು ಇದನ್ನೇ. ಅವರು ಅನುಸರಿಸುವ ಮನವೊಲಿಕೆ ಮತ್ತು ಬಲಾತ್ಕಾರ ವಿಧಾನಗಳ ಪೈಕಿ ಬಲಾತ್ಕಾರ ಭಾಗವು ಪ್ರಸಿದ್ಧಿ ಪಡೆದಿದೆ. ಅಪ-ಡಾಲರೀಕರಣದತ್ತ ಹೊರಳುವ ದೇಶಗಳ ವಿರುದ್ಧ ಭಾರೀ ಸುಂಕಗಳನ್ನು ವಿಧಿಸುವುದಾಗಿ ಟ್ರಂಪ್ ಬೆದರಿಕೆ ಹಾಕುತ್ತಾರೆ. ಇದೊಂದು ಸಾಮ್ರಾಜ್ಯಶಾಹಿಯ ನಿರ್ಲಜ್ಜ ಕ್ರಮ. ಇದು ಬಂಡವಾಳಶಾಹಿ ಕಾರ್ಯಾಚರಣೆಯ ನಿಯಮಗಳಿಗೆ ವಿರುದ್ಧವಾಗಿದೆ. ಈ ನಿಯಮಗಳ ಪ್ರಕಾರ, ಯಾವುದೇ ಒಂದು ದೇಶವು ತನ್ನ ವ್ಯಾಪಾರ ಪಾಲುದಾರರ ಸಮ್ಮತಿಯೊಂದಿಗೆ ಅದು ಇಷ್ಟಪಡುವ ಯಾವುದೇ ಕರೆನ್ಸಿಯಲ್ಲಿ ತನ್ನ ಸಂಪತ್ತನ್ನು ಹಿಡಿದಿಟ್ಟುಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ. ಅಂತಹ ಒಂದು ದೇಶದ ವಿರುದ್ಧ ಹೆಚ್ಚಿನ ಸುಂಕಗಳನ್ನು ವಿಧಿಸುವ ಮೂಲಕ ಆ ದೇಶವು ಹೊಂದಿರುವ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದು ಆ ದೇಶದ ಕೈ-ತಿರುಚುವ ಕ್ರಮವಾಗುತ್ತದೆ ಮತ್ತು ಅದನ್ನು ಯಾವ ಅಂತಾರಾಷ್ಟ್ರೀಯ ವ್ಯವಸ್ಥೆಯೂ ಅನುಮೋದಿಸುವುದು ಸಾಧ್ಯವಿಲ್ಲ. ಆದರೆ, ಒಬ್ಬ ಮುಕ್ತ ಮತ್ತು ದಯೆ ದಾಕ್ಷಿಣ್ಯವಿಲ್ಲದ ಸಾಮ್ರಾಜ್ಯಶಾಹಿಯಾಗಿ ಟ್ರಂಪ್, ದೇಶ ದೇಶಗಳನ್ನು ಅಂತಹ ಆರ್ಥಿಕ ಬಲಾತ್ಕಾರದ ಕ್ರಮಗಳಿಗೆ ಒಳಪಡಿಸಲು ಹಿಂಜರಿಯರು.

ಉಕ್ರೇನ್ ಯುದ್ಧವನ್ನು ಕೊನೆಗೊಳಿಸುವ ಅವರ ಪ್ರಯತ್ನವು ಅವರ ಈ ಮನವೊಲಿಕೆ ಮತ್ತು ಬಲಾತ್ಕಾರ ವಿಧಾನಗಳಲ್ಲಿ ಮನವೊಲಿಕೆಯ ಭಾಗವಾಗಿದೆ. ಯುಎಸ್ ವಿರುದ್ಧ ಮತ್ತು ಸಾಮಾನ್ಯವಾಗಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ಒಂದು ಪರ್ಯಾಯ ಶಕ್ತಿ ಬಣವಾಗಿ ರೂಪುಗೊಳ್ಳುವುದರ ಬದಲು, ರಷ್ಯಾಕ್ಕೆ ಪ್ರತಿಕೂಲವಲ್ಲದ ಷರತ್ತುಗಳ ಮೇಲೆ ಈ ಯುದ್ಧವನ್ನು ಕೊನೆಗೊಳಿಸುವುದು ರಷ್ಯಾವನ್ನು ಅಂತಹ ಯಾವುದೇ ಪರ್ಯಾಯ ಬಣದಿಂದ ದೂರವಿಡುತ್ತದೆ. ಈ ಮೂಲಕ ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ತಡೆಯಲು ನಡೆಯುತ್ತಿರುವ ಪ್ರಯತ್ನಗಳನ್ನು ದುರ್ಬಲಗೊಳಿಸಲಾಗುವುದು.

ಮಾತುಕತೆಗಳ ಆಧಾರದ ಮೇಲೆ ಉಕ್ರೇನ್ ಯುದ್ಧದ ಯಾವುದೇ ರೀತಿಯ ಅಂತ್ಯವೂ ಸ್ವಾಗತಾರ್ಹವೇ. ಆದರೆ ಈ ಅಂತ್ಯವನ್ನು ಶಾಂತಿಯ ಹಂಬಲದ ಫಲಿತಾಂಶವೆಂದೋ ಅಥವಾ ಯುರೋಪಿನ "ಭದ್ರತಾ ಕಾಳಜಿಗಳನ್ನು" ಬಲಿಕೊಟ್ಟು ಯುಎಸ್ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಕ್ರಮವೆಂದೋ ನೋಡುವುದು ತಪ್ಪಾಗುತ್ತದೆ. ಟ್ರಂಪ್ ಅವರೇನೂ ಶಾಂತಿ ಯಾತ್ರೆ ಕೈಗೊಂಡಿಲ್ಲ. ಅದೇನಾದರೂ ಇದ್ದಿದ್ದರೆ, ಅವರು ಗಾಜಾ ಬಗ್ಗೆ ಯುದ್ಧಕೋರ ಹೇಳಿಕೆಗಳನ್ನು ನೀಡುತ್ತಿರಲಿಲ್ಲ. ಹಾಗೆ ನೋಡಿದರೆ ಬಂಡವಾಳಶಾಹಿಯು ಸ್ವಭಾವತಃ ಶಾಂತಿಗೆ ವಿರುದ್ಧವಾಗಿಯೇ ಇದೆ: ಫ್ರೆಂಚ್ ಸಮಾಜವಾದಿ ಜೀನ್ ಜೌರೆಸ್ ಅವರ ಪ್ರಸಿದ್ಧ ಹೇಳಿಕೆಯಂತೆ, "ಮೋಡಗಳು ಮಳೆಯನ್ನು ಹೊತ್ತೊಯ್ಯುವಂತೆ ಬಂಡವಾಳಶಾಹಿಯು ತನ್ನೊಳಗೆ ಯುದ್ಧವನ್ನು ಹೊತ್ತಿದೆ". ಟ್ರಂಪ್ ಅವರ ಬಯಕೆ ಶಾಂತಿಯಲ್ಲ. ಸಾಮ್ರಾಜ್ಯಶಾಹಿಯ ಪ್ರಾಬಲ್ಯವನ್ನು ಒಂದು ಉತ್ತಮ ನೆಲೆಯಲ್ಲಿ ಇರಿಸುವ ಬಯಕೆಯದು. ಅದೇ ರೀತಿಯಲ್ಲಿ ಯುರೋಪಿಯನ್ ಭದ್ರತೆಯ ಪ್ರಶ್ನೆಯೂ ಸಹ ಜನರನ್ನು ದಾರಿತಪ್ಪಿಸುವ ಒಂದು ಸೂಚನೆಯೇ: ಯುರೋಪಿನ ಭದ್ರತೆಗೆ ರಷ್ಯಾ ಎಂದೂ ಬೆದರಿಕೆ ಹಾಕಲಿಲ್ಲ. ಯುರೋಪನ್ನು ಆಕ್ರಮಿಸಿಕೊಳ್ಳುವ "ರಷ್ಯಾದ ಸಾಮ್ರಾಜ್ಯಶಾಹಿ" ಬೆದರಿಕೆಯ ಎಲ್ಲ ಮಾತುಗಳೂ ನ್ಯಾಟೋದ ವಿಸ್ತರಣಾವಾದವನ್ನು ಸಮರ್ಥಿಸುವ ಒಂದು ನೆಪವಷ್ಟೇ. ಹಾಗಾಗಿ, ಟ್ರಂಪ್ ಅವರ ಶಾಂತಿಪರ ನಡೆಯು ಯುರೋಪಿನ ಭದ್ರತೆಯನ್ನು ದುರ್ಬಲಗೊಳಿಸುವ ಪ್ರಶ್ನೆಯಾಗುವುದಿಲ್ಲ.

ಪರ್ಯಾಯ ಟ್ರಂಪ್ ರಣತಂತ್ರ

ಉಕ್ರೇನ್ ಯದ್ಧದ ವಿಷಯವಾಗಿ ಯುರೋಪಿನ ಆಡಳಿತ ಬಣಗಳೊಂದಿಗೆ ಟ್ರಂಪ್ ಅವರು ಹೊಂದಿರುವ ಭಿನ್ನಾಭಿಪ್ರಾಯವು ಸಾಮ್ರಾಜ್ಯಶಾಹಿಯು ಪ್ರಸ್ತುತದಲ್ಲಿ ಅನುಸರಿಸಬಹುದಾದ ಎರಡು ವಿಭಿನ್ನ ಪರ್ಯಾಯ ರಣತಂತ್ರಗಳ ಕಾರಣದಿಂದಾಗಿ ಉದ್ಭವಿಸುತ್ತದೆ. ಒಂದು, ಮುಂದುವರೆಯಲಾರದ ಸ್ಥಿತಿಗೆ ಬಂದು ತಲುಪಿರುವ ಉಕ್ರೇನ್ ಯುದ್ಧದ ಕಾರಣೀಭೂತ ಬೈಡೆನ್ ಅನುಸರಿಸಿದ ರಷ್ಯಾ ವಿರುದ್ಧದ ಅವರ ಹಳೆಯ ಆಕ್ರಮಣಕಾರಿ ರಣತಂತ್ರ ಮತ್ತು ಇನ್ನೊಂದು, ಈ ಯುದ್ಧವನ್ನು ಕೊನೆಗೊಳಿಸುವ ಮತ್ತು ಆ ಮೂಲಕ ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಪ್ರಾಬಲ್ಯದ ವಿರುದ್ಧ ಸೆಟೆದು ನಿಂತಿರುವ ವಿರೋಧೀ ಬಣದಿಂದ ರಷ್ಯಾವನ್ನು ದೂರವಿಡುವ ಪರ್ಯಾಯ

ಪುಟ 15 ಕ್ಕೆ

ಮಹಿಳೆಯರ ಘನತೆಗೆ ಬಂದೊದಗಿರುವ..... ಪುಟ 8 ರಿಂದ

ಸೋವಿಯತ್ ರಷ್ಯಾದಲ್ಲಿ ಸಮಾಜವಾದಿ ನಾಡು ಉದಯಿಸುವಂತೆ ಮಾಡಿದ ಕಮ್ಯುನಿಸ್ಟ್ ಸಿದ್ಧಾಂತವು ಇದಕ್ಕೆ ಮುಖ್ಯ ಕಾರಣವಾಯಿತು. ಜಗತ್ತಿನ ದುಡಿಯುವ ಜನತೆಯು ಸಂಘಟಿತರಾಗಿ ಹೋರಾಟದಂಗಳಕ್ಕೆ ಜಿಗಿದರು. ತಮ್ಮ ಮೇಲೆ ಹೇರಲ್ಪಟ್ಟ ಸಂಕೋಲೆಗಳನ್ನು ಕಿತ್ತೊಗೆದು ಶ್ರಮಜೀವಿಗಳ ಆಂದೋಲನಗಳು ಪುಟಿದೆದ್ದವು. ಅಂತೆಯೇ ಭಾರತದಲ್ಲಿಯೂ ರೈತ, ಕಾರ್ಮಿಕ ಚಳುವಳಿಗಳು ಭುಗಿಲೆದ್ದವು. ಅಂತೆಯೇ ಮಹಿಳಾ ಸಮುದಾಯವು ಭೂಮಾಲಕ ಬಂಡವಾಳಶಾಹಿ ವ್ಯವಸ್ಥೆಯ ಕಾರಣವಾಗಿ ತಮ್ಮನ್ನು ಗುಲಾಮಗಿರಿ ಸಂಕೋಲೆಯಲ್ಲಿ ಬಂಧಿಸಿಡಲಾಗುತ್ತಿದೆ ಎಂಬುದನ್ನು ಅರಿಯತೊಡಗಿದರು. ಈ ರಾಜಕೀಯ ತಿಳುವಳಿಕೆಯು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚಿಗೆ ಪ್ರಖರತೆಯನ್ನು ಒದಗಿಸಿತು. 1920ಕ್ಕೂ ಮುನ್ನ ಅಧಿಕಾರ ಬದಲಾವಣೆಗಾಗಿ ನಡೆದ ರಾಷ್ಟ್ರವಾದ ಸ್ವಾತಂತ್ರ್ಯ ಚಳುವಳಿಗೂ ಭಿನ್ನವಾಗಿ ನಂತರದಲ್ಲಿ ಸ್ವಾತಂತ್ರ್ಯ ಆಂದೋಲನದ ಸ್ವರೂಪ ಪಡೆಯಿತು. ಅಷ್ಟರಲ್ಲಿ ಈ ಚಿಂತನ ಧಾರೆಗಳು ಬೇರೆ ಬೇರೆ ಭಾಗದಲ್ಲಿ ಹರಿಯುತ್ತಿದ್ದವು. ಆದರೆ ಭೂಮಾಲಕ, ಜಮೀನ್ದಾರಿ, ಪಾಳೆಗಾರಿ ವ್ಯವಸ್ಥೆಯ ಶೋಷಣೆಯನ್ನು ಕಿತ್ತುಹಾಕುವ ಮತ್ತು ಸಮಾನತೆಯ ಸಮಾಜ ಕಟ್ಟುವ ಗುರಿಯೊಂದಿಗೆ ಭುಗಿಲೆದ್ದ ರೈತ, ಕಾರ್ಮಿಕ, ಆದಿವಾಸಿ, ದಮನಿತ ಲೋಕದ ಹೋರಾಟಗಳಲ್ಲಿ ಮಹಿಳಾ ಸಮುದಾಯವು ಸಮರಧೀರತೆಯಿಂದ ತೊಡಗಿತು. ಪುನ್ನಪ್ರ ವಯಲಾರ್ ಹೋರಾಟ, ತೇಭಾಗ ಹೋರಾಟ, ತೆಲಂಗಾಣಾ ಸಶಸ್ತ್ರ ಹೋರಾಟ, ನೀಲಿ ಹೋರಾಟ, ಆದಿವಾಸಿಗರ ವಾರಲಿ ಹೋರಾಟ ಮುಂತಾದ ಹೋರಾಟಗಳು ಸ್ವಾತಂತ್ರ್ಯ ಚಳುವಳಿಯನ್ನು ಜನಬಲದೊಂದಿಗೆ ನಿಜವಾದ ಸ್ವಾತಂತ್ರ್ಯದ ಗುರಿಯತ್ತ ಜನಚಳುವಳಿಯನ್ನು ಮುನ್ನಡೆಸಿತು. ಇದರಲ್ಲಿ ಭಾಗವಹಿಸಿದ ಮಹಿಳೆಯರ ದೊಡ್ಡ ದಂಡೇ ಇದೆ. ಸೂರ್ಯವತಿ, ಮಲ್ಲು ಸ್ವರಾಜ್ಯಂ, ಕನಕ, ಗೋದಾವರಿ ಪರುಳೇಕರ, ಮೋಟೂರು ಉದಯಂ, ಅಹಲ್ಯಾ ರಂಗಣೇಕರ, ವಿಮಲ, ಕಮಲ ಮುಂತಾದ ಹೆಸರುಗಳನ್ನು ಗಮನಿಸಬಹುದು. ಆದರೆ ಲಕ್ಷಗಟ್ಟಲೆ ಮಹಿಳೆಯರು ಸ್ತ್ರೀ ಸಮಾನತೆ–ಸ್ವಾತಂತ್ರ್ಯ ಪಡೆದುಕೊಳ್ಳಲು, ಶೋಷಣೆಗೈಯುತ್ತಿರುವ ಪಾಳೇಗಾರಿ ಬಂಡವಾಳ ಶಾಹಿ ಪ್ರಭುತ್ವವನ್ನು ಕಿತ್ತೊಗೆಯುವ ರಾಜಕೀಯ ಪ್ರಜ್ಞೆಯೊಂದಿಗೆ ಮುನ್ನುಗ್ಗಿದರು. ಇದು ಮಹಿಳಾ ಚಳುವಳಿಗೆ ದಾರಿ ತೆರೆಯಿತು.

ಅಲ್ಲಿವರೆಗೆ ದೇಶದಲ್ಲಿ ಮನುವಾದದ ವಿರುದ್ಧ, ಜಮೀನ್ದಾರಿ ಪದ್ಧತಿಯ ವಿರುದ್ಧ ಅನೇಕ ಸುಧಾರಣವಾದಿ ಚಟುವಟಿಕೆಗಳು, ಹೋರಾಟಗಳು ನಡೆದಿದ್ದವು. 6ನೇ ಶತಮಾನ ಬುದ್ಧ ಮತ್ತು ಮಹಾವೀರರು, 12ನೇ ಶತಮಾನದ ಬಸವಣ್ಣ ಮತ್ತು ಶರಣರು ಅಸಮಾನತೆಯ ಕೇಂದ್ರವಾಗಿರುವ ಬ್ರಾಹ್ಮಣ್ಯವಾದದ ವಿರುದ್ಧ ವ್ಯವಸ್ಥಿತಿ ಸಂಘಟನಾತ್ಮಕ ತಾತ್ವಿಕ ಹೋರಾಟಗಳನ್ನು ನಡೆಸಿರುವರು. ಸಾವಿತ್ರಿಬಾಯಿ ಫುಲೆ ದಂಪತಿಗಳು, ನಂತರದಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ ಈ ಚಳುವಳಿಯನ್ನು ಮುನ್ನಡೆಸಿದರು. ಮಹಿಳೆಯರಿಗೆ ಆಸ್ತಿ ಹಕ್ಕು, ಬಾಳಸಂಗಾತಿಯ ಆಯ್ಕೆಯ ಹಕ್ಕು ಮುಂತಾದ ಮಹಿಳಾ ಹಕ್ಕುಗಳಿಗಾಗಿ ಡಾ.ಬಾಬಾಸಾಹೇಬ ಅಂಬೇಡ್ಕರ ಅವರು ಹಿಂದೂ ಕೋಡ್ ಬಿಲ್ ಮಂಡಿಸಿದ್ದು ಇತಿಹಾಸ. ಸಂಸತ್ತಿನಲ್ಲಿ ಬಿಲ್ ಪಾಸಾಗದೇ ಇದ್ದಾಗ ಡಾ.ಬಾಬಾಸಾಹೇಬರು ರಾಜಿನಾಮೆ ಕೊಡುವ ಮೂಲಕ ಭಾರತೀಯ ಪಾಳೇಗಾರಿ ವ್ಯವಸ್ಥೆಯನ್ನು ಧಿಕ್ಕರಿಸುತ್ತಾರೆ.

ಈಗ ಹೇಗಿದೆ ಮಹಿಳೆಯರ ಪರಿಸ್ಥಿತಿ?

ಈಗಲೂ ಬಹುದೊಡ್ಡ ಸಂಖ್ಯೆಯ ಮಹಿಳೆಯರಿಗೆ ಭೂಮಿ ಇಲ್ಲ. ಉಳ್ಳವರಿಗೆ ಭೂಮಿ ಎಂಬ ಅರ್ಥದಲ್ಲಿಯೇ ಸ್ಪಷ್ಟವಾಗಿ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ದಲಿತ, ದಮನಿತ, ಒಂಟಿ ಮಹಿಳೆಯರು ಗೇಣು ಹೊಟ್ಟೆ ತುಂಬಿಕೊಳ್ಳಲು ಊರೂರು ತಿರುಗಬೇಕಿದೆ. ಮುಂದುವರೆದು ಕೃಷಿಯ ಕಾರ್ಪೋರೇಟಿಕರಣ ವಾಗುತ್ತಿರುವುದರಿಂದ ಕೃಷಿಯನ್ನೇ ಕಂಡುಹಿಡಿದ ಮಹಿಳೆಯರು ಈಗ ಅಸಂಘಟಿತ ಕಾರ್ಮಿಕರಾಗುತ್ತಿದ್ದಾರೆ.

ಕೋವಿಡ್ ಸಂದರ್ಭದಿಂದ ಮಹಿಳೆಯರು ಮತ್ತು ಬಾಲಕಿಯರ ದುಡಿಮೆಯಲ್ಲಿ ಹೆಚ್ಚಳವಾಗಿದೆ. ಹಾಗೆಯೇ ಲೈಂಗಿಕ ದೌರ್ಜನ್ಯ ಕಿರುಕುಳ ಉಲ್ಬಣಗೊಂಡಿದೆ. ಕೌಟುಂಬಿಕ ಹಿಂಸೆಯು ಸಾಮಾನ್ಯ ಎನ್ನುವಂತಾಗಿದೆ. ಹೆಣ್ಣು ಮಗು ಸಹಿತ ಮಹಿಳಾ ಲೋಕವು ಅಪಾಯಕ್ಕೊಳಗಾಗುತ್ತಿದೆ. ನಾಲ್ಕು ಅತ್ಯಾಚಾರಗಳು ನಡೆದರೆ ಅದರಲ್ಲಿ (ಎನ್‌ಸಿಆರ್‌ಬಿ 2018ರ ಪ್ರಕಾರ) ಒಂದು ಪ್ರಕರಣವು ಅಪ್ರಾಪ್ತೆಯದ್ದಾಗಿರುತ್ತದೆ. ಅಪ್ರಾಪ್ತ ಮಗುವಿನ ಮೇಲೆ ದೌರ್ಜನ್ಯ, ಅತ್ಯಾಚಾರದ ಪ್ರಕರಣಗಳು ಶೇ.94ರಷ್ಟು ಕುಟುಂಬದ ವ್ಯಾಪ್ತಿಯಲ್ಲಿ, ಪರಿಚಿತರಿಂದ ನಡೆಯುವುದು ಅಪಾಯದ ಗ್ರ್ಯಾವಿಟಿ ಗ್ರಹಿಸಬಹುದು. 2020ರ ನಂತರದಲ್ಲಿ ದೌರ್ಜನ್ಯದಲ್ಲಿ ಶೇ. 50ರಷ್ಟು ಹೆಚ್ಚಳವಾಗಿದೆ ಎನ್ ಸಿ ಆರ್ ಬಿ ವರದಿ ಹೇಳುತ್ತದೆ. ಕರ್ನಾಟಕದಲ್ಲಿ ಬಾಲ್ಯ ವಿವಾಹಗಳು ಶೇ. 20ಕ್ಕೂ ಹೆಚ್ಚು ಇರುವ ಜಿಲ್ಲೆಗಳು ವಿಜಯಪುರ(9.2%), ಬಾಗಲಕೋಟ (8.7%), ಯಾದಗಿರಿ (3.2%), ಬೆಳಗಾವಿ (32.8%), ಕಲಬುರಗಿ (29.8%).

ಲಿಂಗಾನುಪಾತದಲ್ಲಿ ಕುಸಿತ ಮುಂದುವರೆದಿದೆ. ಗಾಬರಿಗೊಳಿಸುವ ಲಿಂಗಾನುಪಾತದ ಜಿಲ್ಲೆಗಳು ಉತ್ತರ ಕನ್ನಡ (1000 ಪುರುಷರಿಗೆ 724 ಮಹಿಳೆಯರು), ರಾಮನಗರ (1000ಕ್ಕೆ 781), ದಾವಣಗೆರೆ (1000ಕ್ಕೆ 797). ಹೆಣ್ಣುಮಗು ಬೇಡ ಎಂಬ ಮನುವಾದಿ ಧೋರಣೆಯು ಗ್ರಾಮೀಣ ಪ್ರದೇಶಕ್ಕೂ ಹಬ್ಬಿದೆ. ಗ್ರಾಮೀಣದ 1000 ಗಂಡಸರಿಗೆ 958 ಮಹಿಳೆಯರು ಇರುವರು.

ಮಹಿಳೆಗೆ ಇನ್ನೊಂದು ಹೆಸರು ದುಡಿಮೆ. ಅವಳು ದುಡಿಯದೆ ಇರಲು ಸಾಧ್ಯವೇ ಇಲ್ಲ. ಆದರೆ ರಾಷ್ಟ್ರೀಯ ಆರ್ಥಿಕ ಮುಖಬೆಲೆಯ ದುಡಿಮೆಯ ಪಟ್ಟಿಯಲ್ಲಿ ಮಹಿಳಾ ಶ್ರಮ ಶಕ್ತಿಯ ಪ್ರಮಾಣ ಕುಸಿತ ಕಂಡಿದೆ. ಶೇ. 26ರಿಂದ ಶೇ.19. ಆದರೆ 2021ರ ಜನವರಿಯಿಂದ ಮಾರ್ಚ್‌ವರೆಗೆ ಇನ್ನೂ ಕುಸಿತ ಕಂಡಿದೆ ಶೇ.16.9!! (ಪಿರಿಯೋಡಿಕ್ ಲೇಬರ್ ಫೋರ್ಸ್ ಸರ್ವೆ). ಯುವಜನತೆಯ ನಿರುದ್ಯೋಗವು ಶೇ. 24ರಷ್ಟು ಇದ್ದು ತಲ್ಲಣಗೊಳಿಸುವ ಸಂಗತಿಯಾಗಿದೆ. ನಗರ ಪ್ರದೇಶದಲ್ಲಿ ಶೇ. 27.2 ಇದ್ದು ಗ್ರಾಮೀಣದಲ್ಲಿ ಯುವ ನಿರುದ್ಯೋಗಿಗಳು ಶೇ. 13.6.

ಮಹಿಳೆಯರು ಖಾತ್ರಿಯಾಗಿ ಕೆಲಸ ಪಡೆಯುವ ಕ್ಷೇತ್ರವು ಉದ್ಯೋಗ ಖಾತ್ರಿಯಾಗಿದೆ. ಆದರೆ ಕೇಂದ್ರ ಸರಕಾರವು ಉದ್ಯೋಗ ಖಾತ್ರಿ ಕಾಯ್ದೆ ಜಾರಿಗಾಗಿ ಬಜೆಟ್ಟಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಹಣ ಕೊಟ್ಟಿದೆ. ಕೆಲಸಕ್ಕಾಗಿ ಸಲ್ಲಿಸಲ್ಪಟ್ಟ ಅರ್ಜಿಗಳಲ್ಲಿ ಹೆಚ್ಚಿನ ಪ್ರಮಾಣ ತಿರಸ್ಕರಿಸಲಾಗುತ್ತಿದೆ. ಇಲ್ಲವೆ ಕುಂಟು ನೆಪವೊಡ್ಡಿ ಕೆಲಸ ದೊರೆಯದಂತೆ ಮಾಡಲಾಗುತ್ತಿದೆ. ಮತ್ತು ದೊಡ್ಡ ಪ್ರಮಾಣದಲ್ಲಿ ಪಾವತಿಸಬೇಕಾದ ಬಾಕಿ ಉಳಿಸಿಕೊಂಡಿದೆ. ರೂ. 1498 ಕೋಟಿ ಬಾಕಿ ಹಣ ಉಳಿಸಿಕೊಳ್ಳಲಾಗಿದೆ. ಇದರಲ್ಲಿ 2021–22ರದ್ದೇ ರೂ. 862.57ರಷ್ಟು ಬಾಕಿ ಇದೆ. ಕೇಂದ್ರ ಸರಕಾರಕ್ಕೆ ಉದ್ಯೋಗ ಖಾತ್ರಿ ಕಾಯ್ದೆಯನ್ನು ನಿಷ್ಕ್ರಿಯಗೊಳಿಸುವ ಉದ್ದೇಶ ಇದೆ. ಮನರೇಗಾದಲ್ಲಿ ಕೆಲಸದ ಸ್ಥಳದಲ್ಲಿ ದೊರೆಯಬೇಕಾದ ಎಲ್ಲಾ ರೀತಿಯ ಸೌಲಭ್ಯಗಳಿಂದ ವಂಚಿಸಲಾಗುತ್ತಿದೆ. ಇದೇ ಉಳಿಕೆ ಮೊತ್ತವನ್ನು ನುಂಗಿ ಹಾಕುವ ತಂಡ ಇರುವುದು. ಕರ್ನಾಟಕದಲ್ಲಿ ಕೂಸಿನ ಮನೆ ಮಾಡುವ ಮೂಲಕ ತಾಯಿ ಮಗುವನ್ನು ಅವಾಸ್ತವಿಕ ನೆಲೆಯಲ್ಲಿ ಬೇರ್ಪಡಿಸಿ ಇನ್ನೂ ಹೈರಾಣು ಮಾಡಲಾಗುತ್ತಿದೆ. ವೃದ್ಧರು, ಅಂಗವಿಕಲರಿಗೆ ಕೆಲಸವು ನಿರಾಕರಿಸಲಾಗುತ್ತಿದೆ.

ನಿರುದ್ಯೋಗವು ವಲಸೆಯನ್ನು ಹೆಚ್ಚಿಸುತ್ತಿದೆ. ಸಾಲದ ಕೂಪಕ್ಕೆ ತಳ್ಳುತ್ತಿದೆ. ಕೃಷಿ ಬಿಕ್ಕಟ್ಟು, ಬೆಂಬಲ ಬೆಲೆ ಇಲ್ಲದ್ದು ಇತ್ಯಾದಿ ಎಲ್ಲವೂ ಒಂಟಿ ಕೃಷಿಕ ಮಹಿಳೆಯರನ್ನು ಕಾರ್ಮಿಕರನ್ನಾಗಿಸಿದೆ. ವಲಸಿಗರನ್ನಾಗಿಸಿದೆ. ಸಾಲಗಾರರನ್ನಾಗಿಸಿದೆ. ಶಿಕ್ಷಣ, ಆರೋಗ್ಯ ಎಲ್ಲವೂ ಖಾಸಗೀಕರಣಗೊಂಡ ಕಾರಣಕ್ಕೆ ಈ ಸಂಕಟದ ಪ್ರಮಾಣದಲ್ಲಿ ಇನ್ನೂ ಏರಿಕೆ ಇದೆ. ವಲಸೆಯಲ್ಲಿ ಮಕ್ಕಳು ಶಾಲೆ ಬಿಡುವ ಪ್ರಮಾಣ ಹೆಚ್ಚಿದೆ. ಅದರಲ್ಲಿ ಹುಡುಗಿಯರ ಪ್ರಮಾಣವೇ ಹೆಚ್ಚು. ಲೈಂಗಿಕ ಧಾಳಿ, ಕುಟುಂಬ ವಿಘಟನೆ ಸರ್ವೆ ಸಾಮಾನ್ಯವಾಗಿದೆ. ಇಟ್ಟಂಗಿ ಭಟ್ಟಿ, ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುವಾಗ ದೈಹಿಕ ಧಾಳಿಗಳಾಗಿದ್ದು, ಮಹಿಳೆಯರ ಮೇಲೆ ಲೈಂಗಿಕ ಧಾಳಿಗಳಾಗಿದ್ದು ಪ್ರಕರಣಗಳು ಬೇಕಾದಷ್ಟಿವೆ. ಕೆಲಸ ಬಯಸಿ ಕಲಬುರಗಿ ನಗರಕ್ಕೆ ಬಂದ ಇಬ್ಬರು ಮಧ್ಯ ವಯಸ್ಕ ಮಹಿಳೆಯರಿಗೆ ಕೆಲಸ ಕೊಡುವುದಾಗಿ ಕರೆದೊಯ್ದು ಕೊಂದು ಹಾಕಿದರು. ಚಿಂದಿ ಆಯಲು ಹೋದ ಇಬ್ಬರು ಯುವತಿಯರು ಕೆರೆಯಲ್ಲಿ ಹೆಣವಾಗಿ ತೇಲಿದರು. ಶಾಲೆಯಿಂದ ಮನೆಗೆ ತೆರಳುತ್ತಿದ್ದ ಬಾಲಕಿಯರು ಅತ್ಯಾಚಾರಕ್ಕೊಳಗಾಗಿ ಬಾವಿಯಲ್ಲಿ ಹೆಣವಾದರು. ವಲಸೆಯು ನಿರುದ್ಯೋಗದ ಒಡಲಲ್ಲಿ ಹುಟ್ಟಿಕೊಳ್ಳುತ್ತದೆ. ಮತ್ತು ಉಳಿದೆಲ್ಲ ಸಂಕಟಗಳು ತಂತಾನೇ ಬೆಳೆದು ಇಡೀ ಕುಟುಂಬವನ್ನೇ ಭೂಮಿಯಿಂದ ಹೊಸಕಿ ಹಾಕಲ್ಪಡುತ್ತದೆ.

ದೊರೆಯಬೇಕಾದ ಉದ್ಯೋಗದ ನಿರಾಕರಣೆ ಒಂದೆಡೆಯಾದರೆ ಇನ್ನೊಂದೆಡೆ ವೇತನರಹಿತ ಬಿಟ್ಟಿ ಚಾಕರಿ ಮಾಡಿಸಿಕೊಳ್ಳುವ ಪ್ರವೃತ್ತಿಯು ದೇಶದಾದ್ಯಂತ ಇದೆ. ಬಹುದೊಡ್ಡ ಸಂಖ್ಯೆಯ ಮಹಿಳೆ ಮತ್ತು ಮಕ್ಕಳು ವೇತನವಿಲ್ಲದ ದುಡಿಮೆಯಲ್ಲಿ ನಲುಗುತ್ತಿದ್ದಾರೆ.

ಏನಿದು ವೇತನರಹಿತ ದುಡಿಮೆ? ರಜೆಯಿಲ್ಲದೆ, ಸಂಬಳವಿಲ್ಲದೆ ದುಡಿಯುವ ಕ್ರಮವೇ ವೇತನ ರಹಿತ ದುಡಿಮೆ. ಇದರ ಮೂಲ ಕೇಂದ್ರವು ಕುಟುಂಬವಾಗಿದೆ. ವೇತನ ರಹಿತ ದುಡಿಮೆಯ ಮೊದಲ ಬಲಿ ಮಹಿಳೆಯೇ ಆಗಿದ್ದಾಳೆ. ಬಹುತೇಕ ಎಲ್ಲ ಕುಟುಂಬಗಳಲ್ಲಿ ಮಹಿಳೆಯರ ಶ್ರಮವು ಬಿಟ್ಟಿಯಾಗಿಯೇ ಪಡೆಯಲಾಗುತ್ತಿದೆ. ಆರ್ಥಿಕ ಆದಾಯಕ್ಕಾಗಿ ಅವಳು ಮನೆಯ ಕೃತ್ಯಗಳನ್ನು ಪೂರೈಸಿ ಮಕ್ಕಳ ಪಾಲನೆ ಪೋಷಣೆಯನ್ನು ನೋಡಿಕೊಂಡು ಹೊರಗೆ ಬಂದು ದುಡಿಯಬೇಕಾಗುತ್ತದೆ. ಹಾಗೆ ದುಡಿಯುವಾಗ ಅಸಂಘಟಿತ ಕಾರ್ಮಿಕರಾಗಿದ್ದಲ್ಲಿ ಅತ್ಯಂತ ಕಡಿಮೆ ಕೂಲಿಗೆ ದುಡಿಯಬೇಕು. ಗುತ್ತಿಗೆ ಪದ್ಧತಿಯಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಿ, ವೇತನ ಕಡಿತಕ್ಕೂ ಒಳಗಾಗಬೇಕು. ತನ್ನದೇ ಮನೆಯಲ್ಲಿ ಮಾಡುವ ಗೃಹ ಕೃತ್ಯವು ಯಾವ ಪರಿಗಣನೆಗೆ ಇಲ್ಲವಾಗಿದೆ. ಬದಲಿಗೆ ಅದು ಅವಳದ್ದೇ ಹೊಣೆಗಾರಿಕೆ ಎಂಬುದು ಅಲಿಖಿತ ನಿಯಮವಾಗಿದೆ. ಅವಳು ಅನಾರೋಗ್ಯದಲ್ಲಿದ್ದಾಗಲೂ, ತಿಂಗಳ ರಕ್ತಸ್ರಾವವಿದ್ದಾಗಲೂ, ಬಸುರಿ–ಬಾಣಂತಿ ಇದ್ದಾಗಲೂ, ಅಂಗವಿಕಲ ಮತ್ತು ವೃದ್ಧ್ಯಾಪದಲ್ಲಿ ಇದ್ದಾಗಲೂ ಅವಳು ದುಡಿಯಲೇಬೇಕು. ಮನೆಗೆಲಸದಲ್ಲಿ ಏನೆಲ್ಲ ಇರುವುದು? ಪಟ್ಟಿ ಬಹಳ ದೊಡ್ಡದಾಗುವುದು (ಓದುಗರೇ ಪಟ್ಟಿ ತಯಾರಿಸಬಹುದು). ಮಹಿಳೆಯು ಮೂರು ಪಟ್ಟು ದುಡಿಮೆಯಲ್ಲಿ ಮನೆಗೆಲಸ ಮತ್ತು ಮಕ್ಕಳ ಪೋಷಣೆಯು ಸಂಪೂರ್ಣ ವೇತನರಹಿತವೇ. ಬಿಟ್ಟಿ ಚಾಕರಿಯೇ. ಹೊರಗಿನ ದುಡಿಮೆಯು ಸರಕಾರಿ ಉದ್ಯೋಗವಾಗಿದ್ದರೆ ಸಮಾನ ವೇತನ. ಖಾಸಗಿ, ಅರೆ ಸರಕಾರಿ, ಗುತ್ತಿಗೆ, ಔಟ್ ಸೋರ್ಸ ಇದ್ದಲ್ಲಿ ಅನಿಶ್ಚಿತ, ತಾರತಮ್ಯದ ವೇತನ/ಕೂಲಿ. ಗ್ರಾಮೀಣ ಪ್ರದೇಶದಲ್ಲಿಯೂ ನಗರದಲ್ಲಿಯೂ ಅತ್ಯಂತ ಕಡಿಮೆ ಖಾಯಂ ಉದ್ಯೋಗಿಗಳು. ಉಳಿದ ಎಲ್ಲ ಕೆಲಸಗಳನ್ನು ಸ್ಕೀಂ ವರ್ಕರ್(ಯೋಜನಾ ಕೆಲಸಗಾರರು) ಮೂಲಕ ಅತ್ಯಂತ ಕಡಿಮೆ ಹಣದಲ್ಲಿ (ಅದಕ್ಕೆ ಗೌರವ ಧನ ಎಂದು ಹೆಸರು) ಮಾಡಿಸಲಾಗುತ್ತಿದೆ. ಅಂಗನವಾಡಿ, ಆಶಾ, ಬಿಸಿಯೂಟ, ಸಂಜೀವಿನಿ ನೌಕರರು, ಕಾಯಕ ಮಿತ್ರ, ನಗರಪಾಲಿಕೆ ನೌಕರರು, ಮುನ್ಸಿಪಲ್ ಕಾರ್ಮಿಕರು ಇತ್ಯಾದಿ ಇವರೆಲ್ಲರೂ ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಯುವರು. ಇವರೆಲ್ಲರೂ (ಮುನ್ಸಿಪಲ್ ನೌಕರರನ್ನು ಹೊರತುಪಡಿಸಿ) ಮಹಿಳೆಯರೇ ಆಗಿರುವರು. ಅವರ ಕೆಲಸಗಳು, ಎದುರಿಸುವ ಸಮಸ್ಯೆಗಳು ಬರೆಯಲು ಹೊರಟರೆ ದೊಡ್ಡ ಪಟ್ಟಿಯೇ ಇರುವುದು. ಇವರನ್ನು ಸರಕಾರವು ಖಾಯಂಗೊಳಿಸಲು ಯಾವ ಕಾರಣಕ್ಕೂ ಮನಸು ಮಾಡುವುದಿಲ್ಲ. ಉಚಿತದ ಹೆಸರಿನ ಕೆಲವು ಸೌಲಭ್ಯಗಳನ್ನು ಕೊಟ್ಟಿದೆ. ಉಚಿತವೆಂಬುದು ಸರಕಾರದ ಉಪಕಾರ ಅಥವ ಭಿಕ್ಷೆಯಲ್ಲ. ಅದು ದುಡಿಮೆಗಾರರ ಹಕ್ಕಾಗಿದೆ. ಗಮನಿಸಬೇಕಾದ ಗಂಭೀರ ಸಂಗತಿ ಏನೆಂದರೆ ಉಚಿತದ ಹಣವನ್ನು ಎಲ್ಲಿಂದ ಭರಿಸುವರು ಎಂದರೆ ಇದೇ ಸಾಮಾನ್ಯ ಜನರಿಂದ ವಸೂಲಿ ಮಾಡುವ ಮಾರ್ಗವೇ ನವ ಉದಾರವಾದಿ ಆರ್ಥಿಕ ನೀತಿಯಾಗಿದೆ. ನಮ್ಮಿಂದಲೇ ಕಿತ್ತುಕೊಂಡು ಅದರಲ್ಲಿ ಚೂರು ನಮಗೆ ಉಚಿತದ ಹೆಸರಿನಲ್ಲಿ ಕೊಟ್ಟು ಭೂಲ್ ಭುಲಯ್ಯ ಮಾಡುವ ಮೋಸದಾಟ ಕಣ್ಣಿಗೆ ಕಾಣುವುದಿಲ್ಲ.

ಕಟ್ಟಡ ಕಾರ್ಮಿಕರಾಗಿ, ಮನೆಗೆಲಸಗಾರರಾಗಿ, ಮಾಲ್ ಮತ್ತಿತರ ವ್ಯಾಪಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರು 10 ರಿಂದ 12 ತಾಸು ದುಡಿದರೂ ಕೊಡುವ ಕೂಲಿ ಸಾಕಾಗುವುದಿಲ್ಲ. ಲೈಂಗಿಕ ದೌರ್ಜನ್ಯಗಳು ಸುದ್ದಿಯೇ ಆಗುವುದಿಲ್ಲ. ಇವರೆಲ್ಲ ಮಧ್ಯ ವಯಸ್ಸು ಬರುವುದರೊಳಗಾಗಿ ಮುಪ್ಪಿನಂತಹ ದೇಹ ಸ್ಥಿತಿ ಹೊಂದಿರುತ್ತಾರೆ. ಅಪೌಷ್ಠಿಕತೆ ಇಲ್ಲಿ ಸರ್ವೆ ಸಾಮಾನ್ಯವಾಗಿದೆ.

ಈಚೆಗೆ ಇನ್ನೊಂದು ಪ್ರಮುಖ ಜಾಲಕ್ಕೆ ಮಹಿಳಾ ಲೋಕವು ಇನ್ನಿಲ್ಲದಂತೆ ಬಲಿಯಾಗಿ ತಲ್ಲಣಿಸುತ್ತಿದೆ.ಅದುವೇ ಮೈಕ್ರೋ ಫೈನಾನ್ಸ್ ಸಾಲ. ಬಡ, ಮಧ್ಯಮ ವರ್ಗ ಮತ್ತು ಮೇಲ್ ಮಧ್ಯಮ ವರ್ಗದ ಕುಟುಂಬಗಳಲ್ಲಿನ ಮಹಿಳೆಯರು ಸಾಲ ಪಡೆಯುವ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಮನೆಯ ಗಂಡಸರ ದುಡಿಮೆಯು ಅನಿಶ್ಚಿತ. ಅನಿಯಮಿತ. ಹೀಗಾಗಿ ಮನೆವಾರ್ತೆ ನಡೆಸಲು ಮುಗಿಲ ಮುಟ್ಟಿದ ಬೆಲೆಯೇರಿಕೆಯಿಂದಾಗಿ, ಮಕ್ಕಳ ಶಿಕ್ಷಣಕ್ಕಾಗಿ ಖರ್ಚುಮಾಡಲು ಅವರಲ್ಲಿ ಆದಾಯವೇ ಇರುವುದಿಲ್ಲ. ಅತ್ಯಂತ ಕಡಿಮೆ ಆದಾಯ. ಹೀಗಾಗಿ ನೋಂದಿತ ಅಥವ ನೋಂದಿತವಲ್ಲದ ಮತ್ತು ಕೋಮು ಅಜೆಂಡಾ ಹೊಂದಿದ ಮತ್ತು ಕಪ್ಪು ಹಣ ಬಿಳಿಯಾಗಿಸಿಕೊಳ್ಳುವ ಬಹಳಷ್ಟು ವ್ಯಕ್ತಿ (ಶಾಸಕರು, ಸಂಸದರು, ವ್ಯಾಪಾರಿಗಳು ಎಲ್ ಅಂಡ್ ಟಿ,)ಗಳು, ಸಂಘಗಳು, ಮೈಕ್ರೋ ಫೈನಾನ್ಸ್ ಮೂಲಕ ಮನೆ ಮನೆಗೆ ತೆರಳಿ ಸಾಲ ಕೊಡುತ್ತಿದ್ದಾರೆ. ಸರಕಾರಿ ವ್ಯವಸ್ಥೆಯಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಸಾಲ ಕೊಡಲು ನೂರು ಷರತ್ತುಗಳು. ಈ ಖಾಸಗಿ ಮೈಕ್ರೋ ಫೈನಾನ್ಸ್ ಗಳಿಗೆ ಬಹಳ ಷರತ್ತುಗಳೇನಿಲ್ಲ. ಮತ್ತು ಕೇಳಿದಷ್ಟು ಸಾಲ ಕೊಡುವರು. ಹೀಗಾಗಿ ಕುಟುಂಬದ ಗಂಡಸರು ತಮ್ಮ ಮನೆಯ ಹೆಣ್ಣುಮಕ್ಕಳ ಮೇಲೆ ಒತ್ತಡ ಹಾಕಿ ಅವರ ಸಂಘದಲ್ಲಿ ಸಾಲ ತೆಗೆದುಕೊಳ್ಳುವರು. ➚

ಸಾಮ್ರಾಜ್ಯಶಾಹಿಯ ಮರು ಪ್ರಾಬಲ್ಯಕ್ಕೆ 'ಆಮಿಷ-ದಂಡಪ್ರಯೋಗ'ದ ಟ್ರಂಪ್ ರಣತಂತ್ರ....

ಪುಟ 13 ರಿಂದ

ರಣತಂತ್ರ. ಯುರೋಪಿನ ಆಡಳಿತಗಾರರು ಮೊದಲನೆಯದಕ್ಕೆ ಕಟ್ಟುಬಿದ್ದಿದ್ದಾರೆ ಮತ್ತು ಟ್ರಂಪ್ ಎರಡನೆಯದನ್ನು ಅನುಸರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಜರ್ಮನಿಯ ನವ-ನಾಜಿ ಎಎಫ್‌ಡಿ ಪಕ್ಷವು ತಳೆದ ನಿಲುವು ಟ್ರಂಪ್ ಅವರ ನಿಲುವಿನೊಂದಿಗೆ ಸಾಮ್ಯತೆ ಹೊಂದಿರುವುದು ಗಮನಾರ್ಹವಾಗಿದೆ: ಉಕ್ರೇನ್ ಯುದ್ಧವು ಕೊನೆಗೊಳ್ಳುವುದನ್ನು ಎಎಫ್‌ಡಿ ಬಯಸುತ್ತದೆ ಮತ್ತು ಈ ನಿಲುವಿಗೆ ವ್ಯತಿರಿಕ್ತವಾಗಿ ಪ್ಯಾಲೆಸ್ಟೈನ್ ವಿಷಯದಲ್ಲಿ ಆಕ್ರಮಣಕೋರತೆಯನ್ನು ಬಯಸುತ್ತದೆ. ಹಾಗಾಗಿ, ಇದು ಶಾಂತಿಯ ಬಯಕೆಯೂ ಅಲ್ಲ ಅಥವಾ "ಯುರೋಪಿಯನ್ ಭದ್ರತೆ" ಬಗ್ಗೆ ಕಾಳಜಿ ಹೊಂದಿಲ್ಲದಿರುವುದರ ಲಕ್ಷಣವೂ ಅಲ್ಲ. ಇದು, ಒಂದು ನಿರ್ದಿಷ್ಟ ಕಾರ್ಯತಂತ್ರದ ನಿಲುವಿನ ಒಂದು ಲಕ್ಷಣವೇ ಸರಿ.

ಸಾಮ್ರಾಜ್ಯಶಾಹಿ ತನಗೆ ತಾನೇ ತಂದುಕೊಂಡಿರುವ ಕಠಿಣ ಪರಿಸ್ಥಿತಿಯಿಂದ ಅದನ್ನು ಹೊರತರುವ ಟ್ರಂಪ್ ಯೋಜನೆಯು ಅದೇ ಸಮಯದಲ್ಲಿ ಇಡೀ ಸಾಮ್ರಾಜ್ಯಶಾಹಿ ಬಣದ ಮೇಲೆ ಯುಎಸ್ ಪ್ರಾಬಲ್ಯವನ್ನು ಪ್ರತಿಪಾದಿಸುವ ಯೋಜನೆಯಾಗಿದೆ. ಅವರ "ಅಮೆರಿಕವನ್ನು ಮತ್ತೊಮ್ಮೆ ಮಹಾನ್ ಆಗಿಸಿ" ಎಂಬ ಘೋಷಣೆಯು ಅಮೆರಿಕದ ಪ್ರಶ್ನಾತೀತ ನಾಯಕತ್ವದಡಿಯಲ್ಲಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ಪ್ರಶ್ನಾತೀತ ಪ್ರಾಬಲ್ಯ ಹೊಂದಿರುವ ಜಗತ್ತನ್ನು ಪುನರ್ ನಿರ್ಮಿಸುವ ಯೋಜನೆಯಾಗಿದೆ. ಯುರೋಪನ್ನು ಅಮೆರಿಕದ ಇಂಧನದ ಮೇಲೆ ಅವಲಂಬಿಸುವಂತೆ ಮಾಡುವ ಅರ್ಥದಲ್ಲಿ, ಅನಿಲವನ್ನು ರಷ್ಯಾದಿಂದ ಯುರೋಪಿಗೆ ಸಾಗಿಸುವ ನಾರ್ಡ್ ಸ್ಟ್ರೀಮ್-2 ಅನಿಲ ಕೊಳವೆ ಮಾರ್ಗದ ಸ್ಫೋಟವು ಈ ಕಾರ್ಯತಂತ್ರದ ಮುಂದುವರಿಕೆಯಾಗಿದೆ ಮತ್ತು ಈ ಕೃತ್ಯದ ಹಿಂದೆ ಅಮೆರಿಕದ 'ಗುಪ್ತ ಪ್ರಭುತ್ವ'ದ(ಡೀಪ್ ಸ್ಟೇಟ್‌ನ) ಕೈವಾಡವಿದೆ ಎಂಬ ಆರೋಪವಿದೆ.

ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ

ಅದೇನೇ ಇರಲಿ, ಟ್ರಂಪ್ ಅವರ ರಣತಂತ್ರದಲ್ಲಿ ಒಂದು ಪ್ರಧಾನ ವೈರುಧ್ಯವಿದೆ. ಬಂಡವಾಳಶಾಹಿ ಜಗತ್ತಿನ "ನಾಯಕತ್ವ" ವಹಿಸಲು ಒಂದು ರೀತಿಯ ಬೆಲೆ ತೆರಬೇಕಾಗುತ್ತದೆ. ಈ ಬೆಲೆಯನ್ನು ತೆರದೇ ಅಮೆರಿಕವೇ "ನಾಯಕತ್ವ" ವಹಿಸುವ ಪಾತ್ರವನ್ನು ಟ್ರಂಪ್ ಬಯಸುತ್ತಾರೆ. ಆದರೆ, ಬಂಡವಾಳಶಾಹಿ ಜಗತ್ತಿನ ಒಬ್ಬ ನಾಯಕನು ತೆರಬೇಕಾದ ಬೆಲೆ ಹೀಗಿದೆ: "ನಾಯಕ" ದೇಶವು ಇತರ ಪ್ರಮುಖ ಬಂಡವಾಳಶಾಹಿ ದೇಶಗಳ ಮಹತ್ವಾಕಾಂಕ್ಷೆಗಳು ಈಡೇರುವಂತಾಗಲು ಮತ್ತು ಇಡೀ ಬಂಡವಾಳಶಾಹಿ ಜಗತ್ತು ಬಿಕ್ಕಟ್ಟಿನಲ್ಲಿ ಮುಳುಗುವುದನ್ನು ತಡೆಯುವ ಸಲುವಾಗಿ ಅವುಗಳ ಜೊತೆಗೆ ವ್ಯಾಪಾರ ಕೊರತೆಯನ್ನು ಸಹಿಸಿಕೊಳ್ಳಬೇಕಾಗುತ್ತದೆ. ತನ್ನ "ನಾಯಕತ್ವ"ದ ವರ್ಷಗಳಲ್ಲಿ ಬ್ರಿಟನ್ ಮಾಡಿದ್ದು ಇದನ್ನೇ ಮತ್ತು ಆ ನಂತರದ ಅವಧಿಯಲ್ಲಿ ಅಮೆರಿಕ ಮಾಡಿದ್ದೂ ಇದನ್ನೇ. ಬ್ರಿಟನ್ ಹಾಗೆ ಮಾಡುತ್ತಿದ್ದಾಗ ಅದು ಯುಎಸ್ ಮತ್ತು ಯುರೋಪಿನ ಪ್ರಮುಖ ದೇಶಗಳಿಗೆ ಹೋಲಿಸಿದರೆ ವ್ಯಾಪಾರ ಕೊರತೆಯನ್ನು ಎದುರಿಸುತ್ತಿತ್ತು. ಈ ಕೊರತೆಯಿಂದ ಬ್ರಿಟನ್‌ಗೆ ಹಾನಿಯಾಗಲಿಲ್ಲ ಏಕೆಂದರೆ ಅದು ತನ್ನ ವಸಾಹತುಗಳಿಂದ ಅದೃಶ್ಯ ಗಳಿಕೆಯಲ್ಲಿ ಮಿಗುತಾಯ ತನ್ನ ಬಳಿಯಿದೆ ಎಂದು ಹೇಳೊಕೊಂಡು ಈ ಕೊರತೆಯನ್ನು ಸಮತೋಲನಗೊಳಿಸಿಕೊಂಡಿತು. ಈ ಮಿಗುತಾಯದಲ್ಲಿನ ಬಹುಪಾಲು ಕೃತಕ ಸೃಷ್ಟಿಯಾಗಿತ್ತು. ತಾನು ಗೆದ್ದ ವಸಾಹತುಗಳಿಂದ "ಕಿತ್ತುಕೊಂಡ"ದ್ದಾಗಿತ್ತು, ಇದನ್ನು ಬಳಸಿಕೊಂಡು ಅದು ಪ್ರಮುಖ ಬಂಡವಾಳಶಾಹಿ ದೇಶಗಳೊಂದಿಗಿನ ತನ್ನ ಕೊರತೆಯನ್ನು ಇತ್ಯರ್ಥಪಡಿಸಿಕೊಂಡಿತು.

ಆದರೆ, ಯುದ್ಧಾನಂತರದ ಯುಎಸ್ ಇದೇ ರೀತಿಯ "ಅದೃಷ್ಟ" ಹೊಂದಿಲ್ಲ. ಇತರ ಪ್ರಮುಖ ದೇಶಗಳೊಂದಿಗೆ ಸತತವಾಗಿ ವ್ಯಾಪಾರ ಕೊರತೆಯನ್ನು ಅನುಭವಿಸಿದ ಪರಿಣಾಮವಾಗಿ ಅದು ಸಾಲದಲ್ಲಿ ಆಳವಾಗಿ ಮುಳುಗಿದೆ. ಇನ್ನೂ ಹೆಚ್ಚು ಸಾಲದ ಸುಳಿಗೆ ಸಿಲುಕುವುದನ್ನು ತಪ್ಪಿಸುವ ಪ್ರಯತ್ನವು, ಟ್ರಂಪ್ ಅವರ "ಅಮೆರಿಕವನ್ನು ಮತ್ತೊಮ್ಮೆ ಮಹಾನ್ ಆಗಿಸಿ"(ಮಗ) ಯೋಜನೆಯು ಭಾಗವಾಗಿದೆ. ಅದಕ್ಕಾಗಿ ಅವರು ತಮ್ಮ ಎಲ್ಲಾ ವ್ಯಾಪಾರ ಪಾಲುದಾರರ ಮೇಲೆ ಸುಂಕಗಳನ್ನು ವಿಧಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಆದರೆ, ಸರ್ಕಾರಗಳು ತಮ್ಮ ವೆಚ್ಚಗಳನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ವಿತ್ತೀಯ ಕೊರತೆಗಳನ್ನು ಹೆಚ್ಚಿಸಿಕೊಳ್ಳದಂತೆ ಮತ್ತು ಶ್ರೀಮಂತರ ಮೇಲೆ ತೆರಿಗೆ ವಿಧಿಸುವುದನ್ನು ತಡೆಯುವಂತೆ ಜಾಗತಿಕ ಹಣಕಾಸು ಬಂಡವಾಳವು ಎಲ್ಲೆಡೆಯೂ ಒತ್ತಡ ಹೇರುತ್ತಿರುವ ಸನ್ನಿವೇಶದಲ್ಲಿ ಬಂಡವಾಳಶಾಹಿ ಜಗತ್ತಿನ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆ ವಿಸ್ತರಿಸುತ್ತಿಲ್ಲ. ಇದು ಬಂಡವಾಳಶಾಹಿಯ ಜಾಗತಿಕ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತದೆ. ಈ ಬಿಕ್ಕಟ್ಟಿನ ಭಾರವನ್ನು ಅಮೆರಿಕವನ್ನು ಹೊರತುಪಡಿಸಿ ಉಳಿದ ಬಂಡವಾಳಶಾಹಿ ದೇಶಗಳು ಹೊರಬೇಕಾಗುತ್ತದೆ.

ಸಾಮ್ರಾಜ್ಯಶಾಹಿಯ ಪುನಶ್ಚೇತನಕ್ಕಾಗಿ ಟ್ರಂಪ್ ಅನುಸರಿಸುವ ಕಾರ್ಯತಂತ್ರವು ಉಂಡೂ ಹೋಗಬೇಕು, ಕೊಂಡೂ ಹೋಗಬೇಕು ಎನ್ನುವ ರೀತಿಯದ್ದಾಗಿದೆ. ಇತರ ದೇಶಗಳ ಮೇಲೆ ಸುಂಕಗಳನ್ನು ಹೇರುತ್ತಿರುವ ಹೊತ್ತಿನಲ್ಲೇ ಉಳಿದ ದೇಶಗಳನ್ನು ಯುಎಸ್ ನಾಯಕತ್ವದ ಅಡಿಗೆ ತರುವ ಅವರ ಪ್ರಯತ್ನವು "ನಿನ್ನ ನೆರೆಯವ ಹಾಳಾಗಲಿ" ಎನ್ನುವ ನೀತಿಯಾಗುತ್ತದೆ. ಇತರ ದೇಶಗಳ ಮಾರುಕಟ್ಟೆಗಳನ್ನು ಕಸಿದುಕೊಳ್ಳುವ ಮೂಲಕ ತನ್ನ ಸ್ವಂತ ಮಾರುಕಟ್ಟೆಯನ್ನು ಕಾಪಾಡಿಕೊಳ್ಳಲು ಅನುಸರಿಸುವ ಈ ನೀತಿಯು ಮೂಲಭೂತವಾಗಿ ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ಮರುಸ್ಥಾಪಿಸುವ ಯೋಜನೆಗೆ ಪ್ರತಿಕೂಲವಾಗಿದೆ. ಸಾಮ್ರಾಜ್ಯಶಾಹಿಯನ್ನು ಒಂದು ಮೂಲೆಗೆ ಬಿಡೆನ್ ತಳ್ಳಿದ್ದರೆ, ಆ ಮೂಲೆಯಿಂದ ಅದನ್ನು ಟ್ರಂಪ್ ಹೊರತೆಗೆದರೆ ಅದು ಇನ್ನೊಂದು ಮೂಲೆಗೆ ತಳ್ಳಲ್ಪಡುತ್ತದೆ.



ಶುಭಾಶಯ ಹೇಳಲಾರೆ

ಮಗಳೇ ಸೌಜನ್ಯ
ಇಂದು ವಿಶ್ವ ಮಹಿಳಾ ದಿನಾಚರಣೆ
ಇದು ವಿಶ್ವ ಸಂಸ್ಥೆಯ ಘೋಷಣೆ.
ಹಾಗೆಯೇ ಸನಾತನಿಗಳು ಹೇಳುತ್ತಾರೆ
ಎಲ್ಲಿ ಮಹಿಳೆ ಪೂಜಿಸಲ್ಪಡುತ್ತಾಳೋ
ಅಲ್ಲಿ ಧರ್ಮ ಪಾಲಿತವಾಗುತ್ತದೆ.

ಯಾವ ಧರ್ಮದ ದೀಪ
ಎಲ್ಲಿ ಬೆಳಗಿದರೇನು
ದೀಪದ ಕೆಳಗೆ ಕತ್ತಲು
ದೀಪವೇ ಬೆಳಗದ ಧರ್ಮದ ಬೀಡಲಿ
ಯಾವ ನಾರಿಗೂ ಇಲ್ಲ ಪೂಜ್ಯಂತೇ
ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ
ಹೆಣ್ಣುಗಳ ಕಣ್ಣೀರಲ್ಲಿ
ತೇಲಿವೆ ಮನೆಮಾರು ತೆಪ್ಪ.

ನಿನ್ನ ತಿಂದು ಕೊಂದ ಮಕ್ಕಳ
ಅಪ್ಪಂದಿರಿಗೆ ಕೂಗಿ ಕೇಳು ಕಂದಾ
ಅಂಥಾ ಮಕ್ಕಳ ಬುದ್ಧಿಗೆ
ನಿಮ್ಮ ಬದುಕಿನ ಲದ್ದಿ ತಿನ್ನಿಸಿದ್ದು ಯಾಕೆ?

ಇಲ್ಲಿ ಸತ್ಯ ಸತ್ತಿದೆ ನ್ಯಾಯ ನಾರಿದೆ
ದೂರು ಕೇಳುವವರಾರೂ ಇಲ್ಲ ಮಗಳೇ
ಎಲ್ಲ ಶ್ರೀರಾಮಚಂದ್ರರೇ
ಹೆಚ್ಚೆಂದರೆ ಸುಮಿತ್ರಾತ್ಮಜರೇ.

ಕ್ಷಮಿಸು ಮಗಳೇ
ಇಂದು ವಿಶ್ವ ಮಹಿಳಾ ದಿನಾಚರಣೆ
ನಾನು ನಿನಗೆ
ಶುಭಾಶಯ ಹೇಳಲಾರೆ ಮಗಳೇ.

-ಎಸ್.ಜಿ.ಸಿದ್ದರಾಮಯ್ಯ

ಎರಡು ವಾರದ ನಂತರ ಸಾಲಗಾರ ಮನೆ ಬಾಗಿಲಿಗೆ ವಸೂಲಿಗಾಗಿ ಬಂದು ಕೂರುವನು. ಕಟ್ಟದೆ ಇದ್ದರೆ ನಾನಾ ನಮೂನೆಯ ಕಿರುಕುಳ, ಲೈಂಗಿಕ ನಿಂದನೆ, ಲಾಡ್ಜಿಗೆ ಕರೆಯುವುದು ಇತ್ಯಾದಿ ಆರಂಭ.ಮಹಿಳೆಯು ಮನೆ ಒಳಗಿನ ಗಂಡಸರ ಒತ್ತಡದಿಂದ ಸಾಲ ಪಡೆಯುವುದು ಮತ್ತು ಸಾಲ ಕಟ್ಟದೇ ಇದ್ದಾಗ ಮನೆ ಹೊರಗಿನ ಗಂಡಸರ ಒತ್ತಡದಲ್ಲಿ ನಲುಗಿ ಹೋಗುವುದು. ಇದು ಗರಗಸದಂತಹ ಸಂಕಟದಲ್ಲಿ ಅನೇಕ ಮಹಿಳೆಯರು ಸಾವಿನ ದಾರಿ ನೋಡಿಕೊಂಡಿದ್ದಾರೆ. ಕುಟುಂಬ ಸಹಿತ ಊರು ಬಿಡುವ ಒತ್ತಡಕ್ಕೆ ಒಳಗಾಗಿದ್ದಾರೆ. ಸರಕಾರ ಮಾತ್ರ ಇವರನ್ನು ಸಾಲದಿಂದ ಮುಕ್ತ ಮಾಡುವ ಬದಲಿಗೆ ಕಿರುಕುಳ ತಪ್ಪಿಸಲು ಸುಗ್ರಿವಾಜ್ಞೆ ತಂದಿದೆ. ಹೀಗೆ ಸಾಲದ ಶೂಲಕ್ಕೆ ಬಹುದೊಡ್ಡ ಸಂಖ್ಯೆಯ ಮಹಿಳೆಯರು ಮಾನಸಿಕ ರೋಗಿಗಳಾಗುತ್ತಿದ್ದಾರೆ.

ಯುವಜನತೆಯು ನಿರುದ್ಯೋಗ ಎದುರಿಸುತ್ತಿದ್ದಾರೆ. ಸಣ್ಣ ವ್ಯಾಪಾರಿಗಳು ಮಾಲ್‌ಗಳ ಹಾವಳಿಯಿಂದ ಅಂಗಡಿಗಳನ್ನು ಮುಚ್ಚಿಕೊಂಡು ನಿರುದ್ಯೋಗದ ಸಾಲಿನಲ್ಲಿ ಸೇರಿದ್ದಾರೆ. ಇವರ ಮನೆಯ ಮಹಿಳೆಯರು ಡಬಲ್ ಹಿಂಸೆಗೆ ಒಳಗಾಗುತ್ತಿದ್ದಾರೆ. ನಿರುದ್ಯೋಗ ಮತ್ತು ಸಾಲ ಎರಡೂ ಶೂಲಗಳಾಗಿ ಮಾರ್ಪಟ್ಟಿವೆ. ಸರಕಾರವು ಉದ್ಯೋಗ ಸೃಷ್ಟಿಯಲ್ಲಿ ಕಿಂಚಿತ್ತೂ ಆಸಕ್ತಿ ಹೊಂದಿಲ್ಲ.

ಆದರೆ ಸಮಾಜವನ್ನು ಮಾತ್ರ ಕೋಮುವಾದದ ಛಾಯೆಯಲ್ಲಿ ಇನ್ನೂ ಹಿಂದಕ್ಕೆ ತಳ್ಳಲಾಗುತ್ತಿದೆ. ಇದರಿಂದ ಜಾತಿ ತಾರತಮ್ಯದ ಭಾವನೆಯು ಬಲಗೊಳ್ಳುತ್ತಿದೆ. ಇದಕ್ಕಾಗಿ ಧಾರ್ಮಿಕ ಪರಿವೇಷದ ಮಠ ಪೀಠಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದೆ ಸಂದರ್ಭದಲ್ಲಿ ವರ್ಣ ವ್ಯವಸ್ಥೆಯ, ಮನುವಾದದ, ಬ್ರಾಹ್ಮಣಶಾಹಿಯ ವಿರುದ್ಧ ಹೋರಾಡಿದ ಚರಿತ್ರೆಯನ್ನು ಅಲ್ಲಗಳೆಯುವ ವಿಸ್ಮೃತಿಗೆ ತಳ್ಳುವ ಪ್ರಕ್ರಿಯೆಯು ಜಾರಿಯಲ್ಲಿದೆ. ಜಾತಿ ತಾರತಮ್ಯದ ಜಾಡ್ಯವು ಯುವಜನತೆಯ ಆಯ್ಕೆಯ ಹಕ್ಕನ್ನು ಹೊಸಕಿ ಹಾಕುವಲ್ಲಿ ತಲ್ಲೀನವಾಗಿದೆ. ಅವಮರ್ಯಾದಾ ಹತ್ಯೆಗಳು ಹೆಚ್ಚುತ್ತಿವೆ. ಇದರಿಂದ ಯುವಜನತೆಯು ತಲ್ಲಣಿಸುತ್ತಿದ್ದಾರೆ. ಅದರಲ್ಲಿ ಯುವತಿಯರು ನಿರ್ಣಯ ಕೈಗೊಳ್ಳುವಲ್ಲಿ ಹಿಂಜರಿಕೆ ಇದೆ. ಭಾರತದ ಪರಂಪರೆಯು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿದೆ. ಆದರೆ ಕೋಮುವಾದವು ಸೌಹಾರ್ದ ಪರಂಪರೆಯ ವೈವಿಧ್ಯತೆಯನ್ನು ಹೊಸಕಿ ಹಾಕಲು ಅವಮರ್ಯಾದಾ ಹತ್ಯೆಗಳನ್ನು ಪ್ರೇರೇಪಿಸುತ್ತಿದೆ. ಪುತ್ರ ಫಲಾಪೇಕ್ಷೆಯನ್ನು ಗಟ್ಟಿಗೊಳಿಸಲಾಗುತ್ತಿದೆ. ದೇವದಾಸಿ ಪದ್ಧತಿಯನ್ನು ಬೇರೆ ಬೇರೆ ಸ್ವರೂಪದಲ್ಲಿ ಜೀವಂತ ಇರುವಂತೆ ನೋಡಿಕೊಳ್ಳುವ ಶಕ್ತಿಯು ಕ್ರಿಯಾಶೀಲವಾಗಿದೆ. ಆರ್ಥಿಕ ಬಿಕ್ಕಟ್ಟು ಒಂದೇ ಕಾರಣವಲ್ಲದೆ ಪಾಳೇಗಾರಿ ಶಕ್ತಿಗಳು ದಲಿತ ಹಿಂದುಳಿದ ಮಹಿಳೆಯರನ್ನು ದೇವದಾಸಿಯಾಗಿಸುವ ಪ್ರಕ್ರಿಯೆಯೂ ಕಾರಣವಾಗಿದೆ.

ಕಳೆದ ಹದಿನೈದು ವರ್ಷಗಳಿಂದ ಮುಸ್ಲಿಂ ಮಹಿಳೆಯರು ಭಯಗ್ರಸ್ಥ ತಲ್ಲಣದ ಮನಸ್ಥಿತಿ ಹೊಂದಿದ್ದಾರೆ. ಇದಕ್ಕೆ ಹಿಂದೂತ್ವ ಕೋಮುವಾದಿಗಳ ಫ್ಯಾಸಿಸ್ಟ್ ಲಕ್ಷಣದಂತಹ ಧಾಳಿಗಳು ಇವೆಯಲ್ಲ ಅದು ಕಾರಣವಾಗಿದೆ. ಈ ಮಹಿಳೆಯರು ಒಳಗಣದಿಂದ ಮೂಲಭೂತವಾದದ ಒತ್ತಡ ಎದುರಿಸಬೇಕು. ಹೊರಗಣದಿಂದ ಕೋಮುವಾದಿಗಳ ಷಡ್ಯಂತ್ರದ ಅಪಾಯ ಎದುರಿಸುವ ಗಾಬರಿಗೆ ಒಳಗಾಗಬೇಕು. ಯಾವಾಗ ಬೇಕಾದರೂ ಏನಾದರೂ ಘಟಿಸಿದರೆ ಹೇಗೆ ಎಂಬ ಆತಂಕ ಯಾವತ್ತೂ ಮನೆ ಮಾಡಿರುತ್ತದೆ. ಇದು ಒಟ್ಟು ಮಹಿಳಾ ಚಳುವಳಿಯ ಮುಂದೆ ಸವಾಲೇ ಆಗಿದೆ. ನೊಂದ, ಬೆಂದ ತಲ್ಲಣದ ಸಮುದಾಯದ ಮಹಿಳೆಯರನ್ನು ತಲುಪುವ, ಅವರ ಮನಸಿನೊಂದಿಗೆ ಸೇತು ಹೆಣೆಯುವ, ರಾಜಕೀಯ ಪ್ರಜ್ಞೆ ಹೆಚ್ಚಿಸುವ ದಿಕ್ಕಿನಲ್ಲಿ ಸಂಘಟನಾತ್ಮಕ ಚಟುವಟಿಕೆ ಹಮ್ಮಿಕೊಳ್ಳುವ ಅಗತ್ಯಗಳು ತುರ್ತುಗಳು ಎಂದಿಗಿಂತ ಹೆಚ್ಚಿವೆ.

ಚರಿತ್ರೆಯ ಸಂಘರ್ಷದ ಹಾದಿಯಲ್ಲಿ ದಣಿಯದೆ, ಹಿಮ್ಮೆಟ್ಟದೆ, ವಿಚಲಿತಳಾಗದೆ ಧೀರತೆಯಿಂದ ಹೆಜ್ಜೆ ಹಾಕಿದ ಮಹಿಳಾ ಲೋಕವು ತಮ್ಮಂತಹ ಶೋಷಣೆಗೆ ಒಳಗಾದ ಎಲ್ಲ ಸಮುದಾಯವನ್ನೂ, ಕಾರ್ಮಿಕ, ರೈತ, ದಲಿತ, ಆದಿವಾಸಿ, ದಮನಿತ ಲೋಕವನ್ನು ಒಳಗೊಂಡು ಐಕ್ಯತೆಯಿಂದ ಮುನ್ನಡೆಯಬೇಕಾದ ಅಗತ್ಯ ಇದೆ. ಸಮಾಜವನ್ನು ಲಿಂಗ ಸಂವೇದನಾಶೀಲಗೊಳಿಸುವ ದಿಕ್ಕಿನಲ್ಲಿ ಹೆಜ್ಜೆಗಳು ವೇಗಗೊಳ್ಳಬೇಕಿದೆ. ವೈಜ್ಞಾನಿಕ ವೈಚಾರಿಕೆ ಅರಿವು ಬಾರದೆ ಸ್ತ್ರೀ ಅಸ್ಮಿತೆಯು ಅರ್ಥಪೂರ್ಣವಾಗದು. ಕೋಮುವಾದಿ ಮತ್ತು ಕಾರ್ಪೋರೆಟ್ ಸಖ್ಯತೆಯು ಹುಟ್ಟು ಹಾಕುವ ಸಂಕಟಗಳು, ಬಡತನ, ನಿರುದ್ಯೋಗ, ಸಾಲ, ದೌರ್ಜನ್ಯ, ಅತ್ಯಾಚಾರ ಇತ್ಯಾದಿಗಳು ಪ್ರತಿ ದಿನವು ಎದಿರಿಸಲೇಬೇಕಾದ ಸವಾಲುಗಳಾಗಿ ಬರುತ್ತಿವೆ. ಇದೇ ಸಂದರ್ಭದಲ್ಲಿ ಬಲಪಂಥೀಯ ರಾಜಕೀಯ ಶಕ್ತಿಗಳು ಶಾಸನ ಸಂಸತ್ತಿನಲ್ಲಿ ಮಹಿಳೆಯರು ನೀತಿ ನಿರುಪಣೆಯಲ್ಲಿ ಭಾಗವಹಿಸುವಿಕೆಯನ್ನು ತಡೆಯುತ್ತಿವೆ. ಈ ಸಂಗತಿಯು ಹಿನ್ನೆಲೆಗೆ ಸರಿಯುವಂತೆ ನೋಡಿಕೊಳ್ಳಲಾಗುತ್ತಿದೆ. ಮಹಿಳೆಯರ ರಾಜಕೀಯ ಪ್ರವೇಶವನ್ನು ಅರ್ಥಪೂರ್ಣಗೊಳ್ಳದಂತೆ ಮತ್ತು ರಾಜಕೀಯ ಪ್ರಜ್ಞೆ ಬಾರದಂತೆ ಷಡ್ಯಂತ್ರ ಹೆಣೆಯಲಾಗುತ್ತಿದೆ. ಈ ಎಲ್ಲ ಸವಾಲುಗಳು ಇಂದಿನ ಪ್ರಜ್ಞಾವಂತ ಜನತೆಯ ಮುಂದಿದೆ. ಶ್ರಮಿಕ ವರ್ಗವು ಅದರಲ್ಲಿ ಸಮಸ್ತ ಮಹಿಳಾ ಜಗತ್ತು ವೈಯಕ್ತಿಕ ತಾಯ್ತನದ ನೆಲೆಯಿಂದ ಜಾಗತಿಕ ತಾಯ್ತನದ ನೆಲೆಗೆ ಚಿಂತನಾ ವಿಧಾನ ಮತ್ತು ಕಣ್ಣೋಟ ವಿಸ್ತರಿಸಿಕೊಳ್ಳಬೇಕಿದೆ ಸಂಘಟಿತ ಹೋರಾಟಗಳು ಇನ್ನಷ್ಟು ತೀವ್ರಗೊಳ್ಳಬೇಕಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE March 10-16, 2025 Price: Rs. 10/- Date of Publication: 07 March 2025 RNI No. KARKAN /2006/17926 Posted on 12-03-2025
Posted at BG PSO, BG - 560026 **Posted at Periodical Rate -** Rs. 2

ಅನ್ಯಾಯವನ್ನು ಪ್ರೀತಿಯಿಂದ ಎದುರಿಸುತ್ತೇವೆ ಎಂದಿದ್ದಕ್ಕೆ ಎಫ್ಐಆರ್?

ವೇದರಾಜ್ ಎನ್.ಕೆ.

ಇದು ಅಮೃತ ಕಾಲ

ಗುಜರಾತ್ ಪೊಲೀಸ್ ತನ್ನ ಮೇಲೆ ಹಾಕಿರುವ ಎಫ್ಐಆರ್ ಅನ್ನು ವಜಾ ಮಾಡಬೇಕು ಎಂದು ಕಾಂಗ್ರೆಸ್ ಸಂಸದ ಮತ್ತು ಆ ಪಕ್ಷದ ಅಲ್ಪಸಂಖ್ಯಾತ ಸೆಲ್‌ನ ರಾಷ್ಟ್ರೀಯ ಅಧ್ಯಕ್ಷ ಇಮ್ರಾನ್ ಪ್ರತಾಪಗಡೀ ಸುಪ್ರಿಂ ಕೋರ್ಟಿನಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯ ವೇಳೆಯಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಓಕ್ ಮತ್ತು ಉಜ್ವಲ್ ಬೂಯಾನ್‌ರವರ ನ್ಯಾಯಪೀಠ ಕೇಳಿದ ಪ್ರಶ್ನೆ ಇದು. (ಲೈವ್ ಲಾ, ಮಾರ್ಚ್3)

"ಅಯ್ ಖೂನ್‌ಕೇ ಪ್ಯಾಸೋಂ ಬಾತ್ ಸುನೋ" (ರಕ್ತಪಿಪಾಸುಗಳೇ ಮಾತು ಕೇಳಿ) ಎಂಬ ಉರ್ದು ಕವನವನ್ನು ಹಾಡುವ ಹಿನ್ನೆಲೆಯ ಒಂದು ವಿಡಿಯೋ ಕ್ಲಿಪ್ಪನ್ನು ಇಮ್ರಾನ್ ಪ್ರತಾಪಗಡಿ ತನ್ನ ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದಕ್ಕೆ, ಜನವರಿ 3 ರಂದು ಗುಜರಾತಿನ ಜಾಮ್ನಗರ್ ಪೋಲೀಸರು ಮೇಲೆ ಹೇಳಿದಂತೆ ಎಫ್ಐಆರ್ ಹಾಕಿ ಪ್ರಕರಣವನ್ನು ದಾಖಲಿಸಿದ್ದರು. ಗುಜರಾತ್ ಹೈಕೋರ್ಟ್ ಇದನ್ನು ರದ್ದು ಮಾಡಲು ನಿರಾಕರಿಸಿದ್ದರಿಂದ ಅವರು ಸುಪ್ರಿಂ ಕೋರ್ಟ್ ಮೊರೆ ಹೋಗಿದ್ದಾರೆ.

ಈ ಕವನ ವಾಸ್ತವವಾಗಿ ಅಹಿಂಸೆಯ ಸಂದೇಶವನ್ನು ನೀಡುತ್ತದೆ, ಇದು ಧರ್ಮಕ್ಕೆ ಸಂಬಂಧಪಟ್ಟದ್ದೂ ಅಲ್ಲ, ಯಾವುದೇ ರಾಷ್ಟ್ರ-ವಿರೋಧಿ ಚಟುವಟಿಕೆಗೂ ಸಂಬಂಧಪಟ್ಟದ್ದಲ್ಲ. ಪೋಲೀಸರು ಸೂಕ್ಷ್ಮತೆಯ ಅಭಾವವನ್ನು ತೋರಿಸಿಕೊಂಡಿದ್ದಾರೆ ಎಂದು ನ್ಯಾಯಪೀಠ ಟಿಪ್ಪಣಿ ಮಾಡಿದಾಗ, ಗುಜರಾತ್ ಪೋಲೀಸ್ ಪರ ವಕೀಲ ಮತ್ತು ಭಾರತದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ಜನ ಈ ಕವನದ ಅರ್ಥವನ್ನು ಭಿನ್ನವಾಗಿ ಅರ್ಥಮಾಡಿಕೊಂಡಿರಬಹುದು ಎಂದರಂತೆ.

ಇದಕ್ಕೆ ಮೊದಲು ಅವರು ಈ ಕವನ ಫೈಜ್ (ಉರ್ದು ಭಾಷೆಯ ಒಬ್ಬ ಶ್ರೇಷ್ಠ ಕವಿ)ರವರದ್ದೇನಲ್ಲ, ಹೆಚ್ಚೆಂದರೆ 'ಸಡಕ್ ಛಾಪ್', ಅಂದರೆ ಬೀದಿ ಕವನ. ಇಮ್ರಾನ್‌ರನ್ನು ಮಹಾತ್ಮ ಗಾಂಧಿಯೊಂದಿಗೆ ಹೋಲಿಸಬೇಡಿ ಎಂದೂ ಅವರು ನ್ಯಾಯಪೀಠವನ್ನು ಆಗ್ರಹಿಸಿದ್ದಾಗಿ ವರದಿಯಾಗಿದೆ. (ದಿ ಹಿಂದು, ಮಾ.4)

"ಇದೀಗ ಸಮಸ್ಯೆ"!

ಭಾರತ ಸರಕಾರದ ಅತ್ಯುಚ್ಚ ನ್ಯಾಯವಾದಿಯ ಹುದ್ದೆಯಲ್ಲಿರುವವರ ಇಂತಹ ಅಭಿಪ್ರಾಯಗಳಿಗೆ ಪ್ರತಿಕ್ರಿಯಿಸುತ್ತ ನ್ಯಾಯಮೂರ್ತಿ ಓಕ್ 'ಇದೀಗ ಸಮಸ್ಯೆ' ಎಂದು ಉದ್ಗರಿಸಿದರು. "ಈಗ ಯಾರಿಗೂ ಸೃಜನಶೀಲತೆಯ ಬಗ್ಗೆ ಗೌರವವಿಲ್ಲ. ನೀವು (ಈ ಕವನವನ್ನು) ಸರಳವಾಗಿ ಓದಿದರೆ, ಅದು, ಅನ್ಯಾಯವನ್ನು ಸಹಿಸಿಕೊಳ್ಳಬೇಕಾಗಿ ಬಂದರೂ, ಅದನ್ನು ಪ್ರೀತಿಯಿಂದ ಸಹಿಸಿಕೊಳ್ಳಿ ಎನ್ನುತ್ತದೆ. ರಕ್ತಪಿಪಾಸುಗಳೇ ಮಾತು ಕೇಳಿ- ನ್ಯಾಯಕ್ಕಾಗಿ ಹೋರಾಟದಲ್ಲಿ ಅನ್ಯಾಯವನ್ನು ಎದುರಿಸಬೇಕಾಗಿ ಬಂದರೂ ನಾವು ಅನ್ಯಾಯವನ್ನು ಪ್ರೀತಿಯಿಂದ ಎದುರಿಸುತ್ತೇವೆ ಎಂಬುದೇ ಈ ಕವನದ ಅರ್ಥ" ಎಂದು ನ್ಯಾಯಮೂರ್ತಿ ಓಕ್ ಹೇಳಿದರು.

ಮುಂದುವರೆದು "ಪೊಲೀಸರು ತುಸು ಸೂಕ್ಷ್ಮತೆಯನ್ನು ತೋರಬೇಕು. ಏನಿಲ್ಲೆಂದರೂ ಅವರು ಓದಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು. ಈ ಕವನದ ಅರ್ಥವೇನು ಎಂದು ತಿಳಿದುಕೊಳ್ಳಲು ಪ್ರಯತ್ನಿಸಬೇಕಾಗಿತ್ತು. ಸಂವಿಧಾನದ 75 ವರ್ಷಗಳ ಅಸ್ತಿತ್ವದ ನಂತರ ಈಗಲಾದರೂ ಪೋಲೀಸರು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅರ್ಥ ಮಾಡಿಕೊಳ್ಳಬೇಕು" ಎಂದು ನ್ಯಾಯಮೂರ್ತಿಗಳು ಹೇಳಿದರು.

ಈ ಸಂದರ್ಭದಲ್ಲಿ ಇಮ್ರಾನ್ ಪ್ರತಾಪಗಡಿಯವರ ಪರ ವಕಾಲತು ವಹಿಸಿರುವ ಹಿರಿಯ ವಕೀಲ ಕಪಿಲ್ ಸಿಬಲ್ "ಹೈಕೋರ್ಟ್ ನ್ಯಾಯಾಧೀಶರು ಏನು ಹೇಳಿದ್ದಾರೆ ನೋಡಿ. ಈ ಬಗ್ಗೆಯೂ ಮಾನ್ಯ ನ್ಯಾಯಮೂರ್ತಿಗಳು ಏನಾದರೂ ಹೇಳಬೇಕು" ಎನ್ನುತ್ತ ಹೈಕೋರ್ಟ್ ಕೂಡ ಸೂಕ್ಷ್ಮತೆಯನ್ನು ತೋರಬೇಕಾಗಿತ್ತು ಎಂದು ಸೂಚಿಸಿದರು.

> **"ನ್ಯಾಯಕ್ಕಾಗಿ ಹೋರಾಟದಲ್ಲಿ ಅನ್ಯಾಯವನ್ನು ಎದುರಿಸಬೇಕಾಗಿ ಬಂದರೂ ನಾವು ಅನ್ಯಾಯವನ್ನು ಪ್ರೀತಿಯಿಂದ ಎದುರಿಸುತ್ತೇವೆ" ಎನ್ನುವ ಕವನಕ್ಕಾಗಿ ಅದನ್ನು ಉಲ್ಲೇಖಿಸಿದವರ ಮೇಲೆ ಗುಜರಾತ್ ಪೊಲೀಸ್ ಹೇಗೆ ತಾನೇ ಜಾತಿ ಮತ್ತು ಧರ್ಮದ ಆಧಾರದಲ್ಲಿ ವಿವಿಧ ಜನಸಮೂಹಗಳ ನಡುವೆ ವೈರತ್ವ ಪ್ರಚೋದಿಸುತ್ತಿದ್ದಾರೆ ಎಂದು ಎಫ್ಐಆರ್ ಹಾಕಲು ಸಾಧ್ಯ?-ಇದು ದೇಶದ ಸರ್ವೋಚ್ಚ ನ್ಯಾಯಾಲಯ ಕೇಳಿರುವ ಪ್ರಶ್ನೆ.**



ಸುಪ್ರಿಂ ಕೋರ್ಟ್ ಪೀಠ ಕೂಡ ಈ ಮೊದಲೇ, ಪೊಲೀಸರೂ ಮತ್ತು ಹೈಕೋರ್ಟ್ ಕೂಡ ಕವನದ ನಿಜ ಅರ್ಥವನ್ನು ಮೆಚ್ಚಿಕೊಳ್ಳಲಿಲ್ಲ ಎಂದು ಹೇಳಿತ್ತು. ಈ ಕುರಿತ ತನ್ನ ತೀರ್ಪನ್ನು ಕಾಯ್ದಿಡುತ್ತ, ಈ ಎಫ್ಐಆರ್ ಅಡಿಯಲ್ಲಿ ಅದುವರೆಗೆ ಯಾವುದೇ ಮುಂದಿನ ಕ್ರಮಗಳನ್ನು ಕೈಗೊಳ್ಳಬಾರದು ಎಂದು ಆದೇಶಿಸಿತು.

'ಸಿಂಹಾಸನಕ್ಕೆ ಅಪಾಯ'!

ತನ್ನ ಮೇಲಿನ ಎಫ್ಐಆರ್ ಅನ್ನು ರದ್ದು ಮಾಡಬೇಕು ಎಂದು ಕೇಳಿ ಇಮ್ರಾನ್ ಪ್ರತಾಪಗಡಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಗುಜರಾತ್ ಹೈಕೋರ್ಟ್‌ನ ನ್ಯಾಯಮೂರ್ತಿ ಸಂದೀಪ ಎನ್. ಭಟ್ಟ್ "ಕವನದ ದಾಟಿಯನ್ನು ನೋಡಿದರೆ, ಅದು ಖಂಡಿತವಾಗಿಯೂ ಸಿಂಹಾಸನದ ಬಗ್ಗೆ ಏನನ್ನೋ ಸೂಚಿಸುತ್ತದೆ. ಅವರ ಪೋಸ್ಟಿಗೆ ಇತರರಿಂದ ದೊರೆತ ಸ್ಪಂದನೆಗಳು ಅದನ್ನು ಸಾಮಾಜಿಕ ಸಾಮರಸ್ಯವನ್ನು ಕದಡುವ ರೀತಿಯಲ್ಲಿ ಹಾಕಲಾಗಿದೆ ಎಂಬುದನ್ನು ಸೂಚಿಸುತ್ತದೆ" ಎಂದು ತಮ್ಮ ಆದೇಶದಲ್ಲಿ ಹೇಳಿದ್ದರು. (ಡೆಕ್ಕನ್ ಹೆರಾಲ್ಡ್, ಜ.17)

ಇಲ್ಲಿ ಕವನದ ಆರಂಭದ ಕೆಲವು ಸಾಲುಗಳನ್ನು ನೋಡಬಹುದು:

ಅಯ್ ಖೂನ್‌ಕೇ ಪ್ಯಾಸೋಂ ಬಾತ್ ಸುನೊ
ಗರ್ ಹಕ್‌ಕೀ ಲಡಾಯಿ ಜುಲ್ಮ್ ಸಹೀ
ಹಮ್ ಜುಲ್ಮ್ ಸೆ ಇಶ್ಕ್ ನಿಭಾ ದೇಂಗೆ
ಗರ್ ಶಮ್ಮ-ಎ-ಗಿರ್ಯಾ ಆತಿಶ್ ಹೈ
ಹರ್ ರಾಹ್ ವೊ ಶಮ್ಮಾ ಜಲಾ ದೇಂಗೆ
ಗರ್ ಲಾಶ್ ಹಮಾರೇ ಅಪ್ನೋಂಕೀ
ಖತ್ರಾ ಹೈ ತುಮ್ಹಾರೇ ಮಸ್ನದ್ ಕಾ
ಉಸ್ ರಬ್‌ಕೀ ಕಸಮ್ ಹಂಸ್ತೇ-ಹಂಸ್ತೇ
ಇತ್ನೀ ಲಾಶ್ ದಫ್ನಾ ದೇಂಗೇ
ಅಯ್ ಖೂನ್‌ಕೇ ಪ್ಯಾಸೋಂ ಬಾತ್ ಸುನೊ
.. ..
ರಕ್ತಪಿಪಾಸುಗಳೇ, ಮಾತ ಕೇಳಿ!
ನ್ಯಾಯಕ್ಕಾಗಿ ಹೋರಾಟ ಅಪರಾಧವಾದರೆ,
ನಾವು ಪ್ರೀತಿಯಿಂದ ಅದನ್ನು ನಿಭಾಯಿಸುತ್ತೇವೆ.
ಮೇಣದ ದೀಪದ ಹನಿಗಳು ಜ್ವಾಲೆಯಾದರೆ,
ಪ್ರತಿ ಬೀದಿಯಲ್ಲೂ ದೀಪ ಹಚ್ಚುತ್ತೇವೆ
ನಮ್ಮ ಪ್ರೀತಿಪಾತ್ರರ ಶವಗಳಿಂದ
ನಿಮ್ಮ ಸಿಂಹಾಸನಕ್ಕೆ ಅಪಾಯ ಎನಿಸಿದರೆ
ದೇವರಾಣೆ, ನಗು ನಗುತ್ತಲೇ
ಅಷ್ಟೆಲ್ಲ ಶವಗಳನ್ನು ಹೂತು ಹಾಕುತ್ತೇವೆ
ರಕ್ತಪಿಪಾಸುಗಳೇ, ಮಾತ ಕೇಳಿ!.. .. .. ..

ಹೈಕೋರ್ಟಿನಲ್ಲಿ ಹಾಕಿದ ಅರ್ಜಿಯ ವಿಚಾರಣೆಯಲ್ಲಿ, ಈ ಕವನ ವೈರತ್ವವನ್ನು ಹುಟ್ಟುಹಾಕುವಂತದ್ದಲ್ಲ, ಪ್ರೀತಿಯ ಸಂದೇಶವನ್ನು ಸಾರುವಂತದ್ದು ಎಂದು ಅರ್ಜಿದಾರರ ಪರ ವಕೀಲರು ವಾದಿಸಿದರೆ, ಪಬ್ಲಿಕ್ ಪ್ರಾಸಿಕ್ಯೂಟರ್ (ಪೊಲಿಸ್ ಪರ ವಕೀಲರು) 'ನಿಮ್ಮ ಸಿಂಹಾಸನಕ್ಕೆ ಅಪಾಯ ಎನಿಸಿದರೆ' ಎಂಬ ಪದವನ್ನು ಉಲ್ಲೇಖಿಸುತ್ತ "ಕವನದ ಪದಗಳು ಸ್ಪಷ್ಟವಾಗಿ ರಾಜ್ಯದ ಸಿಂಹಾಸನದ ವಿರುದ್ಧ ಕ್ರೋಧ ಎಬ್ಬಿಸುವುದನ್ನು ಸೂಚಿಸುತ್ತದೆ, ಆದ್ದರಿಂದ ಮೇಲ್ನೋಟಕ್ಕೇ ಪ್ರಕರಣ ಕಾಣಬರುತ್ತದೆ" ಎಂದು ವಾದಿಸಿದರು.

ನ್ಯಾಯಮೂರ್ತಿ ಸಂದೀಪ ಭಟ್ಟರ ಮೇಲೆ ಹೇಳಿದ ಆದೇಶ ಅದನ್ನು ಎತ್ತಿ ಹಿಡಿದಂತೆ ಕಾಣುತ್ತದೆ.

ಪ್ರಜಾಪ್ರಭುತ್ವದಲ್ಲಿ ಸಿಂಹಾಸನದ ಮಾತು ಎಲ್ಲಿಂದ ಬರುತ್ತದೆ?

ಇಲ್ಲಿ ಸಂಕೇತ ಪಟ್ಟಭದ್ರರ ಕಡೆಗೆ ಎಂದು ಹೈಕೋರ್ಟ್ ನ್ಯಾಯಾಧೀಶರು ಸೂಕ್ಷ್ಮವಾಗಿ ಗಮನಿಸಬೇಕಾಗಿತ್ತು, ಆದ್ದರಿಂದಲೇ ಬಹುಶಃ ಕಪಿಲ್ ಸಿಬಾಲ್ ರವರು, ಸುಪ್ರಿಂ ಕೋರ್ಟ್ "..ಸಂವಿಧಾನದ 75 ವರ್ಷಗಳ ಅಸ್ತಿತ್ವದ ನಂತರ ಈಗಲಾದರೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅರ್ಥ ಮಾಡಿಕೊಳ್ಳಬೇಕು" ಎಂದು ಪೋಲೀಸರ ಬಗ್ಗೆ ಹೇಳಿದ್ದು ಗುಜರಾತಿನ ಈ ಹೈಕೋರ್ಟ್ ನ್ಯಾಯಾಧೀಶರಿಗೂ ಅನ್ವಯಿಸುತ್ತದೆ ಎಂದು ಸೂಚಿಸಿದ್ದಾರೆ.

ಇಲ್ಲಿ ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ, ವಿಚಾರಣೆ ವೇಳೆಯಲ್ಲಿ, ಈ ಕವನ ಸ್ವತಃ ಕವಿಗಳೂ ಆಗಿರುವ ಅರ್ಜಿದಾರರದ್ದೇ, ಅಲ್ಲವಾದರೆ ಬೇರೆ ಯಾರದ್ದು ಎಂದು ಅಫಿಡವಿಟ್ ಸಲ್ಲಿಸಬೇಕು ಎಂದು ಹೇಳಲಾಯಿತು. ಇದು ತನ್ನ ಕವನವಲ್ಲ, ಯಾರದ್ದಿರಬಹುದು ಎಂದು ತಿಳಿಯಲು ಪ್ರಯತ್ನ ಪಟ್ಟಿದ್ದೆ, ಆದರೆ ಸ್ಪಷ್ಟವಾಗಿ ತಿಳಿಯಲಿಲ್ಲ, ಫೈಜ್ ಅಹ್ಮದ್ ಫೈಜ್ ಅಥವ ಹಬೀಬ್ ಜಾಲಿಬ್ ರದ್ದು ಇರಬಹುದು ಎಂದು ಇಮ್ರಾನ್ ಪ್ರತಾಪಗಡಿ ತಮ್ಮ ಅಫಿಡವಿಟ್‌ನಲ್ಲಿ ತಿಳಿಸಿದ್ದರು.

ಎಲ್ಲರಿಗೂ ತಿಳಿದಿರುವಂತೆ ಫೈಜ್ ಅವಿಭಜಿತ ಭಾರತೀಯ ಉಪಖಂಡದ ಜನಪ್ರಿಯ ಕ್ರಾಂತಿಕಾರಿ ಕವಿ, ಪತ್ರಕರ್ತ, ಪಾಕಿಸ್ತಾನ ರಚನೆಯಾದ ನಂತರ ಅಲ್ಲಿಯೂ ಹಲವು ವರ್ಷಗಳ ಕಾಲ ಅವರನ್ನು ಆಳುವ ಮಂದಿ ಜೈಲಿಗಟ್ಟಿದ್ದರು; ಹಬೀಬ್ ಜಾಲಿಬ್ ಕೂಡ ನಂತರ ಪಾಕಿಸ್ತಾನದ ಇನ್ನೊಬ್ಬ ಜನಪ್ರಿಯ ಕ್ರಾಂತಿಕಾರಿ ಕವಿಯಾಗಿ ಪ್ರಸಿದ್ಧರಾಗಿರುವವರು, ಅದರಿಂದಾಗಿ ಅಲ್ಲಿಯ ಆಳುವ ಮಂದಿಯ ಕೋಪಕ್ಕೆ ಗುರಿಯಾದವರು.

ಇಲ್ಲಿ ಮತ್ತೊಂದು ಸಂಗತಿಯನ್ನೂ ನೆನಪಿಸಿಕೊಳ್ಳಬಹುದು. ಪಾಕಿಸ್ತಾನದ ಆಳರಸರನ್ನು ಹಲವು ಬಾರಿ ನಡುಗಿಸಿದ ಫೈಜ್‌ರವರ ಪ್ರಸಿದ್ಧ ಕವನ 'ಹಮ್ ದೇಖೇಂಗೇ'(ಕಂಡೇ ಕಾಣುವೆವು) ಇತ್ತೀಚೆಗೆ ಭಾರತದಲ್ಲಿಯೂ ಆಳುವವರನ್ನು ನಡುಗಿಸಿತ್ತು. ಅದರಲ್ಲಿಯೂ 'ಮಸ್ನದ್' ಅಂದರೆ 'ಸಿಂಹಾಸನ'ದ ಮಾತಿದೆ.

ತಿಳಿಮನದ ನಮ್ಮನು, ಮತಾಂಧರೊಲ್ಲದ ನಮ್ಮನು
ಸಿಂಹಾಸನದ ಮೇಲೆ ಕೂರಿಸುವರು
ಕಿರೀಟಗಳೆಲ್ಲ ಎಗರುವವು, ಗದ್ದುಗೆಗಳೆಲ್ಲ ಉರುಳುವವು

ಆದ್ದರಿಂದ 'ಸಿಂಹಾಸನಕ್ಕೆ ಅಪಾಯ' ಎಂಬುದು ಗುಜರಾತಿನ ಪೋಲೀಸರನ್ನು, ಮಾತ್ರವಲ್ಲ ನ್ಯಾಯಾಧೀಶರನ್ನೂ ಬಾಧಿಸಿರುವುದರಲ್ಲಿ ಆಶ್ಚರ್ಯವಿಲ್ಲ.

ಸರ್ವೋಚ್ಚ ನ್ಯಾಯಾಲಯದ ನ್ಯಾಯಪೀಠ ಹೇಳಿರುವಂತೆ

'ಇದೀಗ ಸಮಸ್ಯೆ'!

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**